
ಮಿಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 25 ಜೂನ್ 20, 2004 ಬೆಲೆ ರೂ. 3.00





ಪ್ರಧಾನಿಗಳೇ ಚೌಕಟ್ಟು ಮೀರದಿರಿ!





ಕಾವೇರಿ : ನೀರು ಬಿಡಿ... ನೀರು ಕೊಡಿ...

ವಾಗ್ವಾದ ಸಾಕು ಆಡಳಿತ ಬೇಕು

- ಬಿಜೆಪಿ : ವಿರೋಧ ಪಕ್ಷವೇ ?

'ಫಾರಿನ್ ಹೀಟ್ 9/11' ಬಿರುಗಾಳಿ ಎಬ್ಬಿಸಿದ ಚಿತ್ರ



- ಈ ಐಷಾರಾಮಕ್ಕೆ ಹಣ ಎಲ್ಲಿಂದ ?
- ಕರ್ನಾಟಕದ ಫಲಿತಾಂಶ : ಒಂದು ವಿಶ್ಲೇಷಣೆ
- ಒಂದು ಪ್ರತಿಗಾಮಿ ಶಾಸನದ ಕುರಿತು

ಕನಿಷ್ಠ ಕಾರ್ಯಕ್ರಮ ರೂಪಿಸಿ - ಆಡಳಿತಕ್ಕೆ ಇಳಿಯಿರಿ

ಕರ್ನಾಟಕದ ಮೈತ್ರಿಕೂಟದ ಸರ್ಕಾರ ಸಚಿವ ಸ್ಥಾನ ಹಂಚಿಕೆಯ ವಾಗ್ವಾದದಲ್ಲೇ ಸಮಯ ಕಳೆದಾಗಿದೆ. ಜನ ಇದನ್ನು ಹೆಚ್ಚು ನೋಡಬಯಸುವುದಿಲ್ಲ,ಬದಲಾಗಿ ಜನತೆಗೆ ಪರಿಹಾರ ನೀಡುವ, ಮುಂದಿರುವ ಸವಾಲು ಎದುರಿಸುವ ಕ್ರಿಯಾಶೀಲ ಸರ್ಕಾರ.... ಕಾಲ ಹಗರಣ ಸಾಕಿನ್ನು ಕನಿಷ್ಠ ಕಾರ್ಯಕ್ರಮ ರೂಪಿಸಿ, ಆಡಳಿತಕ್ಕೆ ಇಳಿಯಿರಿ ಎಂದು ಕರೆ ನೀಡಿದೆ ಸಿಪಿಐ(ಎಂ)ನ ರಾಜ್ಯ ಸಮಿತಿ. ರಾಜ್ಯದ ಪ್ರಮುಖ ವಿದ್ಯಮಾನಗಳನ್ನು ಚಳುವಳಿಯ ಕಾರ್ಯಕ್ರಮಗಳನ್ನು ವಿವರಿಸಿದ್ದಾರೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್

ಕರ್ನಾಟಕದ ಮತದಾರರ ಜನಾದೇಶಕ್ಕನುಗುಣವಾಗಿ ಜಾತ್ಯಾತೀತ ಸರ್ಕಾರ ರೂಪುಗೊಂಡಿರುವುದನ್ನು, ಜೂನ್ 9-10 ರಂದು ಸಮಾವೇಶಗೊಂಡಿದ್ದ ಸಿಪಿಐ(ಎಂ) ರಾಜ್ಯಸಮಿತಿ ಸ್ವಾಗತಿಸಿದೆ. ಕರ್ನಾಟಕದ ಮತದಾರರು ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ಅಧಿಕಾರಕ್ಕೇರುವುದನ್ನು ಮತ್ತೊಮ್ಮೆ ತಡೆಗಟ್ಟಿದ್ದಾರೆ. ಈಗ ರಚಿತವಾಗಿರುವ ಸರ್ಕಾರ ಶೇ.56 ರಷ್ಟು ಮತ ಬೆಂಬಲವನ್ನು ಪಡೆದಿದೆ ಎಂಬುದು ಒಂದು ಉತ್ತಮ ಬೆಳವಣಿಗೆ. ಕರ್ನಾಟಕದಲ್ಲಿ ಇದುವರೆಗೆ ಆಳಿದ ಯಾವುದೇ ಸರ್ಕಾರಕ್ಕಿಂತ ಹೆಚ್ಚು ವಿಶಾಲವಾದ ಜನಾದೇಶವನ್ನು ಈ ಸರ್ಕಾರ ಪಡೆದಿದೆ.

ಅದೇ ಸಂದರ್ಭದಲ್ಲಿ ರಾಜ್ಯದಲ್ಲಿ ಬಿಜೆಪಿಯನ್ನು ಕೇವಲ ಶೇ.28 ರಷ್ಟು ಮತದಾರರು ಮಾತ್ರ ಪುರಸ್ಕರಿಸಿದ್ದಾರೆ. ರಾಜ್ಯದಲ್ಲಿ ಎಸ್.ಎಂ.ಕೃಷ್ಣ ಸರ್ಕಾರ ಅನುಸರಿಸಿದ ನೀತಿಗಳ ವಿರುದ್ಧ ತಮ್ಮ ಸಿಟ್ಟನ್ನು ವ್ಯಕ್ತಗೊಳಿಸಲು ಬೇರೆ ದಾರಿಯಿಲ್ಲದ ಸಂದರ್ಭದಲ್ಲಿ ಬಿಜೆಪಿಯನ್ನು ಒಂದು ಉಪಕರಣವನ್ನಾಗಿ ಆ ಪಕ್ಷಕ್ಕೆ ಬೆಂಬಲ ನೀಡಿದ ಬಹುಪಾಲು ಮತದಾರರು ಬಳಸಿಕೊಂಡಿದ್ದಾರೆಯೇ ಹೊರತು ಆ ಪಕ್ಷದ ಮತ್ತು ಅದರ ಪರಿವಾರದ ಪರಿವಾರದ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕೋಮುವಾದಿ ಪ್ರಚಾರ, ಚಟುವಟಿಕೆ ಹಾಗೂ ಕೋಮುಗಲಬೆ ಹುಟ್ಟು ಹಾಕುವುದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕು.

ಎಂಬುದನ್ನು ಬಿಜೆಪಿ ಮನಗಾಣಬೇಕು ಮತ್ತು




ಮಾನವೀಯತೆಗೆ ಹಾಗೂ ಪ್ರಜಾಪ್ರಭುತ್ವಕ್ಕೆ ಹಾನಿಕಾರಕವಾದ ಕೋಮುವಾದಿ ಪ್ರಚಾರ ಮತ್ತು ದಂಗೆಗಳನ್ನು ನಿಯಂತ್ರಿಸಿಕೊಳ್ಳಬೇಕು. ಇಲ್ಲದಿದ್ದರೆ ಕರ್ನಾಟಕದ ಮತದಾರರು ತಕ್ಕ ಪಾಠ ಕಲಿಸುತ್ತಾರೆ ಎಂಬುದನ್ನು ಬಿಜೆಪಿ ಅರಿಯಬೇಕು. ಆದರೆ ಚುನಾವಣೆಯ ಫಲಿತಾಂಶಗಳು ಹೊರಬಿದ್ದ ಕೂಡಲೇ ಬಿಜೆಪಿ ಶಾಸಕರು ಬಾಬಾಬುಡನ್‌ಗಿರಿಯಲ್ಲಿ ಆರಂಭಿಸಿದ ಅಕ್ರಮಗಳು, ಬಿಜೆಪಿ, ಜನಾದೇಶವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ರಾಜ್ಯಸಮಿತಿ ಭಾವಿಸಿದೆ.

ಕಾಂಗ್ರೆಸ್- ಜನತಾದಳ ಸರ್ಕಾರ ಸಂಘ

ಕನಿಷ್ಠ ಕಾರ್ಯಕ್ರಮ ರೂಪಿಸಿಕೊಳ್ಳಿ, ಆಡಳಿತಕ್ಕಿಳಿಯಿರಿ

ಕರ್ನಾಟದಲ್ಲಿ ರೂಪುಗೊಂಡ ಮೊದಲ ಸಮ್ಮಿಶ್ರ ಸರ್ಕಾರದಲ್ಲಿ ಆರಂಭಿಕ ವಿಳಂಬ, ಚರ್ಚೆ ಸಹಜವಾದದ್ದೇ. ಆದರೆ ಈ ಸಮಯ ಹಾಗೂ ಚರ್ಚೆ, ಎರಡೂ ಪಕ್ಷಗಳು ಕರ್ನಾಟಕದ ಜನಾದೇಶ ವನ್ನು ಅರ್ಥೈಸಲು, ಅದರ ಆಧಾರದ ಮೇಲೆ ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲು ಉಪಯೋಗಿಸಲಿಲ್ಲ ಎಂಬುದು ವಿಷಾದನೀಯ. ರಾಜ್ಯಪಾಲರ ಭಾಷಣ ಕನಿಷ್ಠ ಕಾರ್ಯಕ್ರಮದ ಅಭಾವವನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ. ಎಸ್.ಎಂ.ಕೃಷ್ಣ ಸರ್ಕಾರದ ಜಾಗತೀಕರಣ ಪರ ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳಿಂದ ನೊಂದ ಅಪಾರ ಸಂಖ್ಯೆಯ ರೈತರು ಕೂಲಿಕಾರರು, ಕಾರ್ಮಿಕರು, ವಿದ್ಯಾರ್ಥಿಗಳು, ನಿರುದ್ಯೋಗಿ, ಅರೆ ಉದ್ಯೋಗಿ ಯುವಜನರು, ಮಹಿಳೆಯರು ಈ ಸರ್ಕಾರದಿಂದ ತಕ್ಷಣದ ಪರಿಹಾರ ಕ್ರಮಗಳನ್ನು ನಿರೀಕ್ಷೆ ಮಾಡುತ್ತಿದ್ದಾರೆ.



ಆದ್ದರಿಂದ ತಕ್ಷಣವೇ ಕನಿಷ್ಠ ಸಾಮಾನ್ಯ ಕಾರ್ಯಕ್ರಮ ರೂಪಿಸಿಕೊಳ್ಳಲು ಎರಡು ಪಕ್ಷಗಳೂ ಮುಂದಾಗಬೇಕು. ಅದರ ಆಧಾರದ ಮೇಲೆ ಆಡಳಿತ ಆರಂಭಿಸಬೇಕು.

ಅಕ್ಕಿ ಹಗರಣ ಜೂನ್ 16 ರಂದು ರಾಜ್ಯಾದ್ಯಂತ ಪ್ರತಿಭಟನೆ

ಚುನಾವಣಾ ನಂತರದ ದಿನಗಳಲ್ಲಿ ಬಹಿರಂಗಗೊಂಡ ಅಕ್ಕಿ ಹಗರಣ ಒಂದು ಬೃಹತ್ ಸ್ವರೂಪದ ಹಗರಣವಾಗಿ ಬಿಚ್ಚಿಕೊಳ್ಳುತ್ತಿದೆ. ಕೂಲಿಗಾಗಿ ಕಾಳು, ರೇಷನ್ ಅಕ್ಕಿಗಳೆರಡೂ ಅಪಾರವಾಗಿ ದುರುಪಯೋಗ ಕ್ಕೊಳಗಾಗಿರುವ ಈ ಪ್ರಕರಣದಲ್ಲಿ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ಮತ್ತು ಹಲವು ಇಲಾಖೆಗಳ ಉನ್ನತ ಅಧಿಕಾರಿಗಳು, ಕಂಟ್ರಾಕ್ಟರ್‌ಗಳು, ಕೆಲವು ರಾಜಕಾರಣಿಗಳು, ಕಾಳಸಂತೆಕೋರರು ಇದರಲ್ಲಿ ಒಳಗಾಗಿದ್ದಾರೆ. ಬೇರೆ ರಾಜ್ಯಗಳಲ್ಲಿಯೂ ಇಂತಹದೇ ಪ್ರಕರಣ ನಡೆದಿರುವ ವರದಿಗಳಿವೆ. ಆದ್ದರಿಂದ 1) ಇಡೀ ಪ್ರಕರಣವನ್ನು ಸಿ.ಬಿ.ಐ ತನಿಖೆಗೊಪ್ಪಿಸಬೇಕು 2) ರಾಜ್ಯಾದ್ಯಂತ ಕೂಲಿಗಾಗಿ ಕಾಳು ಯೋಜನೆ ಹಾಗೂ ರೇಷನ್ ವಿತರಣಾ ವ್ಯವಸ್ಥೆಯನ್ನು ಆಮೂಲಾಗ್ರ ಪರಿಶೀಲನೆ ಗೊಳಪಡಿಸಿ ಆಡಳಿತಾತ್ಮಕ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು. ಇದಕ್ಕಾಗಿ ಉನ್ನತಾಧಿಕಾರವುಳ್ಳ ತಂಡವೊಂದನ್ನು ರಚಿಸಬೇಕು. 3) ವಶಪಡಿಸಿಕೊಂಡಿರುವ ಅಕ್ಕಿಯನ್ನು ಹರಾಜು ಕ್ರಮಗಳಿಗೊಳಪಡಿಸದೇ ಕೂಡಲೇ ಕೂಲಿಗಾಗಿ ಕಾಳು ಯೋಜನೆಯಡಿ ಪ್ರಾಮಾಣಿಕವಾಗಿ ಕೂಲಿಕಾರರಿಗೆ ತಲುಪಿಸಬೇಕು. 4) ಇದಕ್ಕಾಗಿ ಪೂರ್ಣವಾಗಿ ಪಾರದರ್ಶಕತೆ ಒಳಗೊಳ್ಳುವಂತೆ ಮಾರ್ಗಸೂತ್ರಗಳನ್ನು ರಚಿಸಬೇಕು. ಕೂಲಿಕಾರರ ಸಂಘ, ವಿವಿಧ ರೈತಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಉಸ್ತುವಾರಿ ಸಮಿತಿ ರಚಿಸಬೇಕು.

ಈ ಒತ್ತಾಯಗಳನ್ನು ಜನತೆಯ ಹಾಗೂ ಸರ್ಕಾರದ ಗಮನಕ್ಕೆ ತರಲು ದಿನಾಂಕ 16.06.2004 ರಂದು ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ರಾಜ್ಯಾದ್ಯಂತ ಪ್ರತಿಭಟನೆಯನ್ನು ಸಿಪಿಐ(ಎಂ) ಹಮ್ಮಿಕೊಂಡಿದೆ.

ಜನಾದೇಶ 2004 - ಪ್ರಚಾರಾಂದೋಲನ

ಭಾರತದ ಹಾಗೂ ಕರ್ನಾಟಕದ ಜನತೆ ನೀಡಿದ ಜನಾದೇಶವನ್ನು ಆಸಕ್ತ ಹಿತಗಳು ಹಾಗೂ ಪಕ್ಷಗಳು ತಿರುಚಲು ಪ್ರಯತ್ನಿಸುತ್ತಿವೆ ಹಾಗೂ ಜನರನ್ನು ಗೊಂದಲಕ್ಕೀಡು ಮಾಡಲು ಮತ್ತು ತಮ್ಮ ಜಾಗತೀಕರಣ ನೀತಿಗಳ ಮುಂದುವರಿಕೆಯನ್ನು ಸಮರ್ಥಿಸಿಕೊಳ್ಳಲು ಬಯಸುತ್ತಿವೆ. ಹೀಗಾಗಿ ಕೋಮುವಾದ ಹಾಗೂ ಜಾಗತೀಕರಣ ನೀತಿಗಳಿಗೆ ಎದುರಾದ ಜನಾದೇಶದ ಅರ್ಥವನ್ನು ಜನತೆಯ ಮುಂದಿಡಲು ಹಾಗೂ ಕೇಂದ್ರದ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಜನಪರ ಅಂಶಗಳ ಜಾರಿಗಾಗಿ ಒತ್ತಾಯಿಸಲು ಜೂನ್ 24 ರಿಂದ 30 ರವರೆಗೆ ಜನಾದೇಶ 2004 ಎಂಬ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಸಿಪಿಐ(ಎಂ) ಕೈಗೊಂಡಿದೆ.

ವೆಂಕಯ್ಯ ನಾಯ್ಡು ಸ್ಪರ್ಧೆಗೆ ವಿರೋಧ :

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯ ನಾಯ್ಡು ಕರ್ನಾಟಕ ವಿಧಾನಸಭೆಯ ಮೂಲಕ ರಾಜ್ಯಸಭೆ ಚುನಾವಣೆಯ ಅಭ್ಯರ್ಥಿಯನ್ನಾಗಿ ಬಿಜೆಪಿ ಆಯ್ಕೆ ಮಾಡಿರುವುದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿ ಖಂಡಿಸುತ್ತದೆ. ಇದರಿಂದ ಸಂವಿಧಾನದ ಒಕ್ಕೂಟ ತತ್ವ ಮತ್ತು ರಾಜ್ಯಸಭೆಯ ಸ್ವರೂಪಕ್ಕೆ ಬಿಜೆಪಿ ಹಾನಿ ಮಾಡುತ್ತಿದೆ. ಕರ್ನಾಟಕದ ಮತದಾರರು ಶಾಸಕರನ್ನು ಆಯ್ಕೆ ಮಾಡಿರುವುದು ಕರ್ನಾಟಕದ ಜನತೆಯ ಹಿತ ಕಾಪಾಡುವುದಕ್ಕಾಗಿಯೇ ಆಗಿದೆ.

ಕರ್ನಾಟಕದ ಬಿಜೆಪಿ ಶಾಸಕರು, ಕರ್ನಾಟಕದವರಲ್ಲದ ವ್ಯಕ್ತಿಗೆ ಮತ ನೀಡಿದರೆ, ಅದು ಕರ್ನಾಟಕದ ಹಿತಕ್ಕೆ ವಿರುದ್ಧವಾದ ಬಿಜೆಪಿಯ ವರ್ತನೆಯಾಗಿದೆ ಎಂಬುದನ್ನು ಗಮನಿಸಬೇಕು.

ಜೂನ್ 16, ಅಕ್ಕಿ ಹಗರಣ ಸಿಬಿಐಗೆ ಒಪ್ಪಿಸಲು ಆಗ್ರಹಿಸಿ ರಾಜ್ಯಾದ್ಯಂತ ಪ್ರತಿಭಟನೆ

ಒಟ್ಟು ಮತಗಳು - 2004				
	ಲೋಕಸಭೆ	ಶೇ	ವಿಧಾನಸಭೆ	ಶೇ.
ಕಾಂಗ್ರೆಸ್	92,47805	(36.82)	88.59377	35.27
ಬಿಜೆಪಿ	87,,32,883	(34.77)	71,15,891	28.33
ಬಿಎಸ್‌ಪಿ	3,05435	(1.22)	4,36,415	1.74
ಜೆಡಿ(ಎಸ್)	51,35,205	20.45	52,15,858	20.77
ಜೆಡಿ(ಯು)	4,68,682	1.87	5,17,948	2.06
ಸಿಪಿಐ(ಎಂ)	-	-	92,081	
ಸಿಪಿಐ	12,413	-	27,792	
ಇತರೆ ಪಕ್ಷಗಳು	6,24,516		11,34,075	
ಸ್ವತಂತ್ರರು	5,88,316		17,15,993	
ಒಟ್ಟು ಮತ	2,51,15,255		2,51,15,430	

ದುಡಿಮೆ

ದುಡಿದು ಸುರಿದ ಬೆವರಿಗಿಲ್ಲ ಕವಡೆ ಕಾಸ ಬೆಲೆಯು
ರಕ್ತ ಸುರಿಸಿ ಮೂಳೆ ಮುರಿದ್ರು ಬರುತಲಿದೆಯೋ ಕಷ್ಟದಲೆಯು!

ಮೈಯೇ ಕರಗಿ ನಶಿಸಿಹೋಯ್ತು ಬೆವರ ರೂಪ ತಾಳುತಾ
ಬೆವರ ಕಮರು ಗಂಧದಂತೆ ಬೆಳೆಗೆ ನಿತ್ಯ ಜೀವ ತುಂಬುತಾ

ನೊಗವನೊತ್ತ ಎತ್ತಿಗ್ಹೊತ್ತು ದುಡಿವುದೆಂಥ ಸ್ಥಿತಿಯು
ಭಾರವೇರಿ ಬೆನ್ನಮೂಳೆ ಎಂದೋ ತಲುಪಿದೆ ದುಸ್ಥಿತಿಯ

ರಕ್ತದೋಕುಳಿ ಹೋಳಿ ಹಬ್ಬಕೆ ಬಣ್ಣವಾಯಿತು ಧಣಿಗೆ
ರಕ್ತವೊಸರಿ ಹರಿದ ಚರ್ಮ ಪಾದುಕೆಯಾಯ್ತು ಕೊನೆಗೆ

ತುತ್ತು ಕೂಳನು ಹೆತ್ತ ಕರುಳಿಗೆ ಉಣಿಸಲಾರದ ನಿರ್ಭಾಗ್ಯನು
ನರಳಿ ನರಳಿ ಸಾಯೋಜೀವಕೆ ಗಂಜಿ ಕೊಡಲಾರದ ದುರ್ಭಾಗ್ಯನು

ಬೆಟ್ಟ ಅಗೆದು ಮಟ್ಟ ಮಾಡಿ ಬೆಳೆಯ ತೆಗೆದೆವಲ್ಲ
ಶತಶತಮಾನದ ದಾಸ್ಯ ಸರಪಳಿಯ ಕೀಳದಾದೆವಲ್ಲ
ಗುಡ್ಡ ಬಗೆದು ಗಣಿಯ ತೋಡಿ ಚಿನ್ನ ತೆಗೆದೆವಲ್ಲ
ಚಿನ್ನ ಬೇಡ, ಅನ್ನ ಕೂಡ ಸಿಗದೆ ಸತ್ತೆವಲ್ಲ

- ಜಯ
ಮಂಡ್ಯ

ಸಾದರ ಸ್ವೀಕಾರ



ರೇಖಾಗಣಿತ	ಲೇಖಕರು ಟಿ.ಪಿ.ಲಿಂಗಪ್ಪ	ಬೆಲೆ ರೂ.30
ಬೀಜಗಣಿತ	ಲೇ. ಟಿ.ಪಿ.ಲಿಂಗಪ್ಪ	ಬೆಲೆ ರೂ.40
ಅಂಕಗಣಿತ	ಲೇ. ಪಿ.ಪಿ.ಲಿಂಗಪ್ಪ	ಬೆಲೆ ರೂ.50
ಹಿಮಕಿನ್ನರಿ	ಲೇ. ಕಿರಣ್ ಪ್ರಸಾದ್ ಆರ್.	ಬೆಲೆ ರೂ.35
ಋತುಗಾನ	ಲೇ. ಜಿ.ಆರ್.ಪರಿಮಳಾ ರಾವ್	ಬೆಲೆ ರೂ.25
ಗೋಲಗುಮ್ಮಟ	ಲೇ. ರಾಜಶೇಖರ ಕುಕ್ಕುಂದಾ	ಬೆಲೆ ರೂ.25
ಸ್ವರ್ಣ ಸಂಪಿಗೆ	ಲೇ. ಜಿ.ಆರ್.ಪರಿಮಳಾ ರಾವ್	ಬೆಲೆ ರೂ.20
ನಕ್ಷತ್ರ ನಕ್ಕಾಗ	ಲೇ. ಜಿ.ಆರ್.ಪರಿಮಳಾ ರಾವ್	ಬೆಲೆ ರೂ.25



ಪ್ರಕಾಶಕರು
ನವ ಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು 5600 01
ದೂರವಾಣಿ : 22203580-82

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ವಿರೋಧ ಪಕ್ಷವೆಂಬ ಬಿಜೆಪಿ : ವಿರೋಧ ಎಷ್ಟು ?

ಬಿಜೆಪಿ ಈಗ ಅಧಿಕೃತ ವಿರೋಧ ಪಕ್ಷ. ಅಜ್ಞಾತವಾಸದಲ್ಲಿದ್ದು ಮೂಲೆಗೆ ತಳ್ಳಲ್ಪಟ್ಟಿದ್ದ ಯಡಿಯೂರಪ್ಪ ರಾಜಕಾರಣದ ದಾಳದಲ್ಲಿ ಅದರ ನಾಯಕ. ಈ ನಾಯಕರು ಮೈತ್ರಿಕೂಟದ ಸರ್ಕಾರದ ವಿರುದ್ಧ ಕತ್ತಿ ಝುಳಪಿಸುತ್ತಿದ್ದಾರೆ. ನಿತ್ಯ ವಿರೋಧದ ಮಾತನ್ನಾಡುತ್ತಿದ್ದಾರೆ. ಆದರೆ ಬಿಜೆಪಿಯ ವಿರೋಧದ 'ಅರ್ಥ'ವೇನು? ಅದು ಎಷ್ಟರಮಟ್ಟಿಗೆ. ಅದೇ ನಿಜವಾದ ಪರ್ಯಾಯವೇ? ಖಂಡಿತ ಅಲ್ಲ....

ಈವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಬಿಜೆಪಿ ಹೊಂಚು ಹಾಕಿ ಕಾದೇ ಇತ್ತು. ಏನಾದರೂ ಛಾನ್ಸ್ ಸಿಕ್ಕಿದರೆ ಮೈತ್ರಿಕೂಟದ ಸರ್ಕಾರವನ್ನು ರಚಿಸಿಬಿಡಬಹುದು. ಮುಖ್ಯಮಂತ್ರಿ ಸ್ಥಾನವೇ ದಕ್ಕಿಬಿಡಬಹುದು ಎಂದೇ ಲೆಕ್ಕಹಾಕಿತ್ತು. ಕಾಂಗ್ರೆಸ್ ಮತ್ತು ಜನತಾದಳ(ಎಸ್)ನ ಮೈತ್ರಿ, ಮುರಿದು ಬೀಳಲಿ, ಮುರಿದು ಬಿದ್ದ ಮೈತ್ರಿಯಿಂದ (ಮನೆಯಲ್ಲಿ)ಗಳ ಹಿರಿದು ಅಧಿಕಾರದ ಕುರ್ಚಿಗೆ ಹಾರಿಯೇ ಬಿಡಬಹುದು ಎಂದೆಲ್ಲಾ ಬಕಪಕ್ಷಿಯಂತೆ ಕಾದಿತ್ತು. ಆದರೆ ಹಾಗಾಗಲೇ ಇಲ್ಲ. ಈಗ ಬಿಜೆಪಿ ನಾಯಕರು ನಿತ್ಯವೂ ಹೇಳುವ ಕಥೆ.. 'ನಿಲುಕದ ದ್ರಾಕ್ಷಿ ಹುಳೀ ಹುಳೀ....'

ಆದ್ದರಿಂದ ಬಿಜೆಪಿ ಫಲಿತಾಂಶ ಹೊರಬಿದ್ದು ತಿಂಗಳಾದರೂ ತನ್ನ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಿಕೊಳ್ಳಲೇ ಇಲ್ಲ. ಮುಖ್ಯಮಂತ್ರಿಯಾಗುವುದಿದ್ದರೆ ಮಹಾನಾಯಕ! ಇಲ್ಲವಾದರೆ, ಇನ್ನೊಬ್ಬನಿಗೆ ಹೋರಾಡುವ ಕಾಯಕ. ಇಲ್ಲಿಯೂ ಸಂಘಪರಿವಾರ ವರ್ಣಾಶ್ರಮದ ಸಿದ್ಧಾಂತದ ಕೈಬಿಟ್ಟಿತೇ? ಹೀಗೆ ಮುಖ್ಯಮಂತ್ರಿ ಕನಸು ಭಗ್ನವಾದಬಳಿಕ ಗತ್ಯಂತರವಿಲ್ಲದೇ ವಿಧಾನಸಭಾ ಅಧಿವೇಶನ ಆರಂಭಕ್ಕೆ ಮುನ್ನಾದಿನ ಬಿಜೆಪಿ ಶಾಸಕಾಂಗ ಪಕ್ಷ ತನ್ನ ನಾಯಕನನ್ನು ಆರಿಸಿದೆ. ಹಲವು ವರುಷಗಳು ಅಜ್ಞಾತವಾಸಕ್ಕೆ ಅಟ್ಟಲ್ಪಟ್ಟಿದ್ದ ಯಡಿಯೂರಪ್ಪನವರನ್ನು ಮತ್ತೆ ರಂಗಕ್ಕೆ ತಂದಿದೆ. ಈಗ ವಿಧಾನಸಭೆಯಲ್ಲಿ ಬಿಜೆಪಿ 'ಅಧಿಕೃತ' ವಿರೋಧ ಪಕ್ಷ, ಯಡಿಯೂರಪ್ಪ ಅವರ ನಾಯಕ!! ಹಿಂದಿದ್ದ ವಿರೋಧ ಪಕ್ಷದ ನಾಯಕ ಈಗಲೂ ಜಗದೀಶ ಶೆಟ್ಟರ್‌ಗೆ ಚುಟ್ಟಿ!

ವಿರೋಧ ಪಕ್ಷದ ನಾಯಕನಾದ ಬಳಿಕ ಯಡಿಯೂರಪ್ಪನವರು ಕರ್ನಾಟಕದ ಸುತ್ತಳತೆಗೂ ಸಾಕಾಗುವಷ್ಟು ಮಾತನಾಡಿದ್ದಾರೆ. ಪತ್ರಿಕೆಗಳು ಸಂದರ್ಶನ ಪ್ರಕಟಿಸಿವೆ. ಪ್ರಜಾವಾಣಿಯಂತಹ ಪತ್ರಿಕೆ (ಚುನಾವಣೆಗೆ ಸಂದರ್ಭಕ್ಕೆ ಬಿಜೆಪಿ ಗಾಳಿ ಊದುವುದರಲ್ಲಿ ಸ್ಪರ್ಧೆ ನಡೆಸಿತ್ತು) ಯು ನೂರಒಂದು ಶಾಸಕರ ನಾಯಕ ಎಂದೆಲ್ಲಾ ಬಣ್ಣಿಸಿದೆ. 'ಅಧಿಕೃತ' ವಿರೋಧ ಪಕ್ಷದ ನಾಯಕರ ಅಂಬೋಣವೇನೆಂದರೆ ನಾವೇ ಈ ಮೈತ್ರಿಕೂಟದ ಸರ್ಕಾರಕ್ಕೆ ಪ್ರಬಲ ವಿರೋಧಿಗಳು,



ಈ ಸರ್ಕಾರಕ್ಕೆ ನೀತಿ-ನಿಯಮ ಎಂಬುದಿಲ್ಲ, ಎಂಬ ಅಂಬೋಣ.

ಶಾಸಕರ ಬಲದ ಆಧಾರದಲ್ಲಿ (ನೂರೊಂದು ಅಲ್ಲ 79 ಮಾತ್ರ) ಬಿಜೆಪಿ 'ಅಧಿಕೃತ' ವಿರೋಧ ಪಕ್ಷ ನಿಜ! ಒಪ್ಪೋಣ. ಆದರೆ ಬಿಜೆಪಿ ನಿಜಕ್ಕೂ ಈ ನೀತಿ ನಿಯಮಗಳಲ್ಲಿ ರಾಜ್ಯದ - ಜನತೆಯ ಹಿತ ಕಾಯುತ್ತದೆಯೇ? ನಿಜವಾಗಿಯೂ ಕಾಂಗ್ರೆಸ್ ನೇತೃತ್ವದ ಈ ಸರ್ಕಾರಕ್ಕೆ ಪರ್ಯಾಯ ಒದಗಿಸುವುದೇ. ಇದು ಹೇಳುವುದೇ ಪರ್ಯಾಯವೇ? ಹಿಂದಿನ ಅನುಭವವೇನು?

ಹಿಂದೆ ಎಸ್.ಎಂ.ಕೃಷ್ಣರ ಕಾಂಗ್ರೆಸ್ ಸರ್ಕಾರವಿರುವಾಗ ಮತ್ತು ಚುನಾವಣಾ ಸಂದರ್ಭದಲ್ಲಿ ತಾನೇ ಪರ್ಯಾಯವೆಂದು ಡಂಗುರಹಾಕಿತು. ಬಿಜೆಪಿ ಇಡೀ ನಾಲ್ಕುವರೆ ವರುಷಗಳ ಅವಧಿಯಲ್ಲಿ ಅನೇಕ ವಿಷಯಗಳಲ್ಲಿ ಹುಯಿಲೆಬ್ಬಿಸಿತು. ಪ್ರಚಾರ ಪ್ರತಿಭಟನೆ ನಡೆಸಿತು. ಆದರೆ ಬಿಜೆಪಿ ಎತ್ತಿದ ಬಹುತೇಕ ಪ್ರಶ್ನೆಗಳು ಆ ಸಂದರ್ಭದಲ್ಲಿದ್ದ ಮಹತ್ವದ ಆರ್ಥಿಕ - ರಾಜಕೀಯ ಪ್ರಶ್ನೆಗಳಾಗಿರಲಿಲ್ಲ. ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರಗಳ ಆರ್ಥಿಕ ನೀತಿಗಳು ಒಂದೇ ಆಗಿದ್ದವು. ಹೀಗಾಗಿ ಮೂಲಭೂತ ಪ್ರಶ್ನೆಗಳಿದ್ದಾಗ ರೈತ ಆತ್ಮಹತ್ಯೆ ವಿಶ್ವಬ್ಯಾಂಕ್ ಸಾಲ- ವಿದ್ಯುತ್ ಬಿಲ್, ಮನೆ ತೆರಿಗೆ, ನೀರಾವರಿ, ಶಿಕ್ಷಣ ದುಭಾರಿಯಂತಹ ಜನತೆಯ ಮೇಲೆ ಸಂಕಷ್ಟಗಳ ಹೊರೆ ಹೇರುತ್ತಿರುವಾಗ ಈ ಪ್ರಶ್ನೆಗಳನ್ನು 'ವಿರೋಧ ಪಕ್ಷ'ವಾಗಿರುವ ಬಿಜೆಪಿ ಎತ್ತಲಿಲ್ಲ, ಪ್ರತಿಭಟಿಸಲಿಲ್ಲ. ಬದಲಾಗಿ ಅದನ್ನು ಮರೆಮಾಡಲು ಕೋಮುಗಲಭೆಗಳನ್ನು ಎಬ್ಬಿಸಿತು. ಜನಪರ ಅತೃಪ್ತಿಯನ್ನು ಕೋಮುವಾದದತ್ತ ತಿರುಗಿಸಲಾಯಿತು. ಹೀಗೆ ಬಿಜೆಪಿಯ ವಿರೋಧ ಎಂಬುದು ಕೇವಲ ತೋರಿಕೆಗೆ ಮಾತ್ರ. ನಿಜ ಅರ್ಥದಲ್ಲಿ ಜನದ್ರೋಹಿ ನೀತಿಗಳನ್ನು ಸಮರ್ಥಿಸುವುದೇ ಆಗಿದೆ. ಕಾಂಗ್ರೆಸ್ ಬಿಜೆಪಿ ಸರಸವಾಡುತ್ತಲೇ ಬಂದಿವೆ.

ಈಗಲೂ ಬಿಜೆಪಿ ತಾನೇ ಜನರ ರಕ್ಷಕನೆಂದು ಪೋಜು ಕೊಡಲು ಹೆಣಗುತ್ತದೆ. ಅದಕ್ಕಾಗಿ ಏನೆಲ್ಲಾ ಆಟಗಳನ್ನು ಆಡಲಿದೆ. ಆದರೆ ನಿಜವಾದ ಪರ್ಯಾಯ ಜನಚಳುವಳಿ- ಎಡ ಪ್ರಜಾಸತ್ತಾತ್ಮಕ ಶಕ್ತಿಗಳೇ ಆಗಿವೆ.

ಕಾವೇರಿ : ನೀರು ಕೊಡಿ..... ನೀರು ಬಿಡಿ....

ಮುಂಗಾರು ಬೆಳೆ ಮೋಡಗಳ ಸರಿದಾಟ ಕಂಗಾಲಾದ ರೈತರಲ್ಲಿ ಆಶೆ ಚಿಗುರಿಸಿದೆ. ನೆಲ ಉತ್ತೇನು -ಬೀಜ ಬಿತ್ತೇನು, ಒಂದಿಷ್ಟು ನೀರು ಕೊಡಿ ಎನ್ನುತ್ತಿದ್ದಾರೆ ತಮಿಳುನಾಡು ರೈತರು. ನಮಗೂ ನೀರು ಬಿಡಿ ಎನ್ನುತ್ತಿದ್ದಾರೆ ಕರ್ನಾಟಕದವರು. ಈಗ ಬೇಕಿರುವುದು ಬೆಂಕಿಯುಗುಳುವ ಮಾತುಗಳಲ್ಲ. ಬೆಂಗಾಡಿನಲ್ಲಿ ಬಳಲಿ ಬೆಂಡಾದ ಬದುಕಿನ ತಲ್ಲಣದ ಅರಿವು, ಸಂಕಷ್ಟ ಪರಿಹಾರದ ಸೂತ್ರ, ಪ್ರಾಮಾಣಿಕ ಪ್ರಯತ್ನ....

ಖಾಲಿಯಾಗಿದ್ದ ಕಾವೇರಿ ಒಡಲಿಗೆ ಸ್ವಲ್ಪಸ್ವಲ್ಪವೇ ನೀರು ಹರಿದು ಬರುತ್ತಿದೆ. ಮುಂಗಾರು ಆರಂಭ. ಈ ಅವಧಿಯಲ್ಲೇ ಬಿತ್ತನೆಗೆ ರೈತರು ಸಜ್ಜು. ಆದರೆ ಮಳೆಯೂ ಅಷ್ಟಕ್ಕಷ್ಟೇ. ಬಿತ್ತಲೇಬೇಕಾದ ಬೇಗುದಿ. ನೀರಿಲ್ಲ... ಕಾವೇರಿ ಕಣಿಯುದ್ದಕ್ಕೂ ರೈತರು ಈ ವರುಷವಾದರೂ ತಾವು ನೆಲ ಹದಗೊಳಿಸಿ, ಬೀಜ ಬಿತ್ತಿಯೇವೇಯೆ ಎಂದು ಕಾದಿದ್ದಾರೆ. ಅದಕ್ಕೆಂದೇ ನೀರು ಬಿಡಿ, ನೀರು ಕೊಡಿ....

ಈಗ ಮತ್ತೆ ಕಾವೇರಿ ನೀರು ಹಂಚಿಕೆ ಪ್ರಶ್ನೆ ಎದ್ದಿದೆ. ಕೃಷಿಗಾಗಿ ನೀರು ಬಿಡಿ ಎನ್ನುತ್ತಿದ್ದಾರೆ ತಮಿಳುನಾಡಿನ ರೈತರು. ಜೂನ್ 2ನೇ ವಾರದಲ್ಲಿ ನೀರು ದೊರೆತರೆ ಮಾತ್ರ ಮುಂಗಾರು (ಕುರುವೈ) ಬೆಳೆ ಕಾಣಬಹುದು, ಇಲ್ಲವಾದರೆ ಕಳೆದ ಮೂರು ವರುಷಗಳಿಂದ ಭೀಕರ ಬರ ಅನುತಾಪ ಅನುಭವಿಸಿ, ಬಸವಳಿದವರ ಬದುಕು ಮುಂದೆ ಹೇಗೆ ಎಂಬ ಆತಂಕ ಕಾಡುತ್ತಿದೆ. ಆದ್ದರಿಂದಲೇ ಈ ಮೊರೆ ಎನ್ನುತ್ತಿದ್ದಾರೆ. ಮಂಡ್ಯ, ಮೈಸೂರು ಭಾಗದ ರೈತರು ನಮಗೂ ನೀರು ಬೇಕು ಎಂಬುದು ಇಲ್ಲಿನ ರೈತರ ಕೇಳಿಕೆ.

ಸಂಕಷ್ಟ ಸೂತ್ರ

ಜೂನ್‌ನಲ್ಲಿ ಮಳೆ ಕಡಿಮೆ.ಈಗ ಸದ್ಯ ಕಾವೇರಿ ಪಾತ್ರದಲ್ಲಿ 10.5 ಟಿ.ಎಂ.ಸಿ. ನೀರು ಸಂಗ್ರಹವಾಗಿದೆ. ಇದರಲ್ಲಿ ಆಣೆಕಟ್ಟಿನ ಕೆಳಗೆ ಉಳಿದುಬಿಡುವ ನೀರು ಬಿಟ್ಟರೆ, ಹರಿಸಬಹುದಾದ ನೀರು (ಲೈವ್ ಸ್ಟೋರೇಜ್) 2.5 ಟಿ.ಎಂ.ಸಿ. ಮಾತ್ರ ಎಂಬುದು ವರದಿ.

ಕಳೆದ ವರುಷ ಕಾವೇರಿ ವಿವಾದ ತೀವ್ರವಾಗಿ ಎಲ್ಲರೂ ಉದ್ವೇಗಕ್ಕೆ ಒಳಗಾಗಿದ್ದಾಗ ಕಾವೇರಿ ನ್ಯಾಯಮಂಡಳಿಯು ಒಂದು ಆಜ್ಞೆಯನ್ನು ಹೊರಡಿಸಿತು. ನೀರು ಹಂಚಿಕೆಗೆ ನಿರ್ದೇಶನ ನೀಡಿತ್ತು. ಹಲವು ಲೆಕ್ಕಾಚಾರ ಹಾಕಿ ಅದರಂತೆ ಈ ಜೂನ್ ತಿಂಗಳಲ್ಲಿ ಒಟ್ಟು 10.5 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡಬೇಕು. ಅಂದರೆ ಹಂತಹಂತವಾಗಿ ಇಂತಿಷ್ಟು, ಸುಮಾರು ಪ್ರತಿದಿನ 50 ಸಾವಿರ ಕ್ಯೂಸೆಕ್ಸ್ ನೀರು ಹರಿಸಬೇಕು ಎಂದಿದೆ. ಆಜ್ಞೆಯೇನೋ ಸರಿ. ಆದರೆ ನೀರು ಸಂಗ್ರಹದ ವಾಸ್ತವಾಂಶವನ್ನು ಉಭಯ ಪಕ್ಷಗಳ ಸ್ಥಿತಿ-ಗತಿಗಳನ್ನು ಪೂರ್ಣವಾಗಿ ಗಮನಕ್ಕೆ ತೆಗೆದುಕೊಂಡಿಲ್ಲ. ಬಹುಮುಖ್ಯವಾಗಿ ನೀರು ಸಂಗ್ರಹ ಮತ್ತು ಬೆಳೆಯ ಪರಿಸ್ಥಿತಿಯಲ್ಲಿ ಎರಡೂ ಕಡೆಗೂ ಸಂಕಷ್ಟ ಇದ್ದಲ್ಲಿ ಏನು ಮಾಡುವುದು. ನೀರು ಬಿಡಬೇಕೆಂಬ, ಪಡೆಯಬೇಕೆಂಬುದನ್ನು ಹೇಗೆ ಪರಿಹರಿಸುವುದು? ಎಂಬುದರತ್ತ ಸರಿಯಾದ ತೀರ್ಮಾನ ಕೈಗೊಳ್ಳಲಾಗಿಲ್ಲ. ಇದಕ್ಕೆ ಬೇಕಿರುವುದು 'ಸಂಕಷ್ಟದ ಸೂತ್ರ'. ಈ ಸೂತ್ರ ಇನ್ನೂ ರೂಪಿಸಲಾಗಿಲ್ಲ. ಆದುದರಿಂದ ಈ ಸಂಕಷ್ಟ ಸೂತ್ರವನ್ನು ಕೂಡಲೇ ರೂಪಿಸಿ ನೀರಿನ ಹಂಚಿಕೆಗೆ ನಿರ್ದೇಶನ ನೀಡಬೇಕಿದೆ. ಈ ಹೊಣೆ ಕಾವೇರಿ ನದಿ ಪ್ರಾಧಿಕಾರದ ಮೇಲಿದೆ. ಮುಖ್ಯವಾಗಿ ಪ್ರಧಾನಿ -ಕೇಂದ್ರ ಸರ್ಕಾರದ ಮೇಲಿದೆ.

ತಮಿಳುನಾಡಿನಲ್ಲಿ ಡಿ.ಎಂ.ಕೆ., ಸಿಪಿಐ(ಎಂ) ಮುಂತಾದ ಮಿತ್ರ ಪಕ್ಷಗಳ ನಿಯೋಗ ಪ್ರಧಾನಿ ಮನಮೋಹನ್ ಸಿಂಗ್‌ರವರಿಗೂ, ಮುಖ್ಯಮಂತ್ರಿ ಧರಂಸಿಂಗ್‌ರವರಿಗೂ ಭೇಟಿ ಮಾಡಿ ಮನವಿ ಸಲ್ಲಿಸಿದೆ. ಕಾನೂನುಗಳ ಮಾತಿಗಿಂತ ಕಂಗಾಲಾಗಿರುವ ಕಾವೇರಿ ನದಿಯ ಹರವಿನ ತಮಿಳುನಾಡಿನ ರೈತರಿಗೆ ಮಾನವೀಯ ದೃಷ್ಟಿಯಿಂದ ನೀರುಬಿಡಿ ಎಂಬ ಕೇಳಿಕೆಯನ್ನು ಮಂಡಿಸಲಾಗಿದೆ.

ಈಗ ನೀರು ಹಂಚಿಕೆಯ ಪ್ರಶ್ನೆಯನ್ನು ಗಂಭೀರವಾಗಿ, ಸಮಚಿತ್ತದಿಂದ ಬಗೆಹರಿಸಬೇಕಿದೆ. ಎರಡೂ ರಾಜ್ಯಗಳ ರೈತರ ಹಿತವನ್ನು ಗಮನದಲ್ಲಿರಿಸಿ ಹಂಚಿಕೆ ಮಾಡಬೇಕಿದೆ. ಸಂಕಷ್ಟಸೂತ್ರ ರೂಪಿಸುವುದು ತೀರಾ ಅತ್ಯಗತ್ಯ.

ಉದ್ರೇಕ ಬೇಡ

'ನೀರು ಬಿಡಿ' ಎಂದು ಕೇಳಿರುವುದನ್ನು, ಕೋರಿಕೆ ಮಂಡಿಸಿರುವುದನ್ನೇ ಬಳಸಿ ಕೆಲವರು ನೀರು ಬಿಡಲಾಗದು ಎಂದು ಚಳುವಳಿ, ಪ್ರತಿಭಟನೆಗೆ ಇಳಿದಿದ್ದಾರೆ. ಜನರನ್ನು ಅನಗತ್ಯವಾಗಿ ಉದ್ರೇಕಿಸುವುದು, ಎರಡೂ ರಾಜ್ಯಗಳಲ್ಲಿರುವ ಬಾಧಿತ ರೈತರನ್ನು ಎತ್ತಿ ಕಟ್ಟುವುದು ಸರಿಯಲ್ಲ. ನೀರು ಹಂಚಿಕೆ ಪ್ರಶ್ನೆಯನ್ನು ಜನರ ವಿಭಜನೆಗೆ ಬಳಸಬಾರದು. ಈ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಉಭಯ ರೈತರ ಹಿತ ಕಾಯುವಂತಹ ಕ್ರಮಗಳನ್ನು ಕೈಗೊಳ್ಳಬೇಕಿದೆ.



ಕಾವೇರಿ ಜಲಾನಯ ಪ್ರದೇಶಗಳಿಗೆ ಭೇಟಿ ನೀಡಿದ್ದ ಕೇಂದ್ರದ ತಂಡ

ಶುಕ್ರ ಸಂಕ್ರಮಣ ವೀಕ್ಷಣೆ

ಲಕ್ಷಾಂತರ ಜನ ಅಂಧಶ್ರದ್ಧೆಯ ಪೊರೆ ಹರಿದು ಬಂದಾಗ.....

ನೂರ ಇಪ್ಪತ್ತೆರೆಡು ವರುಷಗಳಿಗೊಮ್ಮೆ ಸಂಭವಿಸುವ ಅಪೂರ್ವ ಶುಕ್ರ ಸಂಕ್ರಮಣವನ್ನು ಮಕ್ಕಳಿಂದ ಮುದುಕರವರೆಗೆ ನಾಡಿನ ಲಕ್ಷಾಂತರ ಜನ ನೋಡಿ ಹರ್ಷಿಸಿದರು. ಗ್ರಹಣದ ಬಗೆಗಿನ ಅಜ್ಞಾನ-ಅಂಧಶ್ರದ್ಧೆಯನ್ನು ಧಿಕ್ಕರಿಸಿ ನಿಸರ್ಗದ ಕೌತುಕವನ್ನು ಅರಿಯಲು - ಅರಿವಿನ ಕ್ಷಿತಿಜ ವಿಸ್ತರಿಸಲು ಶ್ರಮಿಸಿದ್ದು ಭಾರತ ಜ್ಞಾನ ವಿಜ್ಞಾನ ಸಮಿತಿ... ಈ ಅವಧಿಯಲ್ಲಿನ ಜನಸ್ಪಂದನ, ಘಟನಾವಳಿಗಳು ಕಂಡಂತೆ, ಕೇಳಿದ ಹಾಗೆ ದಾಖಲಿಸಿದ್ದಾರೆ ಸಮಿತಿ ಕಾರ್ಯದರ್ಶಿ.

ಜೂನ್ 8 ರ ಬೆಳಿಗ್ಗವರೆಗೆ ಶುಕ್ರ ಸಂಕ್ರಮ ವೀಕ್ಷಣೆಗೆ ಕನ್ನಡಕ ಎಲ್ಲಿ ಸಿಗುತ್ತವೆ? ಬೆಲೆ ಎಷ್ಟು? ಈಗ ಬಂದರೆ ಸಿಗುತ್ತಾ? ನಮ್ಮ ಊರಿನಲ್ಲಿ ಯಾರ ಬಳಿ ಸಿಗುತ್ತವೆ ಎಂಬ ದೂರವಾಣಿ ಕರೆಗಳ ಮಹಾಪೂರವೇ ಹರಿದು ಬರುತ್ತಿದ್ದರೆ ಬೆಳಿಗ್ಗೆ 10.45 ಆಗುತ್ತಿದ್ದಂತೆ ಸರ್, ನಾನು ಬೆಳಗಾಂವಿ ಜಿಲ್ಲೆಯ ಅಥಣಿಯಿಂದ ಮಾತನಾಡುತ್ತಿದ್ದೇನೆ, ಶುಕ್ರ ಗ್ರಹ ಕಾಣಿಸುತ್ತಿಲ್ಲ, ನಾನು ದೇವಯ್ಯ ಸ್ವಾಮಿ, ರಾಯಚೂರು ಜಿಲ್ಲೆಯ ಮಾನ್ವಿಯಿಂದ ಕಾಣುತ್ತಿಲ್ರಿ ಎಂಬ ಕರೆಗಳು ಬರತೊಡಗಿದವು. ಕೂಡಲೇ ಈ ಪ್ರಶ್ನೆಗಳು ಮಾಯವಾಗಿ ನಾನು 10.55 ಕ್ಕೆ ನೋಡಿದೆ ಎಂದು ಹೂವಿನ ಹಡಗಲಿಯ ಮೋಹಿನಿ ಜೈನ್, 11.02 ಕ್ಕೆ ನೋಡಿದೆ ಎಂದು ನಂಜನಗೂಡಿನ ಸುಕುಮಾರ್, ಚಿಕ್ಕೋಡಿಯ ಬಸವರಾಜು, ಮೈಸೂರಿನ ಬಸವರಾಜ್, ಕೋಲಾರದ ಹ.ಮಾ.ರಾಮಚಂದ್ರ, ರಾಯಚೂರಿನ ಜಿ.ಬಸಪ್ಪ ಹೀಗೆ ಅನೇಕ ಗೆಳೆಯರು/ ಕಾರ್ಯಕರ್ತರು ಒಂದೇ ಸಮನೆ ಫೋನ್ ಕರೆ ಮಾಡಲಾರಂಭಿಸಿದರು. ಗುಲ್ಬರ್ಗ ಜಿಲ್ಲೆಯ ಆಳಂದದಲ್ಲಿ ಮಾಜಿ ಉಪಸಭಾಪತಿ ಬಿ.ಆರ್.ಪಾಟೀಲ್‌ರವರು ವೀಕ್ಷಣೆಯ ಸಮಾರಂಭದ ಉದ್ಘಾಟನೆ ನೆರವೇರಿಸಿದರು, ಆಳಂದದ ನಗರವೇ ಅಲ್ಲಿ ನೆರೆದಿತ್ತು ಎಂದು ಶರಣಬಸಪ್ಪ ಧೂಳೆ ತಿಳಿಸಿದರು.


ಈ ಬಾರಿ ಇದೆಲ್ಲ ಸಾಧ್ಯವಾಗಿದ್ದು ಭಾರತ ಜ್ಞಾನ ವಿಜ್ಞಾನ ಸಮಿತಿ ಸಂಘಟಿಸಿದ್ದ ಸುಮಾರು 60 ಒಂದು ದಿನದ ಕಾರ್ಯಾಗಾರ, ಪತ್ರಿಕಾಗೋಷ್ಠಿ ಮತ್ತು ಮಾಧ್ಯಮಗಳು ನೀಡಿದ ಅದ್ಭುತವಾದ ಪ್ರಚಾರದಿಂದ. 1995 ಹಾಗೂ 1999 ರಲ್ಲಿ ಸರಾಸರಿ 20 ಸಾವಿರ ಹಾಗೂ 22.5 ಸಾವಿರ ಸೌರ ಕನ್ನಡಕಗಳನ್ನು ಸಮಿತಿ ಮಾರಾಟ ಮಾಡಿದ್ದರೆ ಈ ಬಾರಿ ಇದು 26,200 ಕ್ಕೆ ಏರಿತು. ಇಷ್ಟಾದರೂ ಎಂದಿನಂತೆ ಇಂದು ಬೆಳಿಗ್ಗೆ ಎಲ್ಲಿಲ್ಲದ ಬೇಡಿಕೆ ಹೆಚ್ಚಿತು. ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲಿಯೂ ಇದೇ ರೀತಿಯ ಬೇಡಿಕೆ. ಒಂದೆಡೆ ಕನ್ನಡಕಗಳನ್ನು ಹೆಚ್ಚು ತರಿಸಿದಲ್ಲಿ ಉಳಿದರೆ ಏನು ಮಾಡುವುದೆಂಬ ಆತಂಕವಾದರೆ ಇನ್ನೊಂದೆಡೆ ಜನರ ಉತ್ಸಾಹಕ್ಕೆ ತಕ್ಕಂತೆ ಪ್ರತಿಕ್ರಿಯಿಸಲಾಗಲಿಲ್ಲ ಎಂಬ ಕೊರಗು. ಸಮಿತಿ ಲಾಭಾಪೇಕ್ಷೆಯಿಲ್ಲದೇ ಜನಪರ ವಿಜ್ಞಾನದ ಉದ್ದೇಶದೊಂದಿಗೆ ಅತಿ ಕಡಿಮೆ ಅಂದರೆ ಜನಸಾಮಾನ್ಯ ಹಾಗೂ ವಿದ್ಯಾರ್ಥಿಗಳ ಕೈಗೆಟುಕುವ ಬೆಲೆಗೆ ಕನ್ನಡಕಗಳನ್ನು ಒದಗಿಸಿತು. 5 ಸಾವಿರ ಪುಸ್ತಕಗಳನ್ನು ಮುದ್ರಿಸಿ 15 ದಿನಗಳಲ್ಲಿ ಮಾರಾಟ ಮಾಡಲಾಯ್ತು. ರಾಜ್ಯದ ಬಹುತೇಕ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗೂ ಅನೇಕ ತಾಲ್ಲೂಕು ಕೇಂದ್ರಗಳು ಇನ್ನೂ ಕೆಲವೆಡೆ ಶಾಲಾಮಟ್ಟದಲ್ಲಿ ಈ ಬಗ್ಗೆ ಉಪನ್ಯಾಸ, ಪ್ರಶ್ನೋತ್ತರದ ಮೂಲಕ ಜಾಗೃತಿ ಮೂಡಿಸಲಾಗಿತ್ತು. ಇದರಿಂದಾಗಿ ಹೆಚ್ಚು ಜನ ಉತ್ಸಾಹದಿಂದ ವೀಕ್ಷಿಸಲು ಮುಂದೆ ಬಂದರು.

ಈ ರೀತಿಯ ಉತ್ಸಾಹ ಒಂದೆಡೆಯಾದರೆ: ಈ ಸಮಯದಲ್ಲಿ ಗರ್ಭಿಣಿಯರು ಆಚೆ ಬರುವ ಹಾಗಿಲ್ಲವಂತೆ ಹೌದೆ, ಜನ, ಪ್ರಾಣಿ ಸಸ್ಯಗಳ ಮೇಲೆ ಯಾವ ಪರಿಣಾಮ ಆಗುತ್ತೆ, ಎಷ್ಟು ಗಂಟೆಗೆ ಪ್ರೇಯರ್ ಮಾಡಬೇಕು? ನಾನು ಯಾವುದೋ ಕಾರ್ಯಕ್ರಮಕ್ಕೆ ಹೋಗಬೇಕು ಹೊರಗೆ ಹೋಗಬಹುದೇ, ನಮ್ಮ ಮಗುವನ್ನು ಶಾಲೆಗೆ ಕಳಿಸಬಹುದೇ, ಈ ಫಿಲ್ಟರ್ ಬೇರೆಲ್ಲೋ ಕೊಂಡುಕೊಂಡೆ ಇದರ ಮೂಲಕ ನೋಡಬಹುದೇ ಎಂಬ ಆತಂಕದ ಪ್ರಶ್ನೆಗಳೂ ಬಂದವು. ಕೆಲವು ಶಾಲೆಗಳಲ್ಲಂತೂ ಅದೂ ಬೇಡ- ಇದೂ ಬೇಡ ಎಂದು ರಜೆ ಕೊಟ್ಟಿದ್ದೂ ತಿಳಿಯಿತು. ಜನರಿಂದ ಸಮಿತಿಯ ಸದಸ್ಯರು ಬಂದ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಒದಗಿಸಿ ಜನರಲ್ಲಿ ವೈಜ್ಞಾನಿಕತೆ ತುಂಬುವಲ್ಲಿ ಯಶಸ್ವಿಯಾದರು. ಈ ರೀತಿ ವಿಚಾರಿಸುವವರಲ್ಲಿ ಜ್ಯೋತಿಷ್ಯದವರೂ ಹಿಂದೆ ಬೀಳಲಿಲ್ಲ ಎಂಬುದೊಂದು ವಿಶೇಷ.



ಯುಗದ ಕೌತುಕ ಕಳೆದುಕೊಳ್ಳಲಿ ಹೇಗೆ? ಚಿಣ್ಣರ ವೀಕ್ಷಣೆ

ಬೆಳಿಗ್ಗೆ 10.30 ಕ್ಕೆ ಭಾರತ ಜ್ಞಾನ ವಿಜ್ಞಾನ ಸಮಿತಿ ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗಾಗಿ ವೀಕ್ಷಣೆ ಏರ್ಪಡಿಸಿತ್ತು. ಪ್ರಯೋಗಶಾಲೆಗಳಿಂದ ಹೊರಬಂದ ವಿದ್ಯಾರ್ಥಿಗಳು, ಬೋಧಕ - ಬೋಧಕೇತರ ವರ್ಗ, ದಾರಿಯಲ್ಲಿ ಸಾಗುವವರು ಎಲ್ಲರೂ ಒಮ್ಮೆ ಬಂದು ವೀಕ್ಷಿಸಿದರು. ವಿಜ್ಞಾನ ಮಂದಿರದ ಪರಿಸರ ವಿಜ್ಞಾನ ಕೇಂದ್ರದ ಶ್ರೀಮತಿ ಹಾಗೂ ಗೀತ ಎದುಸಿರು ಬಿಡುತ್ತಾ ಓಡಿ ಬರುವಷ್ಟರಲ್ಲಿ 3.30 ಆಗಿತ್ತು. ಹೀಗೆ ಪುಳಕಿತರಾದರು. ಎಷ್ಟೇ ಪ್ರಯತ್ನಿಸಿದರೂ ಕೆಲವರಿಗೆ ಕಾಣಲೇ ಇಲ್ಲ. ಈ ಬಗ್ಗೆ ನಾವು ನಡೆಸಿದ ಉಪನ್ಯಾಸಗಳಲ್ಲಿ ದೃಷ್ಟಿದೋಷ ಪರೀಕ್ಷೆಗೂ ಇದು ಸಕಾಲ ಎಂದು ತಿಳಿಸಲಾಗಿತ್ತು. ಹಾಗಾಗಿ ದೃಷ್ಟಿದೋಷ ಇದ್ದ ಕೆಲವರು ನೋಡಲಾಗದೇ ನಿರಾಶರಾಗಬೇಕಾಯ್ತು. ರಾಜ್ಯದ ಬಳ್ಳಾರಿ, ರಾಯಚೂರು, ಬೆಳಗಾಂವಿಯ ಅನೇಕ ಕಡೆಗಳಲ್ಲಿ ತುಂಬಾ ಚೆನ್ನಾಗಿ ಕಂಡು ಬಂದರೆ ಸಕಲೇಶಪುರದಿಂದ ಚಂದ್ರಶೇಖರ್, ಹಾಸನದಿಂದ ಮೋಹನಾಕ್ಷಿ, ಉಡುಪಿ ಜಿಲ್ಲೆಯ ಸಾ.ಶಿ.ಇಲಾಖೆ ಉಪನಿರ್ದೇಶಕರಾದ ಈ.ನಂಜಪ್ಪ, ಮೋಡ ಹಾಗೂ ಮಳೆ ಇದೆ,



ಶುಕ್ರ ಸಂಕ್ರಮಣ

ಕಾಣುತ್ತಿಲ್ಲ, ಆದರೂ ಪ್ರಯತ್ನಿಸುತ್ತೇವೆ ಎಂದು ತಿಳಿಸಿದರು. ಆದರೆ ಉಡುಪಿಯಲ್ಲಿ 2 ಗಂಟೆಗೆ ಸ್ವಲ್ಪ ಕಾಲ ಸೂರ್ಯ ಕಾಣಿಸಿದರೂ ಶುಕ್ರನನ್ನು ನೋಡಲು ಸಾಧ್ಯವಾಗಲೇ ಇಲ್ಲ ಎಂದು ತಿಳಿಯಿತು. ತುಮಕೂರು ಜಿಲ್ಲೆ ಸಿರಾ ತಾಲೂಕಿನಿಂದ ಪ್ರಭಾಕರ್ ಕರೆ ಮಾಡಿ ತಾಲೂಕಿನ ಎಲ್ಲ ಶಾಲೆಯ ಮಕ್ಕಳು ಅಲ್ಲದೆ ಸ್ವಸಹಾಯ ಸಂಘದ ಮಹಿಳೆಯರೂ ವೀಕ್ಷಿಸಿದರೆಂದು ವರದಿ ಮಾಡಿದರು. ಬೀದರ್ ಜಿಲ್ಲೆಯ ಭಾಲ್ಕಿಯಿಂದ ಓಂ ಪ್ರಕಾಶ್ ರೊಟ್ಟಿಯವರು ಮಾತನಾಡಿ 12 ಗಂಟೆಯಿಂದ 4 ರವರೆಗೆ 3ಸಾವಿರ ಜನರು ವೀಕ್ಷಿಸಿದರೆಂದು ತಿಳಿಸಿದರು.

ಭಾರತ ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರಿನಲ್ಲಿ ಅಲ್ಲದೇ ತುಮಕೂರಿನ 8 ಕಡೆ, ಮೈಸೂರಿನ 4 ಕಡೆ, ರಾಯಚೂರಿನ 40 ಕಡೆ, ಕೊಪ್ಪಳದ 25 ಕಡೆ, ಹೀಗೆ ಸುಮಾರು 300 ಕಡೆಗಳಲ್ಲಿ ವೀಕ್ಷಣೆಗೆ ವ್ಯವಸ್ಥೆ ಮಾಡಿತ್ತು. ಸಂಜೆ 4 ರವರೆಗೂ ರಾಜ್ಯದ ಮೂಲೆ ಮೂಲೆಗಳಿಂದ ಸರ್, ನಮಗೆ ಕನ್ನಡಕ ಸಿಗಲಿಲ್ಲ, ಎಲ್ಲಿ ನೋಡುವುದು ಎಂಬ ಕರೆಗಳು ಬರುತ್ತಲೇ ಇದ್ದವು. ಕಳೆದೆರಡು ಗ್ರಹಣಗಳ ಅನುಭವದಿಂದ ಈ ರೀತಿಯ ಉತ್ಸಾಹವನ್ನು ನಿರೀಕ್ಷೆ ಮಾಡಿದ್ದರೂ ಇದು ನಿರೀಕ್ಷೆಯನ್ನು ಮೀರಿದ್ದಾಗಿತ್ತು. ಸೋಮವಾರ ಸಂಜೆ 6 ಕ್ಕೆ ಕೊನೆಯ ನಿರ್ಧಾರ ಮಾಡಿ ಅಗತ್ಯವಾದ ಕನ್ನಡಕಗಳಿಗೆ ಬೇಡಿಕೆ ಸಲ್ಲಿಸಿದರೂ ನಂತರ ಕೊಪ್ಪಳ, ಹರಿಹರ, ದಾವಣಗೆರೆ, ಹರಪನಹಳ್ಳಿ, ರಾಯಚೂರು, ತುಮಕೂರು, ಮೈಸೂರು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯಗಳಿಂದ ಇನ್ನಿಲ್ಲದ ಬೇಡಿಕೆ ಆರಂಭವಾಯಿತು. ಈ ಎಲ್ಲ ಲೆಕ್ಕಗಳ ಪ್ರಕಾರ ರಾಜ್ಯದಲ್ಲಿ ಸುಮಾರು 5 ಲಕ್ಷ ಜನರು ಗ್ರಹಣ ವೀಕ್ಷಿಸಿರುವ ಅಂದಾಜಿದೆ. ಆದರೆ ರಾಜ್ಯದ ಜನಸಂಖ್ಯೆಗೆ ಹೋಲಿಸಿದಾಗ ನೂರರಲ್ಲಿ ಒಬ್ಬರು ಮಾತ್ರ ವೀಕ್ಷಿಸಿದ್ದಾರೆ. ದಾರಿ ಬಹುದೂರ ಇದೆ. ವೈಜ್ಞಾನಿಕ ಜಾಗೃತಿ ಮೂಡಿಸುವ ಕೆಲಸ ಸತತವಾಗಿ ಆಗಬೇಕಾಗಿದೆ. ಅದಕ್ಕಾಗಿ ಇಂತಹ ಖಗೋಳ ವಿದ್ಯಮಾನಗಳು ತುಂಬಾ ಸಹಾಯಕ. ಈ ಬಾರಿಯ ಶುಕ್ರ ಸಂಕ್ರಮವನ್ನು ವ್ಯವಸ್ಥಿತವಾಗಿ ಬಳಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಅನೇಕ ಕಡೆಗಳಲ್ಲಿ ವಿದ್ಯಾರ್ಥಿಗಳು ಭೂಮಿ ಸೂರ್ಯರ ನಡುವಿನ ದೂರವನ್ನು ಅಳೆಯುವ ಪ್ರಯತ್ನ ಮಾಡಿದರು. ಪ್ರಾರಂಭದಲ್ಲಿ ಅನೇಕರಿಗೆ ಗೋಚರಿಸದಿದ್ದರೂ 11 ರ ಸುಮಾರಿಗೆ ಸೂರ್ಯನ ಮುಂದೆ ಒಂದು ಸಣ್ಣ ಕಪ್ಪು ಚುಕ್ಕೆಯನ್ನು ಕಂಡು ಪುಳಕಿತರಾದರು. ಸುಮಾರು 3 ಗಂಟೆಯವರೆಗೂ ಕಂಡ ಈ ನಯನಮನೋಹರ ದೃಶ್ಯ ನಂತರ ಪ್ರೊ.ರಾಮಕೃಷ್ಣರಾವ್‌ರವರ ಅಭಿಪ್ರಾಯ ಬಹುತೇಕ ನಿಜವಾಗಿದೆ. ಇದಕ್ಕಾಗಿ ಕಳೆದ 15 ದಿನಗಳಿಂದ ರಾಜ್ಯದ ಮೂಲೆ ಮೂಲೆಗಳಿಗೆ ಪ್ರೊ.ರಾಮಕೃಷ್ಣರಾವ್ ಮತ್ತು ಜ್ಞಾನ ವಿಜ್ಞಾನ ಸಮಿತಿಯ ಕಾರ್ಯಕರ್ತರು ಸಂಚರಿಸಿ ಈ ಬಗ್ಗೆ ಉಪನ್ಯಾಸ ನೀಡಿ ಜಾಗೃತಿ ಮೂಡಿಸಿದ್ದಾರೆ. ಇದರಂತೆ ಇತರ ಜನವಿಜ್ಞಾನ ಸಂಘಟನೆಗಳಾದ ಬೆಂಗಳೂರು ಸೈನ್ಸ್ ಫೋರಮ್, ನೆಹರೂ ಪ್ಲಾನಿಟೋರಿಯಮ್, ಕ.ರಾ.ವಿ.ಪ ಗಳೂ ಮಹತ್ತರ ಪಾತ್ರ ವಹಿಸಿವೆ. 4.40 ಕ್ಕೆ ಕಛೇರಿಗೆ ಬಂದ ಏರ್ ಫೋರ್ಸ್‌ನ ನಿವೃತ್ತ ಅಧಿಕಾರಿ ರವಿ, ಸಂಕ್ರಮದ ಅವಧಿ ಮುಗಿದಿದೆ ಎಂದರೂ ಕೇಳದೇ ಉಳಿದಿದ್ದ ಎರಡೇ ಫಿಲ್ಟರ್‌ಗಳನ್ನು ಕೊಂಡೊಯ್ದು ಸೂರ್ಯನನ್ನು ನೋಡಲು ಮಾಡಿದ ಪ್ರಯತ್ನ ಮೋಡದ ಆಗಮನದಿಂದಾಗಿ ವಿಫಲವಾಯ್ತು. ಇದು ಜನರ ಕಾರ್ಯಕ್ರಮವಾಗಿ ಯಶಸ್ವಿಗೊಂಡಿತು. ಸರ್ಕಾರದ ಹಣಕಾಸು ಇದರಲ್ಲಿ ಒಳಗೊಳ್ಳದೇ ಇದ್ದುದರಿಂದ 1882 ರಲ್ಲಿ ಸಂಭವಿಸಿದ ಸಂಕ್ರಮ ಕುರಿತ ಪ್ರಯೋಗಕ್ಕಾಗಿ ಹಣ ಪಡೆದು ಖಗೋಳಮಾನದ ನಿಖರವಾದ ಅಳತೆ ಸಾಧ್ಯವಾಗದ ಕಾರಣ ಆ ಖರ್ಚುವೆಚ್ಚಗಳ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಗಲಾಟೆಯಾಗಿ ಸರ್‌ಸೈಮನ್ಸ್ ನ್ಯೂಕುಂಬ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದಂತೆ ಇಲ್ಲಿ ಯಾರೂ ರಾಜೀನಾಮೆ ನೀಡಬೇಕಾಗಿಲ್ಲ. ಈ ಬಾರಿ ಅಂಥ ವಿಶೇಷ ಪ್ರಯೋಗಗಳೇನೂ ಇಲ್ಲ, ಹೊಸದೇನನ್ನು ಕಂಡುಹಿಡಿಯಲು ಏನೂ ಇಲ್ಲ ಎಂಬ ಹೇಳಿಕೆಗಳಲ್ಲಿ ಏನಾದರೂ ಬದಲಾವಣೆಯಾಗಿ ಹೊಸ ಸುದ್ದಿಯೇನಾದರೂ ಬರಲಿದೆಯೇ ಎಂದು ಕಾದು ನೋಡಬೇಕಾಗಿದೆ.

■ ಈ. ಬಸವರಾಜು



ಬೆಂಗಳೂರಿನ ನೆಹರು ತಾರಾಲಯದಲ್ಲಿ ನೆರೆದಿದ್ದ ಶುಕ್ರ ಸಂಕ್ರಮಣ ಕುತೂಹಲಿ ವೀಕ್ಷಕರು

ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳ ಭಾಷಣ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಸಾಗಲಿರುವ ಹಾದಿಯನ್ನು ಬಿಂಬಿಸುತ್ತದೆ. ಸಾಮಾನ್ಯ ಕನಿಷ್ಟ ಕಾರ್ಯಕ್ರಮ (ಸಿಎಂಪಿ) ದ ಪ್ರಮುಖ ಅಂಶಗಳಿಗೆ ಬದ್ಧತೆಯನ್ನು ವ್ಯಕ್ತಪಡಿಸಿದೆ. ಆದರೆ ಇನ್ನೊಂದೆಡೆ ಆ ಚೌಕಟ್ಟನ್ನೂ ಮೀರಿದೆ... ಆ ಅಂಶಗಳತ್ತ ಗಮನ ಸೆಳೆವ ಗಂಭೀರ ವಿಶ್ಲೇಷಣೆಯ ಲೇಖನವಿಲ್ಲಿ....



ರಾಷ್ಟ್ರಪತಿ ಭಾಷಣ ಸಾಮಾನ್ಯ ಕನಿಷ್ಟ ಕಾರ್ಯಕ್ರಮಕ್ಕೆ ಬದ್ಧವಾಗಿರಬೇಕು

14ನೇ ಲೋಕಸಭಾ ಚುನಾವಣೆಗಳ ನಂತರ ಸಂಸತ್ತಿನ ಮೊದಲ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿಗಳು ಮಾಡಿದ ಮೊದಲ ಭಾಷಣ ಡಾ. ಮನಮೋಹನ ಸಿಂಗ್ ನೇತೃತ್ವದ ಹೊಸ ಸಂಯುಕ್ತ ಪ್ರಗತಿಪರ ಮೈತ್ರಿಕೂಟ (ಯುಪಿಎ) ಸರ್ಕಾರದ ಒಂದು ನೀತಿ ನಿರೂಪಣಾ ಹೇಳಿಕೆಯಾಗಿದೆ. ಆದ್ದರಿಂದ ಇದು ಹೊಸ ಸರ್ಕಾರ ಯಾವ ದಿಕ್ಕು ಹಿಡಿಯಲಿದೆ ಎಂದು ತಿಳಿಯಬೇಕೆಂದಿರುವ ಎಲ್ಲಾ ವಿಭಾಗಗಳ ಗಮನ ಸೆಳೆದಿದೆ.

ಈ ಭಾಷಣದಲ್ಲಿ ಪ್ರಸ್ತಾಪಿಸಿರುವ ಧೋರಣಾ ಕ್ರಮಗಳು ಒಟ್ಟಾರೆಯಾಗಿ ಯು.ಪಿ.ಎ. ಅಂಗೀಕರಿಸಿದ ಹಾಗೂ ಎಡಪಕ್ಷಗಳೂ ಬೆಂಬಲಿಸಿದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಪ್ರಕಾರ ಇವೆ. ಹೊಸ ಸರ್ಕಾರ ಕೈಗೆತ್ತಿಕೊಳ್ಳಬಯಸುವ ಧೋರಣಾಕ್ರಮಗಳು ಮತ್ತು ಆದ್ಯತೆಗಳನ್ನು ಈ ಕಾರ್ಯಕ್ರಮ ಮುಂದಿಟ್ಟಿತ್ತು. ರಾಷ್ಟ್ರಪತಿಗಳ ಭಾಷಣ ಈ ಕಾರ್ಯಕ್ರಮಗಳಲ್ಲಿನ ಒಟ್ಟಾರೆ ನಿರ್ದೇಶನಗಳನ್ನು ಪ್ರಸ್ತುತ ಪಡಿಸಿದೆ. ಅವೆಂದರೆ ಮತಾಂಧ ಮತ್ತು ಮೂಲಭೂತ ಶಕ್ತಿಗಳೊಡನೆ ಕಠಿಣವಾಗಿ ವರ್ತಿಸಿ ಧರ್ಮನಿರಪೇಕ್ಷ ಮೌಲ್ಯಗಳನ್ನು ರಕ್ಷಿಸುವುದು ಮತ್ತು ಪ್ರೋತ್ಸಾಹಿಸುವುದು, ಉದ್ಯೋಗವಕಾಶ ನಿರ್ಮಿಸುವ ರೀತಿಯಲ್ಲಿ ವಾರ್ಷಿಕ 7-8 ಶೇಕಡಾ ಆರ್ಥಿಕ ಬೆಳವಣಿಗೆ ದರ ಸಾಧನೆಯಾಗುವಂತೆ ಮಾಡುವುದು, ಕೃಷಿ ಕೂಲಿಕಾರರು ಮತ್ತು ಕಾರ್ಮಿಕರ ಆದಾಯ ಮತ್ತು ಬದುಕು ಉತ್ತಮಗೊಳ್ಳುವುದರ ಮೇಲೆ ಗಮನ ಕೇಂದ್ರೀಕರಿಸುವುದು ಹಾಗೂ ಮಹಿಳೆಯರನ್ನು ಸಶಕ್ತಗೊಳಿಸುವುದು ಮತ್ತು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಇತರ ಹಿಂದುಳಿದ ಜಾತಿಗಳು ಮತ್ತು ಧಾರ್ಮಿಕ ಅಲ್ಪಸಂಖ್ಯಾತ ವಿಭಾಗಗಳಿಗೆ ಸೇರಿದ ಜನಗಳಿಗೆ ಸಮಾನ ಅವಕಾಶ ಒದಗಿಸುವುದು.

ಇದನ್ನು ಈಡೇರಿಸಲು ಸರ್ಕಾರ ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಹಾಗೂ ಕೃಷಿ ಸಾಲ ಗಮನಾರ್ಹವಾಗಿ ಹರಿದುಬರುವಂತೆ ಮಾಡುವ ಭರವಸೆ ನೀಡಿದೆ. ಡಬ್ಲ್ಯುಟಿಓ ಮಾತುಕತೆಗಳಲ್ಲಿ ರೈತರ ಹಿತಾಸಕ್ತಿಗಳನ್ನು, ಬದುಕನ್ನು ರಕ್ಷಿಸುವ ನಿಲುವು ತೆಗೆದುಕೊಳ್ಳಲಾಗುವುದು. ಉದ್ಯೋಗವಕಾಶ ನಿರ್ಮಾಣಕ್ಕೆ ಒಂದು ರಾಷ್ಟ್ರೀಯ ಉದ್ಯೋಗ ಭರವಸೆ ಶಾಸನವನ್ನು ತರುವ ಒಂದು ಧೈರ್ಯದ ವಚನ ನೀಡಲಾಗಿದೆ. ಈ ಶಾಸನದ ಪ್ರಕಾರ ಪ್ರತಿಯೊಂದು ಗ್ರಾಮೀಣ ಮನೆಯ ಕೆಲಸ ಮಾಡಬಲ್ಲ ಒಬ್ಬ ವ್ಯಕ್ತಿಗೆ 100 ದಿನಗಳ ಕೆಲಸವನ್ನು ಒದಗಿಸುತ್ತದೆ.

ಕೋಮುವಾದವನ್ನು ಎದುರಿಸಲು ಕ್ರಮಗಳು, ಕೋಮು ಹಿಂಸಾಚಾರವನ್ನು ಎದುರಿಸಲು ಒಂದು ಮಾದರಿ ಮಸೂದೆಯನ್ನು ತರುವುದು ಹಾಗೂ ಪೂಜಾಸ್ಥಳಗಳ ರಕ್ಷಣಾ ಕಾನೂನಿನ ಜ್ಯಾರಿಯ ವ್ಯವಸ್ಥೆ - ಇವೆಲ್ಲಾ ಧರ್ಮನಿರಪೇಕ್ಷ ಮೌಲ್ಯಗಳನ್ನು ರಕ್ಷಿಸುವ ನಿರ್ಧಾರವನ್ನು ಅಭಿವ್ಯಕ್ತಪಡಿಸಿದೆ.

ಪಂಚಾಯತಿ ರಾಜ್ಯ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಶಾಸನ ಸಭೆಗಳಲ್ಲಿ, ಸಂಸತ್ತಿನಲ್ಲಿ ಮಹಿಳೆಯರಿಗೆ ಮೂರನೇ ಒಂದು ಮೀಸಲಾತಿ ಶಾಸನದ ವಚನ ನೀಡಲಾಗಿದೆ. ಶಿಕ್ಷಣ ಮೇಲೆ ಸಾರ್ವಜನಿಕ ಖರ್ಚನ್ನು ಹೆಚ್ಚಿಸಿ ಕ್ರಮೇಣ ಅದನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ 6 ತಲುಪಿಸುವ ಮಹತ್ವದ ಕ್ರಮ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಸಾರ್ವತ್ರಿಕರಿಸುವ ವಚನಕ್ಕೆ ಹಣ ಕೂಡಿಸಲು ಕೇಂದ್ರ ತೆರಿಗೆಗಳ ಮೇಲೆ ಮೇಲ್ತೆರಿಗೆಯ ಕ್ರಮದ ಪ್ರಸ್ತಾಪವಿದೆ.

ಭೂಮಿತಿ ಕಾನೂನುಗಳನ್ನು ಜಾರಿ ಮಾಡುವ ಮೂಲಕ ಭೂಹೀನ ಕುಟುಂಬಗಳಿಗೆ ಭೂಮಿ ಒದಗಿಸುವ ಹಾಗೂ ಭೂಮಿತಿ ಕಾನೂನುಗಳನ್ನು ಹಿಂತೆಗೆದುಕೊಳ್ಳುವುದನ್ನು ನಿಲ್ಲಿಸುವ ಭರವಸೆಯಿದೆ. ಅರಣ್ಯ ಪ್ರದೇಶಗಳಿಂದ ಬುಡಕಟ್ಟು ಸಮುದಾಯಗಳನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಲಾಗುವುದು ಎಂಬ ವಚನವೂ ಇದೆ. ಪೋಟಾ ಕಾಯ್ದೆಯನ್ನು ರದ್ದು ಮಾಡಲಾಗುವುದು ಎಂಬ ಸಾಮಾನ್ಯ ಕನಿಷ್ಟ ಕಾಯ್ರುಮದ ವಚನವನ್ನು ಒತ್ತಿಹೇಳಲಾಗಿದೆ. ವಿದೇಶಾಂಗ ನೀತಿಯನ್ನು ಕುರಿತಂತೆ ರಾಷ್ಟ್ರಪತಿಗಳ ಭಾಷಣ ವಿಶ್ವ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಬಹುಧ್ರುವೀಯತೆಯನ್ನು ಪೋಷಿಸುವ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ವಚನವನ್ನು ಒತ್ತಿ ಹೇಳುತ್ತದೆ.

ರಾಷ್ಟ್ರಪತಿಗಳ ಭಾಷಣದ ಧೋರಣಾ ದಿಕ್ಕು ಒಟ್ಟಾರೆಯಾಗಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮಕ್ಕೆ ಬದ್ಧವಾಗಿದ್ದರೂ ಕೆಲವು ವಿಷಯಗಳಲ್ಲಿ ಆ ಚೌಕಟ್ಟನ್ನು ಬಿಟ್ಟು ಹೋಗಿರುವುದು ಕೂಡಾ ಎದ್ದು ಕಾಣುತ್ತಿದೆ. ಮುಖ್ಯವಾಗಿ ವಿದೇಶಾಂಗ ನೀತಿಯ ರಂಗದಲ್ಲಿ ಇದು ಸಂಭವಿಸಿದೆ. ರಾಷ್ಟ್ರಪತಿಗಳ ಭಾಷಣ ಒಂದು ಸರಳ ರೀತಿಯಲ್ಲಿ ಇರಾಕಿ ಜನತೆಗೆ ಜೂನ್ 30ರೊಳಗೆ ಸಾರ್ವಭೌಮತೆಯನ್ನು ವರ್ಗಾಯಿಸುತ್ತೇವೆ ಎಂಬ ಅಮೆರಿಕನ್ನರ ಭರವಸೆಯನ್ನು ಬೆಂಬಲಿಸಿದೆ. ಈ ಪ್ರಕ್ರಿಯೆಯಲ್ಲಿ ವಿಶ್ವ ಸಂಸ್ಥೆ ಒಳಗೊಂಡಿರುವ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಲಾಗಿದೆ. ಇದು ಇರಾಕಿನಲ್ಲಿರುವ ವಾಸ್ತವತೆಯನ್ನು ಬಿಂಬಿಸುವಂತದ್ದಲ್ಲ. ಇರಾಕಿನ ಜನತೆ ಅಮೆರಿಕನ್ನರ ಕಾನೂನು ಬಾಹಿರ, ಅಮಾನುಷ ಆಕ್ರಮಣದಡಿ ಸಂಕಟ ಪಡುತ್ತಿದ್ದಾರೆ. ಈ ಆಕ್ರಮಣಕ್ಕೆ ಪ್ರತಿರೋಧ ಜನಪ್ರಿಯ ಬಂಡಾಯದ ಪ್ರಮಾಣವನ್ನು ಪಡೆಯುತ್ತಿದೆ. ಇರಾಕಿ ಕೈದಿಗಳಿಗೆ ನೀಡಿರುವ ಚಿತ್ರಹಿಂಸೆ, ದುರುಪಯೋಗ ಈ ಆಕ್ರಮಣಕೋರರ ಗೋಸುಂಬೆತನವನ್ನು ಮತ್ತು ಜನಾಂಗ ದ್ವೇಷ ನೀತಿಯನ್ನು ಬಯಲಿಗೆ ತಂದಿದೆ. ಸಾರ್ವಭೌಮತೆಯನ್ನು ಹಿಂದಿರುಗಿಸಲಾಗುತ್ತಿದೆ ಎಂದು ತೋರಿಸಲು ತಾವೇ ಹೆಕ್ಕಿ ತೆಗೆದ ವ್ಯಕ್ತಿಗಳಿಂದ ಮಧ್ಯಂತರ ಸರ್ಕಾರವನ್ನು ರಚಿಸುತ್ತಿದ್ದಾರೆ. ಈ ಸರ್ಕಾರದ ಪ್ರಧಾನಮಂತ್ರಿ ನಿಕಟ ಸಿಐಎ ಸಂಪರ್ಕಗಳಿರುವ ಮನುಷ್ಯ ಎಂದು ಎಲ್ಲರಿಗೂ ಗೊತ್ತು. ಇದನ್ನು ಸಾರ್ವಭೌಮತೆಯ ವರ್ಗಾವಣೆ ಎನ್ನುವುದು ಹಾಸ್ಯಾಸ್ಪದ. ಅಮೆರಿಕಾದೊಂದಿಗೆ 'ಸಾಮರಿಕ ಸಂಬಂಧಗಳ' ವಾಜಪೇಯಿ ಸರ್ಕಾರದ ನೀತಿಯನ್ನು ಮುಂದುವರೆಸಲು ದೃಢ ನಿರ್ಧಾರ ಮಾಡಿರುವ ಅಮೆರಿಕಾ-ಪರ ಅಧಿಕಾರಶಾಹಿಗಳು ಮತ್ತು ಸಲಹೆಗಾರರ ಮಾರ್ಗದರ್ಶನದಲ್ಲಿ ನಡೆಯಲು ಸಾಧ್ಯವಿಲ್ಲ ಎಂಬುದನ್ನು ಮನಮೋಹನ್ ಸಿಂಗ್ ಸರ್ಕಾರ ಅರಿಯಬೇಕು.

ಇಸ್ರೇಲಿನೊಡನೆ ಸಂಬಂಧಗಳನ್ನು ಪ್ರಸ್ತುತಪಡಿಸಿದ ರೀತಿ, ಅವು 'ಪರಸ್ಪರ ಪ್ರಯೋಜನಕಾರಿ ಸಹಕಾರ' ಮತ್ತು 'ಮಹತ್ವಪೂರ್ಣ' ಎಂದು ವರ್ಣಿಸಿರುವುದು ಕೂಡಾ ಇಷ್ಟೇ ಆಕ್ಷೇಪಾರ್ಹ. ಇದು ಮುಖ್ಯ ಲಕ್ಷಣವೆಂದು ಹೇಳಿದ ಮೇಲೆ ಇದು ಪ್ಯಾಲಿಸ್ಟೇನ್ ಜನತೆಗೆ ನಮ್ಮ ನೀತಿಬದ್ಧ ಬೆಂಬಲವನ್ನು ಯಾವ ರೀತಿಯಲ್ಲೂ ದುರ್ಬಲಗೊಳಿಸುವುದಿಲ್ಲ ಎನ್ನುವ ಪ್ರಯತ್ನವೂ ಇದೆ. ಕ್ರಿಮಿನಲ್ ಶರೋನ್ ಆಡಳಿತ ಪ್ಯಾಲೆಸ್ಟೇನ್ ಜನತೆಯ ಮೇಲೆ ವಸಾಹತುಶಾಹಿ ದಮನವನ್ನು ಶಾಶ್ವತಗೊಳಿಸುತ್ತಿರುವುದರ ಬಗ್ಗೆ ಭಾರತೀಯ ಜನತೆ ತಮ್ಮ ಕ್ರೋಧವನ್ನು ವ್ಯಕ್ತಪಡಿಸಿದ್ದಾರೆ. ಪಶ್ಚಿಮ ತಟ ಮತ್ತು ಗಾಜಾದಲ್ಲಿ ಈಗಲೂ ಮಿಲಿಟರಿ ಕಾರ್ಯಾಚರಣೆಗಳಲ್ಲಿ ನೂರಾರು ಪ್ಯಾಲೆಸ್ಟೇನೀಯನ್ನರನ್ನು ಕೊಲ್ಲಲಾಗುತ್ತಿದೆ. ಪ್ರಭುತ್ವ ಭಯೋತ್ಪಾದನೆಯ ಒಂದು ಕಾರ್ಯಕ್ರಮದ ಮೂಲಕ ಪ್ಯಾಲೆಸ್ಟೇನಿಯನ್ ಮುಖಂಡರನ್ನು ಹತ್ಯೆಗೈಯಲಾಗುತ್ತಿದೆ. ವಾಜಪೇಯಿ ಆಡಳಿತ ಪ್ರದರ್ಶಿಸುತ್ತಿದ್ದ ಅದೇ ಭಾರತ-ಅಮೆರಿಕ-ಇಸ್ರೇಲ್ ಕೂಟವನ್ನು ಮುಂದುವರೆಸಲು ರಾಷ್ಟ್ರಪತಿಗಳ ಭಾಷಣ ಪ್ರಯತ್ನಿಸಿರುವುದು ಅತ್ಯಂತ ವಿಷಾದನೀಯ.

ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿರದ ಅಮೆರಿಕಾದೊಂದಿಗಿನ ಸಾಮರಿಕ ಸಂಬಂಧಗಳು ರಾಷ್ಟ್ರಪತಿ ಭಾಷಣದಲ್ಲಿ ಸ್ಥಾನ ಪಡೆದಿರುವ ರೀತಿ ಈ ಹೊಸ ಸರ್ಕಾರದ ಮೇಲೆ ಅಮೆರಿಕಾದ ಹಾಗೂ ಅದರ ಲಾಬ್ಬಿಗಳ ಒತ್ತಡ ಇರುವುದನ್ನು ತೋರಿಸಿಕೊಟ್ಟಿದೆ. ಸಮಾನ ಕನಿಷ್ಟ ಕಾರ್ಯಕ್ರಮ ಬಹುಧ್ರುವೀಯತೆಯನ್ನು ಪ್ರೋತ್ಸಾಹಿಸುವ ಎಲ್ಲಾ ರೀತಿಯ ಏಕಪಕ್ಷೀಯತೆಗಳನ್ನು ವಿರೋಧಿಸುವ ಒಂದು ಸ್ವತಂತ್ರ ವಿದೇಶಾಂಗ ನೀತಿಯ ಚೌಕಟ್ಟನ್ನು ಒದಗಿಸಿದೆ. ಈ ಕಾರ್ಯಕ್ರಮವನ್ನು ಬೆಂಬಲಿಸುವ ಸಿಪಿಐ(ಎಂ) ಮನಮೋಹನ್ ಸಿಂಗ್ ಸರ್ಕಾರ ಈ ಮೂಲ ನೀತಿಗಳಿಂದ ದೂರ ಸರಿಯಬಾರದು ಎಂದು ನಿರೀಕ್ಷಿಸುತ್ತದೆ.

ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಬಿಜೆಪಿ ಮೈತ್ರಿಕೂಟವನ್ನು ಸೋಲಿಸುವಲ್ಲಿ ಪಾತ್ರವಹಿಸಿದ ಎಲ್ಲಾ ಪಕ್ಷಗಳ ಕೆಲವು ಪ್ರಮುಖ ಆತಂಕಗಳನ್ನು ಒಳಗೊಂಡಿರುವ ಒಂದು ದಸ್ತಾವೇಜು ಎಂಬುದು ಸ್ಪಷ್ಟ. ಈ ದಸ್ತಾವೇಜಿನಲ್ಲಿ ಬಿಂಬಿತಗೊಂಡಿರುವ ಎಡಪಕ್ಷಗಳ ಕೆಲವು ಆತಂಕಗಳು ರಾಷ್ಟ್ರಪತಿಗಳ ಭಾಷಣದಲ್ಲಿ ಕಾಣುತ್ತಿಲ್ಲ. ಯುಪಿಎ ಸರ್ಕಾರ ಈ ಪ್ರಶ್ನೆಗಳನ್ನು ಗಂಭೀರವಾಗಿ ಜಾರಿಗೊಳಿಸುವುದು ಒಳ್ಳೆಯದು. ಇವುಗಳೆಂದರೆ ಕೃಷಿ ಕಾರ್ಮಿಕರಿಗೆ ಒಂದು ಸಮಗ್ರ ರಕ್ಷಣಾ ಶಾಸನ, ರಾಜ್ಯಗಳಿಗೆ ಸಾಲದ ಮೇಲಿನ ಬಡ್ಡಿ ದರಗಳನ್ನು ಇಳಿಸುವುದು, ರಾಜ್ಯಗಳಿಗೆ ಕೊಡಬಹುದಾದ ತೆರಿಗೆಗಳಲ್ಲಿ ಅವುಗಳ ಪಾಲನ್ನು ಹೆಚ್ಚಿಸುವುದು ಮತ್ತು ಪಂಚಾಯತೀರಾಜ್ಯ ಸಂಸ್ಥೆಗಳ ಮೂಲಕ ಕೇಂದ್ರ ಸರ್ಕಾರ ನಿಧಿಗಳನ್ನು ಒದಗಿಸುವ ಮೊದಲು ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸುವುದು.

ಖಾಸಗೀಕರಣವನ್ನು ಕುರಿತಂತೆ ಸಿಪಿಐ(ಎಂ) ಮತ್ತು ಎಡಪಕ್ಷಗಳಿಗೆ ಕಾಂಗ್ರೆಸ್ ಪಕ್ಷದೊಂದಿಗೆ ಮೂಲಭೂತ ಭಿನ್ನಾಭಿಪ್ರಾಯ ಇದೆ ಎಂಬುದು ಎಲ್ಲರಿಗೂ ಗೊತ್ತು. ಈ ವಿಷಯದಲ್ಲಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಒದಗಿಸಿದ ಸಮತೋಲನವನ್ನು ರಾಷ್ಟ್ರಪತಿಗಳ ಭಾಷಣ ಕೆಡಿಸಿದೆ. ಏಕೆಂದರೆ ಲಾಭದಲ್ಲಿರುವ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸುವುದಿಲ್ಲ ಎಂಬ ಸಾರ್ವತ್ರಿಕ ವಚನವನ್ನು ಈ ಭಾಷಣದಲ್ಲಿ ಸೇರಿಸಿಲ್ಲ. ಅಲ್ಲದೆ ಬಂದರುಗಳು, ವಿಮಾನ ನಿಲ್ದಾಣಗಳು, ರೈಲ್ವೇ, ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ ಇತ್ಯಾದಿ ಮೂಲರಚನೆಗಳಲ್ಲಿ ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಮಾತಾಡಿದೆ. ಇದು ವಿದ್ಯುತ್ ಮತ್ತು ಇತರ ಮೂಲ ಸೇವೆಗಳನ್ನು ಖಾಸಗೀಕರಿಸುವ ಸೂಚನೆ ಎಂದು ಕಾಣುವುದಾದರೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ಪ್ರಯತ್ನವನ್ನು ದೃಢವಾಗಿ ವಿರೋಧಿಸುತ್ತವೆ.

ಈ ರೀತಿ ಕೆಲವೆಡೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಿಂದ ದೂರ ಸರಿದಿದ್ದರೂ ಕೆಲವು ನ್ಯೂನ್ಯತೆಗಳಿದ್ದರೂ ರಾಷ್ಟ್ರಪತಿಗಳ ಭಾಷಣ ಸರ್ಕಾರಕ್ಕೆ ಧರ್ಮನಿರಪೇಕ್ಷ ಹಂದರವನ್ನು ರಕ್ಷಿಸಲು, ದುಡಿಯುವ ಜನಗಳಿಗೆ ಪರಿಹಾರ ಒದಗಿಸಲು ಹಾಗೂ ಹಿಂದಿನ ಸರ್ಕಾರದ ಕೆಲವು ಅಪಾಯಕಾರಿ ನೀತಿಗಳನ್ನು ಸರಿಪಡಿಸಲು ನೆರವಾಗುವ ಒಂದು ಧೋರಣಾ ಚೌಕಟ್ಟನ್ನು ಒದಗಿಸಿದೆ. ಮನಮೋಹನ್ ಸಿಂಗ್ ಈ ಭಾಷಣದಲ್ಲಿನ ದಿಕ್ಕಿನೊಂದಿಗೆ, ನ್ಯೂನ್ಯತೆಗಳನ್ನು, ಮಾರ್ಗಚ್ಯುತಿಗಳನ್ನು ಸರಿಪಡಿಸಿ ಸಂಯುಕ್ತ ಕನಿಷ್ಟ ಕಾರ್ಯಕ್ರಮದ ಜಾರಿಗೆ ಕ್ರಮಗಳನ್ನು ಕೈಗೊಳ್ಳುವುದು ಒಳ್ಳೆಯದು.

ವಿಧಾನ ಸಭೆಗಳಿಂದ ಸಂಸತ್ತಿನ ರಾಜ್ಯಸಭೆಗಳಿಗೆ ಆಯ್ಕೆಯಾಗಿರುವ ಕುರಿತು ಶಾಸನವೊಂದನ್ನು ಹಿಂದಿನ ಎನ್‌ಡಿಎ ಸರ್ಕಾರ ತಂದಿದೆ. ಇದರಲ್ಲಿ ಅತ್ಯಂತ ಪ್ರತಿಗಾಮಿಯಾದ ಕ್ರಮಗಳಿವೆ. ಒಕ್ಕೂಟದ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಇಂತಹ ಶಾಸನವನ್ನು ಸರಿಪಡಿಸಬೇಕೆಂದು ಆಗ್ರಹಿಸಿದ್ದಾರೆ ಹಿರಿಯ ಸಂಗಾತಿ ಸುರ್ಜಿತ್‌ರವರು

ಹರ್‌ಕಿಶನ್ ಸಿಂಗ್ ಸುರ್ಜಿತ್


ಪ್ರತಿಗಾಮಿ ಶಾಸನ ಬದಲಾಗಬೇಕು

ರಾಜ್ಯಸಭಾ ಸದಸ್ಯರ ಚುನಾವಣೆ ಪ್ರಕ್ರಿಯೆ ಕುರಿತು ರಾಜ್ಯಸಭಾ ಸದಸ್ಯರು ಪ್ರಖ್ಯಾತ ಅಂಕಣಕಾರರಾದ ಕುಲದೀಪ್ ನಾಯ್ಯರ್ ಸಲ್ಲಿಸಿದ ಅರ್ಜಿಯ ಮೇರೆಗೆ ಸುಪ್ರಿಂ ಕೋರ್ಟ್ ಮಧ್ಯ ಪ್ರವೇಶಿಸಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತಂದ ಶಾಸನದಿಂದಾಗಿ ಸಂವಿಧಾನದ ಒಕ್ಕೂಟ ಗುಣಲಕ್ಷಣಕ್ಕೆ ಒದಗಿರುವ ಅಪಾಯವನ್ನು ಇದು ತೋರಿದೆ. ರಾಜ್ಯಸಭೆಯನ್ನು ಸೃಷ್ಟಿಸುವಲ್ಲಿ ಸಂವಿಧಾನ ರಚನಾ ಸಭೆಯನ್ನು ಮಾರ್ಗದರ್ಶಿಸಿದ್ದ ಘನ ಉದ್ದೇಶವನ್ನು ನಿರುಪಯುಕ್ತಗೊಳಿಸುವ ಶಾಸನ ಇದಾಗಿದೆ.

2003'ರ ಆಗಸ್ಟ್‌ನಲ್ಲಿ ಅಂಗೀಕರಿಸಲಾದ ಈ ಶಾಸನವು ರಾಜ್ಯಸಭೆಗೆ ಚುನಾವಣಾ ವಿಧಾನವನನೇ ಬದಲಿಸಿತು. ರಾಜ್ಯ ಸಭೆಯ ಸಂರಚನೆಯಲ್ಲಿ ಮೂಲಭೂತ ಬದಲಾವಣೆಯನ್ನು ಈ ಶಾಸನ ತಂದಿತು. ರಾಜ್ಯಸಭೆಯ ಸದಸ್ಯರಾಗಲು ಸಂವಿಧಾನ ನಿರ್ದೇಶಿಸಿದ್ದ ಅರ್ಹತೆಯನ್ನು ಇದು ಇಲ್ಲದಾಗಿಸಿತು. ಈ ಹಿಂದೆ ರಾಜ್ಯ ಸಭೆಯ ಸದಸ್ಯರಾಗಲು ಸ್ಪರ್ಧಿಸಗಳು ಕನಿಷ್ಠ ಆಯ್ಕೆ ಬಯಸುವ ರಾಜ್ಯದ ಸಾಮಾನ್ಯ ನಿವಾಸಿಯಾಗಿರಬೇಕಿತ್ತು. ಆದರೆ ಪ್ರಸ್ತುತ ತಿದ್ದುಪಡಿ ಶಾಸನವು ಈ ಅರ್ಹತೆಯನ್ನು ತೆಗೆದುಹಾಕಿ ದೇಶದ ಯಾವುದೇ ರಾಜ್ಯದ ನಿವಾಸಿಯು ಯಾವುದೇ ರಾಜ್ಯದಿಂದಾದರೂ ಆಯ್ಕೆಯಾಗುವ ಅವಕಾಶ ಕಲ್ಪಿಸಿತು. ಅಂತೆಯೆ ರಾಷ್ಟ್ರದ ಯಾವುದೇ ಚುನಾವಣೆಯಲ್ಲೂ ಅನುಸರಿಸಲಾಗುವ ಅಂತೆಯೇ ರಾಜ್ಯಸಭಾ ಚುನಾವಣೆಗೆ ಅನುಸರಿಸಲಾಗುತ್ತಿದ್ದ ಗುಪ್ತ ಮತದಾನದ ವಿಧಾನವನ್ನು ಇಲ್ಲದಾಗಿಸಿತು. ಬಹಿರಂಗ ಮತದಾನಕ್ಕೆ ಅನುವುಗೊಳಿಸಿತು. ರಾಜ್ಯ ವಿಧಾನಸಭೆಗಳಿಂದ ಆಯ್ಕೆಯಾಗುವ ರಾಜ್ಯಸಭಾ ಸದಸ್ಯರ ಚುನಾವಣೆಯಲ್ಲಿ ಚಾಲ್ತಿಯಲ್ಲಿದ್ದ ಗುಪ್ತ ಮತದಾನದ ಪಾವಿತ್ರ್ಯತೆಯನ್ನೇ ಇದು ಇಲ್ಲದಾಗಿಸಿತು.


ಪ್ರಜಾಪ್ರಭುತ್ವದ ಅಣಕ: ಕಾಯಿಲೆಯೊಂದಿಗೆ ರೋಗಿಯನ್ನು ಸಾಯಿಸುವ ಕ್ರಮ:


ಸದರಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಸಿಪಿಐ(ಎಂ) ಹಾಗೂ ಎಡ ಪಕ್ಷಗಳನ್ನು ಹೊರತುಪಡಿಸಿ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಅದರ ಪರ ಮತ ಹಾಕಿದವು. ಮಾತ್ರವಲ್ಲದೆ ಅದರ ಪರ ವಕಾಲತ್ತನ್ನು ವಹಿಸಿದವು. ಸದರಿ ಶಾಸನವು ಬಹುತೇಕ ಪಕ್ಷಗಳು ಅನುಸರಿಸಿಕೊಂಡು ಬಂದಿದ್ದ ಕ್ರಮಗಳನ್ನೇ ಕಾನೂನುಬದ್ಧಗೊಳಿಸಿತು. ಚುನಾವಣೆಗಳಲ್ಲಿ ಸೋತ ಅಥವಾ ಜನತೆಯನ್ನು ಚುನಾವಣೆ ಮೂಲಕ ಎದುರಿಸಲು ಒಲ್ಲದ ಸದಸ್ಯರು ರಾಜ್ಯಸಭೆಯ ಮೂಲಕ ಸಂಸತ್ತನ್ನು ಪ್ರವೇಶಿಸುತ್ತಿದ್ದರು. ಅಂತೆಯೇ ರಾಜ್ಯಸಭೆಗೆ ಆಯ್ಕೆಯಾಗಲು ಅಗತ್ಯ ಸಂಖ್ಯಾಬಲ ವಿಧಾನಸಭೆಗಳಲ್ಲಿ ಇಲ್ಲದಿದ್ದಾಗ ಅಥವಾ ನಿರ್ದಿಷ್ಟ ರಾಜ್ಯಗಳಲ್ಲಿ ಸ್ಥಾನಗಳು ಖಾಲಿ



ಇಲ್ಲದಿದ್ದಾಗ ಇತರೆ ರಾಜ್ಯಗಳಿಂದ ಆಯ್ಕೆಯಾಗುವುದು ಈ ಪಕ್ಷಗಳ ಮುಖಂಡರ ಚಾಳಿ. ಅದಕ್ಕೆ ಒದಗಿಸಬೇಕಿದ್ದ ನಿರ್ದಿಷ್ಟ ರಾಜ್ಯಗಳ ವಾಸಿ ಎಂಬ ಪುರಾವೆಯನ್ನು ಹಾಗಿಗೆ ಮಾಡಿ ಒದಗಿಸುತ್ತಾರೆ. ಏನಾದರೂ ಆಗಲಿ ಸಂಸತ್ತನ್ನು ಪ್ರವೇಶಿಸುತ್ತಿದ್ದರು. ಇದನ್ನೇ ಸದರಿ ಶಾಸನ ಸಂವಿಧಾನ ಬದ್ಧಗೊಳಿಸಿರುವುದು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯನಾಯ್ಡು, ಆಂಧ್ರಪ್ರದೇಶ ನಿವಾಸಿಯಾದರೂ ಕರ್ನಾಟಕದಿಂದ ಆಯ್ಕೆಯಾಗಿದ್ದರು. ಕೇರಳದ ಓ.ರಾಜಗೋಪಾಲ್ ರಾಜ್ಯಸಭೆಗೆ ಆಯ್ಕೆಯಾಗುವ ಕನಸನ್ನು ಕಾಣಲು ಸಾಧ್ಯವಿಲ್ಲದಿದ್ದವರು ಮಧ್ಯಪ್ರದೇಶದಿಂದ ಆಯ್ಕೆಯಾದರು. ಮಸೂದೆಯನ್ನು ಸಂಸತ್ತಿನಲ್ಲಿ





ಮಂಡಿಸಿದ್ದ ಅಂದಿನ ಕಾನೂನು ಸಚಿವರಾದ ಅರುಣ ಜೈಟ್ಲೆ ಸಹಾ ತಮ್ಮದಲ್ಲದ ಇನ್ನೊಂದು ರಾಜ್ಯದಿಂದ ಆಯ್ಕೆಯಾಗಿದ್ದರು.

1989 ರ ಮುನ್ನ ತಮ್ಮದಲ್ಲದ ಇತರೆ ರಾಜ್ಯಗಳಿಂದ ರಾಜ್ಯಸಭೆಗೆ ಆಯ್ಕೆಯಾದವರ ಸಂಖ್ಯೆ ಕೇವಲ ಶೇ.3 ರಷ್ಟಿತ್ತು. 1989'ರ ನಂತರ ಅದು ಶೇ.9 ಕ್ಕೆ ಏರಿತು. ಪ್ರಸ್ತುತ ಪ್ರತಿ 10 ಸದಸ್ಯರಲ್ಲಿ ಒಬ್ಬರು ಇಂತವರಿದ್ದಾರೆ. ರಾಜ್ಯಗಳ ಜನಸಂಖ್ಯೆಗನುಗುಣವಾಗಿ ಆಯ್ಕೆಯಾಗುವ ವಿಧಾನಸಭಾ ಸದಸ್ಯರ ಮೂಲಕ ಆಯ್ಕೆಯಾಗಬೇಕಿರುವ ರಾಜ್ಯಸಭಾ ಸದಸ್ಯರು ಈ ರೀತಿ ಆಯ್ಕೆಯಾದಲ್ಲಿ ರಾಜ್ಯಗಳಿಗೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ನೀಡುವ ರಾಜ್ಯಗಳ ಪ್ರಾತಿನಿಧಿಕ ಸಭೆ ರಾಜ್ಯಸಭೆಯ ಘನ ಉದ್ದೇಶ ಎಲ್ಲಿಂದ ಉಳಿದೀತು. ಪ್ರಜಾಪ್ರಭುತ್ವವನ್ನು ಅಣಕುಮಾಡುವ ಇಂತಹ ಪ್ರತಿಗಾಮಿ ಕ್ರಮವನ್ನು ತಮ್ಮ ತಮ್ಮ ರಾಜಕೀಯ ಹಿತಾಸಕ್ತಿಗನುಗುಣವಾಗಿ, ಎಲ್ಲ ಪಕ್ಷಗಳು ಬೆಂಬಲಿಸಿ, ಶಾಸನದ ರೂಪದಲ್ಲಿ ತಂದವು.

ಸಿಪಿಐ(ಎಂ) ಹಾಗೂ ಎಡಪಕ್ಷಗಳು ಎಂದೂ ಸಹಾ ಇತರೆ ರಾಜ್ಯದ ನಿವಾಸಿಗಳನ್ನು ಯಾವುದೇ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆ ಮಾಡದಿದ್ದ, ಪ್ರಜಾಸತ್ತಾತ್ಮಕ - ಸಂವಿಧಾನಿಕ ಕ್ರಮವನ್ನು ಇತಿಹಾಸದ ಉದ್ದಕ್ಕೂ ಅನುಸರಿಸಿ ಬಂದ ಕಾರಣ ಈ ಶಾಸನವನ್ನು ವಿರೋಧಿಸಿದವು.

ಅಂತೆಯೇ ಈ ಪ್ರಮುಖ ರಾಜಕೀಯ ಪಕ್ಷಗಳು ತಮ್ಮ ವಿಧಾನಸಭಾ ಶಾಸಕರ ಮೇಲೆ ಕನಿಷ್ಠ ಶಿಸ್ತಿನ ಹಿಡಿತವನ್ನು ಸ್ಥಾಪಿಸಲು ವಿಫಲವಾದ ಕಾರಣ ಗುಪ್ತ ಮತದಾನವನ್ನು ಸಹಾ ಇಲ್ಲದಾಗಿಸುವ ತಿದ್ದುಪಡಿ ತಂದರು. ಹಣದ ಆಸೆಗಾಗಿ ಪಕ್ಷ ಸೂಚಿಸಿದ ವ್ಯಕ್ತಿಗಳಿಗೆ ಮತದಾನ ಮಾಡುವ ಬದಲು ಇತರರಿಗೆ ಮತ ಹಾಕುವ ಪ್ರವೃತ್ತಿ ಎಡ ಪಕ್ಷಗಳನ್ನು ಹೊರತುಪಡಿಸಿ ಇತರೆ ರಾಜಕೀಯ ಪಕ್ಷಗಳಲ್ಲಿ ವ್ಯಾಪಕವಾಗಿರುವ ಕಾರಣ ಬಹಿರಂಗ ಮತದಾನಕ್ಕೆ ಅನುವುಗೊಳಿಸಿ - ಗುಪ್ತ ಮತದಾನವನ್ನು ಇಲ್ಲದಾಗಿಸಿದವು.

ಮತದಾರರು ಸ್ವತಂತ್ರವಾಗಿ - ಮುಕ್ತವಾಗಿ ಮತದಾನ ಮಾಡಲು ಬಿಡದ ಈ ಕ್ರಮವು ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ರಾಜಿಗೊಳಪಡಿಸುತ್ತದೆ. ರಾಜ್ಯಸಭೆಗಳಿಗೆ ಮುಕ್ತ ಚುನಾವಣೆ ನಡೆಸಲು ಹೆಗಣಬೇಕಾಗುತ್ತದೆ.

ಪ್ರಸ್ತುತ ಕೇಂದ್ರ ಸಚಿವ ಹಾಗೂ ಅಂದಿನ ಸಂಸದ ಕಾಂಗ್ರೆಸ್ ಪಕ್ಷದ ವಕ್ತಾರ ಕಪಿಲ್ ಸಿಬಲ್ ಚರ್ಚೆಯಲ್ಲಿ ಭಾಗವಹಿಸುತ್ತಾ, "ಬಹಿರಂಗ ಮತದಾನ ಪ್ರತಿ ಒಂದು ಪಕ್ಷಕ್ಕೂ ತಮ್ಮ ಪಕ್ಷದ ಶಾಸಕರು ಏನು ಮಾಡುತ್ತಾರೆ ಎಂಬುದನ್ನು ತೋರಿಸುತ್ತದೆ ಮಾತ್ರವಲ್ಲದೆ ಗುಪ್ತ ಮತದಾನವನ್ನು ಬಳಸಿ- ತಮ್ಮ ಮತವನ್ನು ಮಾರಿಕೊಂಡು ಸಂಬಂಧಿತ ಪಕ್ಷವನ್ನು ಸಂಕಷ್ಟಕ್ಕೀಡು ಮಾಡುವುದನ್ನು ತಪ್ಪಿಸುತ್ತದೆ ಎಂದು ಶಾಸನವನ್ನು ಪ್ರತಿಪಾದಿಸಿದ್ದರು. ಆ ಮೂಲಕ ಆಡಳಿತ (ಬಿಜೆಪಿ-ಎನ್‌ಡಿಎ) ವಿರೋಧ (ಕಾಂಗ್ರೆಸ್) ಪಕ್ಷಗಳೆಲ್ಲಾ ಒಂದಾಗಿ ಕಾಯಿಲೆ ನಿವಾರಿಸಲು ಪರಿಹಾರ ಕಂಡುಕೊಳ್ಳುವ ಹೆಸರಲ್ಲಿ ಪ್ರಜಾಸತ್ತೆ ಎಂಬ ರೋಗಿಯನ್ನೇ ಕೊಂದರು.

ಒಕ್ಕೂಟ ವ್ಯವಸ್ಥೆಯನ್ನು ಶೀಥಲಗೊಳಿಸುವ ಪ್ರತಿಗಾಮಿ ಕ್ರಮ:

ಸಂವಿಧಾನ ರಚನಾ ಸಭೆಯು ದೇಶದ ವಿವಿಧ ರಾಷ್ಟ್ರೀಯತೆ, ಸಾಂಸ್ಕೃತಿಕ- ಭಾಷಿಕ ಪ್ರಾತಿನಿಧಿಕ ಅಂಶಗಳನ್ನು ಗಮನದಲ್ಲಿರಿಸಿ ಅವುಗಳಿಗೆ ಪ್ರಾತಿನಿಧ್ಯ ನೀಡುವ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಬಲಗೊಳಿಸುವ ಉದ್ದೇಶದೊಂದಿಗೆ ರಾಜ್ಯಸಭೆಯನ್ನು ಅಸ್ತಿತ್ವಕ್ಕೆ ತಂದಿತ್ತು. ಸಂಸತ್ತಿನ ಎರಡನೆ ಮನೆ ಮೇಲ್ಮನೆಯನ್ನು ಸ್ಥಾಪಿಸುವಾಗ 'ರಾಜ್ಯಗಳನ್ನು' 'ಘಟಕವಾಗಿ' ಪರಿಗಣಿಸಿ ಪ್ರಾತಿನಿಧ್ಯವನ್ನು ಸಂಸತ್ತಿನಲ್ಲಿ ನೀಡಲು ರಾಜ್ಯಗಳ ಸಭೆ - ರಾಜ್ಯಸಭೆಯನ್ನು ಸ್ಥಾಪಿಸಿದ್ದವು. ಆ ಮೂಲಕ ರಾಷ್ಟ್ರದ ಸಾಮಾಜಿಕ -ರಾಜಕೀಯ ಐಕ್ಯತೆಯನ್ನು ಬಲಗೊಳಿಸಲು ಇಂತಹ ಒಕ್ಕೂಟ ವ್ಯವಸ್ಥೆಯನ್ನು ಅದು ರೂಪಿಸಿತ್ತು. ಹಾಗಾಗಿ ರಾಜ್ಯಸಭೆಗೆ ಯಾವುದೇ ರಾಜ್ಯದಿಂದ ಆಯ್ಕೆಯಾಗುವವರು ಆ ರಾಜ್ಯದ ಕನಿಷ್ಠ 'ನಿವಾಸಿ'ಯಾಗಿರಬೇಕೆಂಬುದು ಸಂವಿಧಾನದ ಮೂಲಭೂತ ಆಶಯವಾಗಿತ್ತು.

ಆದರೆ ಇಂತಹ ಆಶಯವನ್ನೇ ಬುಡಮೇಲು ಮಾಡುವ ಕ್ರಮವಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ತಿದ್ದುಪಡಿ ತಂದಿತು. ಹಿಂದೂ ಕೋಮುವಾದಿಗಳು - ಜನ ಸಂಘದ ಕಾಲದಿಂದಲು ರಾಷ್ಟ್ರದ ಒಕ್ಕೂಟ ಪರಿಕಲ್ಪನೆಗೆ ವಿರೋಧವಾಗಿದ್ದವರು. ಅವರು ಅಂದಿನಿಂದ 'ಯೂನಿಟರಿ' (ಏಕೀಕೃತ) ಪರಿಕಲ್ಪನೆಯನ್ನು ಪ್ರತಿಪಾದಿಸಿದವರು. ಹಾಗಾಗಿ ಅಂತಹ ಪ್ರತಿಗಾಮಿ ತಿದ್ದುಪಡಿಗೆ ಮುಂದಾದರು. ಆದರೆ ಅಂದಿನ ಅಧಿಕೃತ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಕೂಡ ಅದಕ್ಕೆ ಸಮ್ಮತಿಸಿ - ಬೆಂಬಲಸಿದ್ದು ಇಡೀ ಒಕ್ಕೂಟ ವ್ಯವಸ್ಥೆಯನ್ನು ಶೀಥಲಗೊಳಿಸುವ ಪ್ರತಿಗಾಮಿ ಕ್ರಮವಾಗಿದೆ. ಸಂವಿಧಾನ ರಚನಾ ಸಭೆಯ ದೀರ್ಘ ಚರ್ಚೆ - ವಿಮರ್ಶೆಯನ್ನು ಕಾಂಗ್ರೆಸ್ ಮರೆತಂತೆ ಕಾಣುತ್ತದೆ.

ಸಂವಿಧಾನ ಪರಾಮರ್ಶೆ ಆಯೋಗವು ಸಹಾ ರಾಜ್ಯಸಭೆ ಅಭ್ಯರ್ಥಿಗಳ ಅರ್ಹತೆಯ ಕನಿಷ್ಠ ನಿಬಂಧನೆಯಾದ 'ವಾಸ'ದ ಅರ್ಹತೆಯನ್ನು ಉಳಿಸಿಕೊಳ್ಳುವಂತೆ ಪ್ರತಿಪಾದಿಸಿದೆ ಹಾಗೂ ಸಂವಿಧಾನದ ಒಕ್ಕೂಟ ತತ್ವವನ್ನು ಅದು ಬಲಗೊಳಿಸಲಿದೆ ಎಂದಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತಂದ 'ಸಂವಿದಾನದ ಮೂಲಕ ಆಶಯ - ಒಕ್ಕೂಟ ತತ್ವಕ್ಕೆ ಕೊಡಲಿಪೆಟ್ಟು ನೀಡಲಿರುವ ಈ ಪ್ರತಿಗಾಮಿ ಕ್ರಮವನ್ನು ಸರಿಪಡಿಸಬೇಕಾದ ಅನಿವಾರ್ಯತೆ ಇಂದಿನದಾಗಿದೆ. ಸಿಪಿಐ(ಎಂ) ಹಾಗೂ ಎಡಶಕ್ತಿಗಳು ಅಂದು ಹಾಗೂ ಇಂದು ಸಹಾ ಇದೆ ಪ್ರತಿಪಾದನೆಯನ್ನು ಸಂಸತ್ತಿನ ಒಳಗೆ - ಹೊರಗೆ ಮಾಡಲಿವೆ. ಸಿಪಿಐ(ಎಂ) ವಾದವು ಪುಷ್ಟಿಗೊಂಡಿದೆ.

ಕರ್ನಾಟಕದ ಚುನಾವಣಾ ಫಲಿತಾಂಶ : ಒಂದು ವಿಶ್ಲೇಷಣೆ

ಕರ್ನಾಟಕದಲ್ಲಿ ಕೋಮುವಾದಿ ಬಿಜೆಪಿ ತನ್ನ ಸ್ಥಾನ ಹೆಚ್ಚಿಸಿಕೊಂಡಿದೆ. ಆದರೆ ಅಧಿಕಾರ ಹಿಡಿಯಲಾಗಲಿಲ್ಲ. ಕಾಂಗ್ರೆಸ್ಸನ್ನು ಜನ ತಿರಸ್ಕರಿಸಿದ್ದಾರೆ. ಜನತಾದಳ (ಎಸ) ಸ್ಥಾನ ಹೆಚ್ಚಿಸಿಕೊಂಡಿದೆ. ಮೈತ್ರಿಕೂಟದ ಸರ್ಕಾರ ರಚಿತವಾಗಿದೆ. ಇಂತಹ ವಿಶಿಷ್ಟವಾದ ಫಲಿತಾಂಶಕ್ಕೆ ಕಾರಣವಾದ ಪ್ರಮುಖ ಅಂಶಗಳ ವಿಶ್ಲೇಷಣೆಯಿಲ್ಲಿದೆ

ರಾಷ್ಟ್ರಮಟ್ಟದಲ್ಲಿ ಲೋಕಸಭಾ ಚುನಾವಣೆಯಲ್ಲಿ ಮೇಲಿನ ಮೂರು ಗುರಿಗಳನ್ನು ಅತ್ಯಂತ ಯಶಸ್ವಿಯಾಗಿ ಸಾಧನೆಯಾಗಿ ಎಡಪಕ್ಷಗಳ ಬೆಂಬಲದ ಹೊಸ ಸರ್ಕಾರ ರಚಿತವಾಗಿದೆ. ಎನ್‌ಡಿಎ ಸೋತಿದೆ. ದೇಶದ ಹಲವಾರು ರಾಜ್ಯಗಳಲ್ಲಿ ವಿಶೇಷವಾಗಿ ದಕ್ಷಿಣದ ಮೂರು ರಾಜ್ಯಗಳಲ್ಲಿ ಬಿಜೆಪಿ ಕೂಟ ತನ್ನ ಸ್ಥಾನಗಳನ್ನು ಗಣನೀಯವಾಗಿ ಕಳೆದುಕೊಂಡಿದೆ. ಆದರೆ ಕರ್ನಾಟಕದಲ್ಲಿ ಒಟ್ಟು 28 ಲೋಕಸಭಾ ಕ್ಷೇತ್ರಗಳಲ್ಲಿ 18 ಸ್ಥಾನಗಳನ್ನು ಪಡೆದು ತನ್ನ ನೆಲೆ ವಿಸ್ತರಿಸಿಕೊಂಡಿದೆ. ಕಾಂಗ್ರೆಸ್ 17 ರಿಂದ 8 ಕ್ಕೆ ಕುಸಿದಿದೆ. ಒಂದು ಸ್ಥಾನವಿದ್ದ ಜೆಡಿ(ಎಸ್) 2 ಗಳಿಸಿದೆ.

ವಿಧಾನಸಭೆಯಲ್ಲಿ 133 ಸ್ಥಾನ ಪಡೆದು ಸರ್ಕಾರ ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷವನ್ನು 65ಕ್ಕೆ ಇಳಿಸಿ ತೀರ್ಪಿಸಿದ್ದಾರೆ. ಬಿಜೆಪಿ 1999 ರಲ್ಲಿ 44 ಶಾಸಕರನ್ನು ಹೊಂದಿತ್ತು. ಈ ಬಾರಿ ಅದು 79 ಹಾಗೂ ಅದರ ಮೈತ್ರಿ ಪಕ್ಷ ಜೆಡಿ(ಯು) 5 ಸ್ಥಾನಗಳನ್ನು (ಹಿಂದೆ 18) ಪಡೆದಿದೆ. ಜಾತ್ಯತೀತ ಜನತಾದಳ 10 ರಿಂದ 58 ಮುನ್ನಡೆ ಸಾಧಿಸಿದೆ. ನಮ್ಮ ಪಕ್ಷವು ಒಂದು ಸ್ಥಾನವನ್ನು (ಬಾಗೇಪಲ್ಲಿ) ಹೆಚ್ಚು ಮತಗಳಿಂದ ಉತ್ತಮ ಅಂತರದಲ್ಲಿ ಗೆದ್ದಿದೆ. ಕನ್ನಡನಾಡು-1, ಎಐಡಿಎಂಕೆ-1, ವಾಟಾಳ್ ಪಕ್ಷ-1 ಮತ್ತು ಉಳಿದಂತೆ ಪಕ್ಷೇತರರು 13 ಸ್ಥಾನ ಪಡೆದಿದ್ದಾರೆ.

ಕರ್ನಾಟಕದಲ್ಲಿ ಕೋಮುವಾದಿ ಬಿಜೆಪಿ ಅಧಿಕಾರ ಹಿಡಿಯುವುದನ್ನು ಮತದಾರರು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಬಿಜೆಪಿ ಅಧಿಕಾರ ಹಿಡಿಯಲಾಗಲಿಲ್ಲ. ಕಾಂಗ್ರೆಸ್ ಸೋತಿತು. ಆದರೆ ಮೂರನೇ ಪರ್ಯಾಯದ ಜನತಾದಳ(ಎಸ್) ಸರ್ಕಾರ ರಚಿಸುವಷ್ಟು ಬಲ ಪಡೆಯಲಿಲ್ಲ. ಅತಂತ್ರದ ಪರಿಸ್ಥಿತಿ ಇದೆ. ಯಾವೊಂದು ಪಕ್ಷವೂ ತನ್ನ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವುದು ಅಸಾಧ್ಯವಾಗಿದೆ. ಜನಾದೇಶ ಜಾತ್ಯತೀತ ಸರ್ಕಾರದ ಪರವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ ಮತ್ತು ಜನತಾದಳ(ಎಸ್)ಗಳ ಮೈತ್ರಿಕೂಟದ ಸರ್ಕಾರ ರಚನೆಗೊಂಡಿದೆ.

ಈ ಚುನಾವಣೆಯ ಒಟ್ಟು ಪ್ರಕ್ರಿಯೆ ಯುದ್ದಕ್ಕೂ ಗೊಂದಲಕಾರಿಯಾದ ಸನ್ನಿವೇಶಗಳೇ ಏರ್ಪಟ್ಟಿತ್ತು. ಲೋಕಸಭೆ, ರಾಜ್ಯ ವಿಧಾಸಭೆಗೂ ಜತೆಯಲ್ಲೇ ಚುನಾವಣೆಗಳನ್ನು ನಡೆಸುವ ಸುಳಿವು ದೊರೆತಂದಿನಿಂದ ಅಧಿಕಾರ- ಹಣದ ಆಮಿಷಗಳಿಗಾಗಿ ಪಕ್ಷಾಂತರಗಳ ಮಹಾ ಪೂರವೇ ನಡೆದು ಸಂದರ್ಭಸಾಧಕ ರಾಜಕಾರಣವೇ ಮೆರೆಯಿತು. ವಿವಿಧ ಪಕ್ಷಗಳ ಮುಖಂಡರು, ಮಾಜಿ ಅಧಿಕಾರಿಗಳ ಸೇರ್ಪಡೆಯಾಯಿತು. ಅಭ್ಯರ್ಥಿಗಳ ಆಯ್ಕೆಯಲ್ಲಿಯೂ ಹಣ, ಮೇಲುಗೈ ಪಡೆಯಿತು. ಈ ಅನಾರೋಗ್ಯಕರ ಸ್ಪರ್ಧೆಯಲ್ಲಿ ಬಿಜೆಪಿ-ಕಾಂಗ್ರೆಸ್ ಪ್ರಧಾನವಾಗಿ ಪೈಪೋಟಿಗಿಳಿ ದವು. ಜೆಡಿ(ಎಸ್) ಸಹ ಇದರೊಂದಿಗೆ ಸೇರಿಕೊಂಡಿತು.

ಈ ಬಾರಿ ದಕ್ಷಿಣ ಭಾರತದಲ್ಲೇ ಕರ್ನಾಟಕದ ಅಧಿಕಾರ ಹಿಡಿಯಲು ಬಿಜೆಪಿ ತನ್ನ ಇಡೀ ಗಮನವನ್ನು ಕೇಂದ್ರೀಕರಿಸಿತ್ತು. ಸಾಧ್ಯವಿರುವ ಎಲ್ಲಾ ಪ್ರಯತ್ನಕ್ಕೂ ಇಳಿಯಿತು. ಕಾಂಗ್ರೆಸ್‌ಗೆ ಪರ್ಯಾಯವೆಂಬಂತೆ ಬಿಂಬಿಸಲು ಹೆಣಗಿತು. ಜನತಾದಳದ ಮೂರನೇ ಪರ್ಯಾಯ ಬಲಗೊಳ್ಳದಂತೆ ಹಾಗೂ ದುರ್ಬಲಗೊಳ್ಳುವಂತೆ ನೋಡಿಕೊಂಡಿತು. ಇದಕ್ಕಾಗಿ ತನ್ನ ಕೇಂದ್ರದ ಅಧಿಕಾರ ಬಳಸಿತು. ಕಾಂಗ್ರೆಸ್ ನಾಯಕತ್ವವನ್ನು ಸೆಳೆಯಿತು. ಎಸ್.ಎಂ.ಕೃಷ್ಣ, ಅನಂತಕುಮಾರ್, ರಾಮಕೃಷ್ಣ ಹೆಗಡೆ ಕೈಜೋಡಿಸಿ ತಂತ್ರ ರೂಪಿಸಿದರು. ಜನತಾದಳ ಬಣಗಳು ವಿಲೀನವಾಗದಂತೆ ಛಿದ್ರಛಿದ್ರವಾಗುವಂತೆ ನೋಡಿಕೊಂಡರು. ತಮ್ಮ ವಿರುದ್ಧದ ಅತೃಪ್ತಿ ಧ್ರುವೀಕರಣಗೊಳ್ಳದಂತೆ ವಿಭಜನೆಗೊಳ್ಳಲು ಕನ್ನಡನಾಡು, ಜೆಡಿ(ಯು), ಜನತಾಪಕ್ಷ ಹಾಗೂ ಬಿಎಸ್‌ಪಿ ಪಕ್ಷಗಳನ್ನು ಬಳಸಿದರು. ಬಿಜೆಪಿ ರೂಪಿಸಿದ ಈ ತಂತ್ರ ಒಂದು ಹಂತದಲ್ಲಿ ಯಶಸ್ವಿಯಾದರೂ ರಾಜ್ಯದಲ್ಲಿ ಅಧಿಕಾರ ಹಿಡಿದೇ ಬಿಡುವ ಅದರ ಕನಸು ನನಸಾಗಲಿಲ್ಲ. ಸ್ಥಾನ ಕಡಿಮೆಯಾದರೂ ಬಹುಮತ ತಮಗೇ ಎಂದು ಕಾಂಗ್ರೆಸ್ ಲೆಕ್ಕಾಚಾರ ಹಾಕಿತ್ತು. ಇದಕ್ಕೆ ಜನತೆ ತಿರುಗೇಟು ನೀಡಿದ್ದಾರೆ.

ಈ ಚುನಾವಣಾ ಫಲಿತಾಂಶ ತೋರುವುದೇನೆಂದರೆ, ಕರ್ನಾಟಕದಲ್ಲಿ ಕಾಂಗ್ರೆಸ್ಸನ್ನು ತಿರಸ್ಕರಿಸಿದ್ದಾರೆ. 1999 ರ ಲೋಕಸಭಾ ಚುನಾವಣೆಯಲ್ಲಿ ಶೇ 45.4 ರಿಂದ ಈಗ 36.8 ಮತ ಪಡೆದು ಕಾಂಗ್ರೆಸ್ ಶೇ 8.6 ರಷ್ಟು ಕುಸಿತ ಕಂಡಿದೆ. ಹಾಗೆ ವಿಧಾನಸಭೆಯಲ್ಲಿ 1999 ರಲ್ಲಿ ಶೇ 41.1 ರಿಂದ ಶೇ 35.3 ಕ್ಕೆ ಇಳಿದು ಶೇ 5.8 ರಷ್ಟು ಮತದಾರರು ದೂರವಾಗಿದ್ದಾರೆ. ಗೆದ್ದ ಅರ್ಧಕ್ಕಿಂತ ಅಧಿಕ ಸ್ಥಾನಗಳು ದಕ್ಷಿಣ ಕರ್ನಾಟಕದಿಂದ ಬಂದಿವೆ.

ಕರ್ನಾಟಕದಲ್ಲಿ ವಿವಿಧ ಪಕ್ಷಗಳ ಮತಗಳಿಗೆ (ಶೇ)

ವಿಧಾನಸಭೆ	1977	1980	1984	1989	1991	1996	1999	2004
● ಕಾಂಗ್ರೆಸ್	56.8	56.3	51.6	48.9	41.98	30.37	41.06	35.27
● ಜನತಾಪಕ್ಷ-ದಳ ಅಥವ ವಿಭಜಕ ಗುಂಪು	39.9	22.9	35.1	37.5	22.55	33.25	10.42	20.77
● ಜೆಡಿ(ಯು)							13.52	2.06
● ಬಿಜೆಪಿ	-	-	4.7	2.5	28.68	24.75	20.69	28.33
● ಬಿಎಸ್‌ಪಿ	-	-	-	-	-	-	-	-

ಕಾಂಗ್ರೆಸ್ ಅನುಭವಿಸಿರುವ ಸೋಲು ಮುಖ್ಯವಾಗಿ ಎಸ್.ಎಂ.ಕೃಷ್ಣರ ಸರ್ಕಾರ ಅನುಸರಿಸಿದ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ವಿಶ್ವಬ್ಯಾಂಕ್-ಹಣಕಾಸು ಸಂಸ್ಥೆಗಳ ನಿರ್ದೇಶಿತ ಜನದ್ರೋಹಿ ಆರ್ಥಿಕ ನೀತಿಗಳೇ ಮುಖ್ಯ ಕಾರಣ. ಕೋಮುವಾದಿ ಆಕ್ರಮಣವನ್ನು ದಿಟ್ಟವಾಗಿ ಎದುರಿಸಿ, ಜಾತ್ಯತೀತ ಮೌಲ್ಯಗಳನ್ನು ರಕ್ಷಿಸಲು ನಿರಾಕರಿಸಿದ ಅದರ ರಾಜಿ ಮನೋಭಾವದ ಕ್ರಮಗಳು ಕಾರಣ. 1999 ರ ಚುನಾವಣಾ ಫಲಿತಾಂಶಗಳನ್ನು ವಿಶ್ಲೇಷಿಸಿದ ಪಕ್ಷದ ರಾಜ್ಯ ಸಮಿತಿಯು ಎಸ್.ಎಂ.ಕೃಷ್ಣರವರ ಸರ್ಕಾರದ ಹಾದಿಯನ್ನು ಅವಲೋಕಿಸಿ 'ಕಾಂಗ್ರೆಸ್ ತನ್ನ ನೀತಿಗಳಿಂದ ಜನ ಬೆಂಬಲವನ್ನು ತೀವ್ರ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಿದೆ' ಎಂದು ಗುರುತಿಸಿದ್ದು, ಈ ಅತೃಪ್ತಿಯ ಲಾಭ ಯಾರು ಪಡೆಯುವರೋ ಅದೇ ತಿರುವು' ಎಂದಿದೆ

ಕಾಂಗ್ರೆಸ್ ಸರ್ಕಾರ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳನ್ನು ಚಾಚು ತಪ್ಪದೇ ಅನುಸರಿಸಿತು. ವಿಶ್ವ ಬ್ಯಾಂಕ್‌ನ ಹೈಟೆಕ್ - ಸಿಇಓ ಮಾದರಿಗಳನ್ನೇ ಅಂಗೀಕರಿಸಿತು. ದುಡಿಯುವವರ್ಗದ ಜನ ಸಾಮಾನ್ಯರ ಮೇಲೆ ಅಸಹನೀಯ ಆರ್ಥಿಕ ಹೊರೆ ಹೇರಲಾಯಿತು. ವಿದೇಶಿ ಕಂಪನಿಗಳು, ಬಂಡವಾಳಗಾರರಿಗೆ ಕೈಗಾರಿಕೋದ್ಯಮಿಗಳಿಗೆ ರಿಯಾಯಿತಿ ನೀಡುವುದೇ ಆದ್ಯತೆಯಾಯಿತು. ಜನತೆಯಲ್ಲಿ ಹೆಚ್ಚಿದ ಅತೃಪ್ತಿಯು ರಾಜ್ಯ ಸರ್ಕಾರದ ವಿರುದ್ಧ ಸಂಘಟಿತವಾದ ಹಾಗೂ ಸ್ವಯಂ ಸ್ಫೂರ್ತಿಯಿಂದ ಹುಟ್ಟಿದ ಚಳುವಳಿಯಾಗಿ ಪ್ರಕಟಗೊಂಡಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧದ ಅತೃಪ್ತಿಯು ಎರಡು ರೂಪಗಳಲ್ಲಿ ಅಭಿವ್ಯಕ್ತಿಗೊಂಡಿದೆ. ರಾಜ್ಯ ಸರ್ಕಾರದ ವಿರುದ್ಧ ಜನತೆಯ ಚಳುವಳಿಯಾಗಿ ವ್ಯಕ್ತಗೊಂಡಿದ್ದರೆ, ಅದು 1999-2003 ರ ನಡುವಿನ ಬಹುತೇಕ ಎಲ್ಲಾ ಚುನಾವಣೆಗಳಲ್ಲಿಯೂ ಬಿಜೆಪಿಯನ್ನು ತಿರಸ್ಕರಿಸುವ ಮೂಲಕ ಕೇಂದ್ರದ ವಿರುದ್ಧ ಪ್ರಕಟಗೊಂಡಿದೆ. ಕರ್ನಾಟಕದ ವಿವಿಧ ಜನವಿಭಾಗಗಳ, ಮುಖ್ಯವಾಗಿ ರೈತರು, ವಿದ್ಯಾರ್ಥಿಗಳು, ಕಾರ್ಮಿಕರು ಬೀದಿಗಿಳಿದರು. ಕಾರ್ಮಿಕವರ್ಗದ ಚಳುವಳಿ ಬಹುತೇಕವಾಗಿ ಕೇಂದ್ರ ಸರ್ಕಾರದ ವಿರುದ್ಧವಾಗಿದ್ದರೆ, ರೈತಾಪಿ ಚಳುವಳಿ ರಾಜ್ಯ ಸರ್ಕಾರವನ್ನೇ ಹೆಚ್ಚು ಗುರಿಯಾಗಿಸಿತ್ತು. ರೈತರಲ್ಲಿ ಸಂಘಟಿತ ಮತ್ತು ಸ್ವಯಂಸ್ಫೂರ್ತಿ ಹೋರಾಟಗಳಿದ್ದವು. ಕರ್ನಾಟಕ ಪ್ರಾಂತ ರೈತ ಸಂಘ ಸಂಘಟಿತ ಪ್ರತಿಭಟನೆಗಳಿಗೆ ನೇತೃತ್ವ ನೀಡಿ ಹಲವೆಡೆ ರಾಜ್ಯ ರೈತ ಸಂಘ ಸ್ವಯಂಸ್ಫೂರ್ತಿ ಚಳುವಳಿಗೆ ಮುಖ್ಯವಾಗಿ ಬರ, ರೈತರ ಆತ್ಮಹತ್ಯೆ, ವಿದ್ಯುತ್, ಪಡಿತರ ಪ್ರಶ್ನೆಗಳಲ್ಲಿ ರಾಜ್ಯ ಸರ್ಕಾರವೇ ಹೆಚ್ಚು ಗುರಿಯಾಗಿದೆ. ಕೇಂದ್ರದ ನೀತಿಗಳವನ್ನೇ ಪ್ರಧಾನವಾಗಿ ರಾಜ್ಯ ಸರ್ಕಾರ ಅದೇ ನೀತಿಗಳನ್ನು ಅಪ್ಪಿದ್ದರಿಂದ ಹಾಗೂ ಕೇಂದ್ರದ ನೀತಿಗಳ ವಿರುದ್ಧ ಚಕಾರ ಎತ್ತದ್ದರಿಂದ ಈ ಸ್ಥಿತಿ ನಿರ್ಮಾಣಗೊಂಡಿತು. ನಮ್ಮ ಪಕ್ಷವು ಕೇಂದ್ರದ ನೀತಿಗಳ ವಿರುದ್ಧ ಪ್ರಮುಖವಾಗಿ ಪ್ರಚಾರಾಂದೋಲನ ನಡೆಸಿದೆ. ಸಾಮೂಹಿಕ ಸಂಘಟನೆಗಳೂ ಈ ಸಂಬಂಧಗಳನ್ನು ತೋರಿಸಿವೆ. ರಾಜ್ಯ ಸರ್ಕಾರದ ವಿರುದ್ಧ ಅತೃಪ್ತಿ ಹೆಚ್ಚುವಲ್ಲಿ ಬಿಜೆಪಿ ಪರ - ವಾಜಪೇಯಿ ಅಲೆ ರೂಪದಲ್ಲಿ ಮಾಧ್ಯಮಗಳು ಸಹ ಮುಖ್ಯ ಪಾತ್ರವಹಿಸಿವೆ.

ಜನತೆಯ ನಡುವಿನ ಅತೃಪ್ತಿಯನ್ನು ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ತಿರುಗಿಸಲು ಬಿಜೆಪಿಯು ಎರಡು ಹಂತಗಳ ತಂತ್ರ ರೂಪಿಸಿ ಕಾರ್ಯಾಚರಣೆಗೆ ಇಳಿಯಿತು. ವಿವಿಧ ಪ್ರಶ್ನೆಗಳತ್ತ ರಾಜ್ಯ ಸರ್ಕಾರವನ್ನೇ ಗುರಿ ಮಾಡಿ ನಿರಂತರ ಪ್ರಚಾರ-ಧಾಳಿಯನ್ನೂ ಹರಿಯಬಿಟ್ಟಿತು. ವರ್ಷದಲ್ಲಿ ಎರಡು ಬಾರಿ ಜಾಥಾ-ಸಭೆ, ಕಾರ್ಯಕ್ರಮಗಳ ಮೂಲಕ ಪ್ರಚಾರ ಕೈಗೊಂಡಿತು. ಇನ್ನೊಂದೆಡೆ ಅದರ ಕೋಮುವಾದಿ 'ತ್ರಿಶೂಲ' ಕಾರ್ಯಕ್ರಮ. (ಸ್ಥಳೀಯವಾಗಿ ವಿವಾದ ಎಬ್ಬಿಸುವುದು ಹಾಗೂ ಮಧ್ಯಪ್ರವೇಶ, ಆಯ್ದ ಪ್ರದೇಶಗಳಲ್ಲಿ ಕೋಮು ಗಲಭೆ ಸೃಷ್ಟಿ ಮತ್ತು ಬಾಬಾ ಬುಡನ್‌ಗಿರಿಯ ವಿವಾದವೆಬ್ಬಿಸಿ ಇನ್ನೊಂದು ಅಯೋಧ್ಯೆ ಮಾಡುವ ಗುರಿ). ಈ ಎರಡೂ ಸಂದರ್ಭಗಳಲ್ಲಿ ಕಾಂಗ್ರೆಸ್ ಸರ್ಕಾರ ಧಾಳಿಗೆ ಒಳಗಾಗಿದೆ. ಆದರೆ ಕಾಂಗ್ರೆಸ್ ಪಕ್ಷವು ಕೇಂದ್ರದ ನೀತಿಗಳ ವಿರುದ್ಧವಾಗಲೀ, ಕೋಮುವಾದಿ ಧಾಳಿ ವಿರುದ್ಧವಾಗಿಯೂ ಧ್ವನಿ ಎತ್ತಲಿಲ್ಲ. ಕೋಮು ಗಲಭೆಗಳು ಸಂಭವಿಸಿರುವಲ್ಲಿ ಕಾಂಗ್ರೆಸ್ ಒಂದು ಪಕ್ಷವಾಗಿ ಹಾಗೂ ಸರ್ಕಾರವಾಗಿ ರಾಜಕೀಯ - ಆಡಳಿತಾತ್ಮಕವಾದ ದೃಢ ಕ್ರಮ ಜರುಗಿಸಲಿಲ್ಲ. ಬಿಜೆಪಿ ಬೆಳವಣಿಗೆಯಲ್ಲಿ ರಾಜಕೀಯ ಲಾಭ ಬಹುತೇಕ ಕಡೆ ಸಂಘ ಪರಿವಾರದ ಅಟ್ಟಹಾಸಗಳಿಗೆ ಕುಮ್ಮಕ್ಕು ನೀಡಿ ಕೋಮುವಾದ ಬೆಳೆಯಲು ಬಿಟ್ಟಿತು. ಇದರ ಪೂರ್ಣರಾಜಕೀಯ ಲಾಭವನ್ನು ಪಡೆಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಇದನ್ನು ಎದುರಿಸಲು ಜಾತ್ಯತೀತ ಜನತಾದಳದ ಮಧ್ಯಪ್ರವೇಶವೂ ತೀರಾ ಸೀಮಿತವಾಗಿತ್ತು. ಎರಡೂ ಸರ್ಕಾರಗಳ ಮೇಲೆ ಅತೃಪ್ತಿ ಇರುವಾಗ ಜೆಡಿ(ಎಸ್)ನ ಬಹುತೇಕ ಪ್ರತಿಭಟನೆ-ಪ್ರಚಾರ ಧಾಳಿ ರಾಜ್ಯ ಸರ್ಕಾರವನ್ನೇ ಗುರಿಯಾಗಿಸಿತ್ತು. ಚುನಾವಣೆಯನ್ನೆದುರಿಸುವಲ್ಲಿ ಅದು ಜಾತಿ ಲೆಕ್ಕಾಚಾರವನ್ನೇ ಹೆಚ್ಚುಹೆಚ್ಚಾಗಿ ಅವಲಂಬಿಸಿ ತನ್ನ ಮುನ್ನಡೆಗೆ ಅದು ಸಾಕಾಗುವುದೆಂದು ಭಾವಿಸಿತು.

ಅತಂತ್ರ ವಿಧಾನಸಭೆಯು ರೂಪುಗೊಂಡ ಸನ್ನಿವೇಶದಲ್ಲಿ ಕೋಮುವಾದಿ ಬಿಜೆಪಿ ಕೂಟವನ್ನು ಅಧಿಕಾರದಿಂದ ದೂರವಿಡಲು ಜಾತ್ಯತೀತವಾದ ಸರ್ಕಾರದ ರಚನೆಯಾಗಬೇಕೆಂದೂ, ಈ ದಿಕ್ಕಿನಲ್ಲಿ ಜೆಡಿ(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳು ಮುಂದಾಗಬೇಕೆಂದು ಪಕ್ಷವು ಕರೆ ನೀಡಿತು. ಸರ್ಕಾರ ರಚಿಸುವಲ್ಲಿ ಎರಡೂ ಪಕ್ಷಗಳು ಸಹಮತ ವ್ಯಕ್ತಪಡಿಸಿದವು. ಆದೇ ಸಂದರ್ಭದಲ್ಲಿ ಜನತೆಯಿಂದ ತಿರಸ್ಕರಿಸಲ್ಪಟ್ಟ ಕಾಂಗ್ರೆಸ್ ತನ್ನ ನೇತೃತ್ವದಲ್ಲೇ ಸರ್ಕಾರ ರಚಿಸಬೇಕೆಂದೂ, ಮುಖ್ಯಮಂತ್ರಿ ಸ್ಥಾನಕ್ಕಾಗಿ ಪಟ್ಟು ಹಿಡಿಯಿತು. ಈ ಸಂದರ್ಭ ಹಾಗೂ ಸಂಪುಟ ರಚನೆ-ಖಾತೆ ಹಂಚಿಕೆ ವಿಷಯವಾಗಿ ಮತ್ತೆ ಬಿಕ್ಕಟ್ಟು ತಲೆದೋರಿತು. ಸದ್ಯ ಕೊನೆಗೆ ಒಂದು ರಾಜಿಗೆ ಬರಲಾಗಿದೆ. ಈ ಮೈತ್ರಿಕೂಟವು ಚುನಾವಣಾ ಫಲಿತಾಂಶದಿಂದ ಪಾಠ ಕಲಿತು, ಹಿಂದಿನ ಸರ್ಕಾರ ಸಾಗಿದ ಹಾದಿಗೆ ಭಿನ್ನವಾಗಿ ಜನಾದೇಶದಂತೆ ಕಾರ್ಯ ನಿರ್ವಹಿಸಬೇಕಿದೆ. ಇಲ್ಲವಾದಲ್ಲಿ ಈ ಸರ್ಕಾರವು ಜನರ ಆಕ್ರೋಶಕ್ಕೆ ಈಡಾಗಬಹುದು. ಈಗಾಗಲೇ ಹೊಂಚುಹಾಕಿ ಕಾಯುತ್ತಿರುವ ಕೋಮುವಾದಿ ಶಕ್ತಿಗಳು ಮೇಲುಗೈ ಸಾಧಿಸಬಹುದು.

ಚುನಾವಣೆಯಲ್ಲಿ ತನ್ನ ಸೋಲಿಗೆ ತಾನು ಅನುಸರಿಸಿದ ನೀತಿಗಳೇ ಕಾರಣ ಎಂಬುದನ್ನು ಕಾಂಗ್ರೆಸ್ ಗುರುತಿಸುತ್ತಿಲ್ಲ. ಬದಲಿಗೆ ಅದು ಬರದಂತಹ ಪ್ರಕೃತಿ ವಿಕೋಪ, ಕಾರ್ಯತಂತ್ರದ ವಿಫಲತೆ ಎಂದೆಲ್ಲಾ ಹೇಳಿ ಹಾದಿ ತಪ್ಪಿಸಲು ಯತ್ನಿಸುತ್ತಿದೆ. ಒಂದು ಹಂತದಲ್ಲಿ ಮಹಾಸಾಧನೆ ಮಾಡಿದ ಈ ಸರ್ಕಾರಕ್ಕೆ ಹೀಗೆ ಮಾಡಿದ್ದಾರೆ ಎಂದು ಜನತೆಯನ್ನೇ ದೂಷಿಸುವವರೆಗೆ ಎಸ್.ಎಂ.ಕೃಷ್ಣ ಹೋಗಿದ್ದರು. ಕಾಂಗ್ರೆಸ್‌ನ ಈ ವಂಚನೆಯು ಮುಂದೆಯೂ ತಾನು ಸಾಗುವ ಹಾದಿಯನ್ನು ಮಾರ್ಪಾಡು ಮಾಡಿಕೊಳ್ಳಲು ನಿರಾಕರಿಸುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತಿದೆ. ಮಾತ್ರವಲ್ಲ ಅದೇ ಹಾದಿಯನ್ನು ಹಿಡಿಯಲು ಬಯಸುತ್ತಿದೆ.

ಉದಾರೀಕರಣ, ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳನ್ನು ನಿರ್ಣಾಯಕವಾಗಿ ತಿರಸ್ಕರಿಸಲು ಜನತೆಗೆ ಬಿಜೆಪಿ ಎಂಬ ಸಲಕರಣ ಸಿಕ್ಕಿದೆ. ಬಿಜೆಪಿ ಗಳಿಸಿದ ಮತಗಳು ಜನ ಅತೃಪ್ತಿಯ ಹಾಗೂ ಕೋಮುವಾದದ ಫಲವಾಗಿದೆ. ಎಲ್ಲೆಲ್ಲಿ ಕೋಮುವಾದೀಕರಿಸಲು ಯತ್ನಗಳನ್ನು ನಡೆಸಿತ್ತೋ ಅಲ್ಲಿ ಹೆಚ್ಚು ಮತಗಳನ್ನು ತಂದಿದೆ. ಈ ಮುಂದಿನ ದಿನಗಳಲ್ಲಿ ಅದನ್ನು ಉಳಿಸಿಕೊಂಡು ಶಕ್ತಿ ವೃದ್ಧಿಸಿಕೊಳ್ಳಲು ಸಂಘ ಪರಿವಾರ, ಬಿಜೆಪಿ ತೀವ್ರವಾಗಿ ಧಾಳಿಗೆ ಇಳಿಯಲಿದೆ.

ಇಂತಹ ಸಂದರ್ಭದಲ್ಲಿ ಧರ್ಮನಿರಪೇಕ್ಷತೆ ರಕ್ಷಣೆ, ಜನತೆಯ ಹಿತ ಕಾಯುವಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆ ಮಹತ್ವದ್ದಾಗಿದೆ. ಈ ದಿಶೆಯಲ್ಲಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆ ಅಗತ್ಯವಾದ ಕಾರ್ಯಯೋಜನೆ ರೂಪಿಸಬೇಕಿದೆ.

ಉತ್ತರ ಕನ್ನಡ ಚುನಾವಣಾ ಫಲಿತಾಂಶ

ಕರಾವಳಿಯಲ್ಲಿ ಕೋಮುವಾದಿ ಶಕ್ತಿಗಳು ಮೇಲುಗೈ ಪಡೆದಿದ್ದಾರೆ. ಒಂದೊಮ್ಮೆ ಪ್ರಬಲವಾಗಿದ್ದ ಕಾಂಗ್ರೆಸ್ ಕೋಟೆಯೊಳಗೆ ಇದು ಸಾಧ್ಯವಾದದ್ದಾದರೂ ಹೇಗೆ? ಈಚೆಗಿನ ಚುನಾವಣಾ ಫಲಿತಾಂಶಗಳ ಕಾರಣಗಳನ್ನು ಸೂಕ್ಷ್ಮವಾಗಿ ಬಿಡಿಸಿಟ್ಟ ಲೇಖನ..

ಸ್ಪಂದಿಸದಿದ್ದಾಗ ಜನತೆ ಪರ್ಯಾಯಕ್ಕಾಗಿ ಎದುರು ನೋಡುತ್ತಿದ್ದರು. ಕಾಂಗ್ರೆಸ್ಸನ್ನು ಕೈಬಿಟ್ಟರು.

ಕಾಂಗ್ರೆಸ್ ಹಣ ಕೊಟ್ಟಿತು - ಬಿಜೆಪಿ ಫಲ ಉಂಡಿತು

ಬಿಜೆಪಿ ಮತ್ತು ಅದರ ಸಂಘ ಪರಿವಾರಗಳ ಅಪಾಯದ ಬಗ್ಗೆ ಕಾಂಗ್ರೆಸ್ ನಾಯಕತ್ವ ತಮ್ಮ ಕಾರ್ಯಕರ್ತರಿಗೆ ತಿಳಿ ಹೇಳುವ ಕೆಲಸವನ್ನು ಮಾಡಲಿಲ್ಲ (ಅವರ ನಾಯಕರಿಗೂ ಕಾಂಗ್ರೆಸ್/

ಸೆಳೆದರೂ ಪ್ರಯೋಜನ ಆಗಲಿಲ್ಲ. ಚುನಾವಣೆ ಬಂದಾಗ ಹಣ ಚೆಲ್ಲುತ್ತೇವೆ; ಗೆಲ್ಲುತ್ತೇವೆ ಎನ್ನು... ಅತಿ ವಿಶ್ವಾಸ, ದುರಹಂಕಾರ ಅವರನ್ನು ಮೂಲೆ... ತಳ್ಳಿತು. ದೇಶಪಾಂಡೆಯವರು ಗೆದ್ದಿದ್ದಾರೆ; ಆದ... ಮತಗಳಿಕೆ ಕಡಿಮೆ ಆಗಿದೆ, ಇದು ಗೆದ್ದರೂ ಗೆದ್ದಂತಲ್ಲ ಎನ್ನುವುದು ಎಲ್ಲರಿಗೂ ಗೊತ್ತಿವೆ... ಕುಮಟಾದಲ್ಲಿ ಮೋಹನ ಕೆ.ಶೆಟ್ಟಿ ಕಾಂಗ್ರೆಸ... ಮರ್ಯಾದೆ ಇಟ್ಟಿದ್ದಾರೆ. ಇದು ಪಕ್ಷದ ವರ್ಚಸ್ಸಿನಿಂ...

ಬಿಜೆಪಿಯನ್ನು ಗೆಲ್ಲಿಸಿದ ಕಾಂಗ್ರೆಸ್!

ನಿಸರ್ಗ

ಚುನಾವಣೆಯ ಎಲ್ಲಾ ವಿಧಿ ವಿಧಾನಗಳು ಮುಗಿದಿವೆ. ಕಾರ್ಯಕರ್ತರ ಭಾವೋದ್ವೇಗಗಳೆಲ್ಲ ತಣ್ಣಗಾಗಿ ವಾಸ್ತವ ಬದುಕಿನೊಂದಿಗೆ ಒಂದಾಗುತ್ತಿದ್ದಾರೆ. ಹಾಗಾಗಿ ಸತ್ಯವನ್ನು ಹೇಳಿದರೆ ಮೈಮೇಲೆ ಬೀಳುವ ಬದಲು ಸ್ವಲ್ಪ ಆಲೋಚಿಸುವ ಹೊತ್ತು ಇದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿಜೆಪಿ ಬಲ ಹೆಚ್ಚಿಸಿಕೊಂಡಿದೆ. ಕಾಂಗ್ರೆಸ್ ಇದ್ದ ಕೈ ಕಳೆದುಕೊಂಡಿದೆ. ಜಾ.ದಳದ ಪ್ರಭಾವ ಹೆಚ್ಚಿದರೂ ಸೀಟು ಗೆಲ್ಲುವಲ್ಲಿ ಮುಗ್ಗರಿಸಿದೆ. ಹಾಗಾಗಿ ಉ.ಕ. ಜಿಲ್ಲೆಯಲ್ಲಿ ಸೌಹಾರ್ದತೆ ರಕ್ಷಿಸಿಕೊಳ್ಳಲು ಜಾತ್ಯತೀತ ಶಕ್ತಿಗಳೆಲ್ಲ ಕಟ್ಟೆಚ್ಚರದಲ್ಲಿ ಇರಬೇಕಾಗಿದೆ. ಈ ಕಾರಣಕ್ಕಾಗಿ ತಮ್ಮೆಲ್ಲರ ಮನಸ್ತಾಪ, ಅಹಂ, ಉದಾಸೀನತೆ, ನಿರ್ಲಕ್ಷ್ಯ ಮರೆತು ಒಂದಾಗಬೇಕೆನ್ನುವ ಕಿವಿಮಾತನ್ನು ಈ ಚುನಾವಣೆ ಹೇಳಿದೆ.

ಕೋಮುವಾದದ ಆಕ್ರಮಣ

ಭಟ್ಕಳ, ಅಂಕೋಲಾ, ಕಾರವಾರ, ಶಿರಸಿ ನಾಲ್ಕು ಕ್ಷೇತ್ರಗಳಲ್ಲಿ ಮತ್ತು ಕೆನರಾ ಲೋಕಸಭಾ ಕ್ಷೇತ್ರವನ್ನು ಬಿಜೆಪಿ ಗೆದ್ದುಕೊಂಡಿದೆ; ಕಳೆದ 3-4 ವರ್ಷಗಳಿಂದ ಕಾರವಾರ, ಭಟ್ಕಳ, ಯಲ್ಲಾಪುರಗಳಲ್ಲಿ ಜಾರಿಗೊಳಿಸಿದ 'ಕೋಮುವಾದಿ ಆಚರಣೆ'ಯ ಫಲ ಈ ಬಾರಿಯ ಚುನಾವಣೆ ಫಲಿತಾಂಶದ ಒಂದು ಕಾರಣವಾದರೆ, ಇವೆಲ್ಲವನ್ನೂ ಕಂಡ ಕಾಂಗೈ ತನ್ನ ಸ್ವಯಂಕೃತ ಅಪರಾಧದಿಂದ ತನ್ನ ನೆಲೆಯನ್ನು ಕಳೆದುಕೊಳ್ಳುವ ಸ್ಥಿತಿ ಬಂದಿದ್ದು ಇನ್ನೊಂದು ಕಾರಣ.

ಕಾಂಗ್ರೆಸ್‌ನ ದಿವಾಳಿತನ

ಉ.ಕ.ದಲ್ಲಿಯ ಬಿಜೆಪಿಯ ಗೆಲುವಿಗೆ ಪ್ರಧಾನ ಕಾರಣ ಕಾಂಗ್ರೆಸ್ ಮತ್ತು ಅವರ ಬೌದ್ಧಿಕ ದಿವಾಳಿತನ - ಜಿಲ್ಲೆಯ ಅಭಿವೃದ್ಧಿಯ ಕಡೆ ಕಾಂಗೈ ಸಂಪೂರ್ಣ ನಿರ್ಲಕ್ಷ್ಯ ತಾಳಿತು. ರಾಜ್ಯ ಸರ್ಕಾರದ ಬೃಹತ್ ಉದ್ದಿಮೆಯ ಸಚಿವರೂ ಮತ್ತು ಜಿಲ್ಲೆಯ ಉಸ್ತುವಾರಿ ಸಚಿವರೂ ಆದ ಆರ್.ವಿ.ದೇಶಪಾಂಡೆಯವರು ಜಿಲ್ಲೆಯಲ್ಲಿ ಹೊಸ ಉದ್ದಿಮೆ ತರುವ ಬದಲು ಇದ್ದ ಉದ್ದಿಮೆಗಳೆಲ್ಲಾ ಬಾಗಿಲು ಮುಚ್ಚತೊಡಗಿದವು. ಅವುಗಳಿಗೆ ಕಾಯಕಲ್ಪ ಕೊಡುವ ಗೋಜಿಗೆ ಹೋಗಲಿಲ್ಲ. ಜನರೆದುರು ಅಧಿಕಾರಿಗಳಿಗೆ ಬಯ್ಯುವುದನ್ನು ಬಿಟ್ಟರೆ ಉಳಿದಂತೆ ಸಾಧನೆ ಶೂನ್ಯ. ಕೇಳಿದರೆ ಪರಿಸರ ವಾದಿಗಳ ಮೇಲೆ ಗೂಬೆ ಕೂರಿಸುವುದು. ಜನವಿರೋಧಿ ನೀತಿಯನ್ನು ಜಾರಿಗೆ ತರುವಾಗ ಯಾವ ಅಡೆತಡೆಯೂ ಇವರಿಗೆ ತಗಲುವುದಿಲ್ಲ. ಆದರೆ ಜನಪರವಾದ ಕೆಲಸ ಮಾಡ ಹೊರಟಾಗ ಮಾತ್ರ ನೆವಮಾತ್ರವಾದ ಅಡೆತಡೆಗಳು ಇವರಿಗೆ ದೊಡ್ಡ ಗೋಡೆಯಾಗಿ ಕಾಣುತ್ತದೆ; ಸಂಸದರೂ ಕೂಡಾ



ಕಾಂಗ್ರೆಸ್, ಜಿ.ಪಂ. ಕೂಡಾ ಕಾಂಗ್ರೆಸ್, ಬಹುತೇಕ ತಾಲೂಕು ಪಂಚಾಯತ್ ಕೂಡಾ ಕಾಂಗ್ರೆಸ್ ಆದರೂ ಯಾಕೆ ಅಭಿವೃದ್ಧಿ ಸಾಧ್ಯ ಆಗಲಿಲ್ಲ? ಯಾಕೆ ಜಿಲ್ಲೆಯಲ್ಲಿ ಭ್ರಷ್ಟಾಚಾರ ತಡೆರಹಿತವಾಗಿ, ಜನಸಾಮಾನ್ಯರ ರಕ್ತ ಹೀರುವಲ್ಲಿ ಜಿಗಣೆಯಾಗತೊಡಗಿದೆ? ಮಾರ್ಗರೆಟ್ ಆಳ್ವ ಅವರು ಜಿಲ್ಲೆಯ ಉದ್ಧಾರಕ್ಕೆ ಕೋಟ್ಯಾಂತರ ರೂಪಾಯಿ ತಂದರೆಂದು ಹೇಳಲಾಗುತ್ತಿದೆ. ಆದರೆ ಇವುಗಳಲ್ಲಿ ಬಹುತೇಕ ಸಂಸದರ ಅಭಿವೃದ್ಧಿಗಾಗಿ ಬಂದ ಹಣವೇ ಹೊರತು ಬೇರೆ ಅಲ್ಲ. 'ಅಂತರ್ರಾಷ್ಟ್ರೀಯ ವ್ಯಕ್ತಿತ್ವ' ಹೊಂದಿರುವ ಮೇಡಂ ಆಳ್ವರವರು ತನ್ನನ್ನು ಆರಿಸಿತಂದ ಜನರೊಂದಿಗೆ ಬೆರೆತಿದ್ದರೆ, ಉದ್ಯೋಗ ಕೊಡುವ ಯೋಜನೆಗಳನ್ನೇನಾದರೂ ತಂದಿದ್ದರೆ ಗೆಲ್ಲಬಹುದಿತ್ತೇನೋ! ಆದರೆ ಹಾಗಾಗಲಿಲ್ಲ.

ಜಿಲ್ಲೆಯಲ್ಲಿ ಅತಿಕ್ರಮಣ ಹೋರಾಟ ಜೋರಾಗಿದ್ದಾಗ ಅದಕ್ಕೆ ಬೆಂಬಲವಾಗಿ ನಿಂತು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಬದಲು ಸ್ವತಃ ತಾವೇ ಸಮಾವೇಶ ಮಾಡಿ, ಬಿರಿಯಾನಿ ತಿನ್ನಿಸಿ ಹೋರಾಟವನ್ನು ಮುರಿಯಲು ಮುಂದಾದರು. ಅಂಗನವಾಡಿ ಕಾರ್ಯ ಕರ್ತೆಯರು ನಮ್ಮನ್ನು ಖಾಯಮಾತಿ ಮಾಡುವಂತೆ ಎರಡೂ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಕೇಳಿದರೆ, 'ಕಾರ್ಯಕರ್ತೆ ಯರನ್ನು ಖಾಯಂ ಮಾಡಿದರೆ ಅವರು ಸೇವಾ ಮನೋಭಾವನೆ ಕಳೆದುಕೊಳ್ಳುತ್ತಾರೆ. ಅವರು ಗೌರವ ಕಾರ್ಯಕರ್ತೆಯರಾಗಿಯೇ ಇರಬೇಕು' ಎನ್ನುವ ಉದ್ಧಟತನದ ಉಪದೇಶ ಮಾಡಿದರು. ಜಿಲ್ಲೆಯ ನಿರಾಶ್ರಿತರು ಹೋರಾಟಕ್ಕಿಳಿದಾಗ, ಮ್ಯಾಂಗನೀಸ್ ಅದಿರಿನ ಹುಡಿ ನಮ್ಮ ಆರೋಗ್ಯವನ್ನು ಹಾನಿ ಮಾಡುತ್ತದೆಂದು ಪ್ರತಿಭಟಿಸಿದಾಗ ಅವರಿಗೆ ಸ್ಪಂದಿಸಲಿಲ್ಲ ತನ್ನ ಮಾತು ಕೇಳುವ ಪ್ರಚಾರಪ್ರಿಯ ಜಿಲ್ಲಾಧಿಕಾರಿ, ಇತರೆ ಅಧಿಕಾರಿಗಳು ಈ ಜಿಲ್ಲೆಗೆ ಬಿಜೆಪಿಯ ನಡುವಿನ ವ್ಯತ್ಯಾಸ ಗೊತ್ತಿಲ್ಲ, ಅದು ಬೇಕಾಗಿಯೂ ಇಲ್ಲ ಎನ್ನುವುದೂ ವಾಸ್ತವ) ಈ ಎರಡು ಪಕ್ಷಗಳ ನಡುವಿನ ವ್ಯತ್ಯಾಸವೆಂದರೆ ಅವರ ಚಿನ್ಹೆಗಳದ್ದು ಮಾತ್ರ ಎಂದು ತಿಳಿದಿದ್ದಾರೆ.

3-4 ವರ್ಷಗಳಿಂದ ಚುನಾವಣಾ ತಯಾರಿಗಾಗಿ ಕೆಳಮಟ್ಟದಲ್ಲಿ ವಿವಿಧ ಮುಖವಾಡಗಳೊಂದಿಗೆ ಕೆಲಸ ಮಾಡುತ್ತಿರುವ ಕೋಮುವಾದಿಗಳು ಕಾಂಗ್ರೆಸ್ ಕೈಯಲ್ಲಿರುವ ಆರ್ಥಿಕ ಮೂಲವನ್ನೇ ಉಪಯೋಗಿಸಿಕೊಂಡು ಸಂಘ ಪರಿವಾರಗಳ ಪ್ರಭಾವದಲ್ಲಿದ್ದ ಸಂಘಟನೆಗಳು ನಡೆಸಿದ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷರಾದ ಶಾಂತಾರಾಮ ಹೆಗಡೆಯವರ, ಅವರ ಸಂಗಡಿಗರ ಹತೋಟಿಯಲ್ಲಿರುವ ಟಿ.ಎಸ್.ಎಸ್., ಕೆ.ಡಿ.ಸಿ.ಸಿ. ಬ್ಯಾಂಕ್, ಇತ್ಯಾದಿಗಳಿಂದ ಹಣ ಒದಗಿಸಿದರು. (ಜಾತ್ಯತೀತ ಶಕ್ತಿಗಳು, ಎಡಪಂಥೀಯರು ಹೋದಾಗ ಇಂತಹ ಸ್ಪಂದನೆ ಇರಲಿಲ್ಲ) ಇವರಿಂದ ಹಣ ಪಡೆದವರು ಇವರ ವಿರುದ್ಧ ಮತ ಹಾಕಿದವರು. ಸ್ವರ್ಣವಲ್ಲಿ ಸ್ವಾಮಿಗಳ ಮಠದಲ್ಲಿ ನಡೆದ ಅನೇಕ ಕಾರ್ಯಕ್ರಮಕ್ಕೆ ಕಾಂಗ್ರೆಸ್‌ನವರು ದಾನಿಗಳು, (ಕೆಡಿಸಿಸಿ, ಟಿಎಸ್‌ಎಸ್ ಇತ್ಯಾದಿ ಸಂಘ ಸಂಸ್ಥೆಗಳೂ ವೈಯಕ್ತಿಕವಾಗಿಯೂ) ಆ ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ನಾಯಕರು ಮಡಿ ಉಟ್ಟು ಕೈ ಕಟ್ಟಿ ಕುಳಿತರು. ಸರ್ಕಾರದ ಪ್ರಭಾವದಲ್ಲಿ ಜನ ಸೇರಿಸಿಕೊಟ್ಟರು. ಆದರೆ ಇಡೀ ತಂಡವೇ ಬಿಜೆಪಿಯ ಪರ ಕೆಲಸ ಮಾಡಿತು. ಶಿಕ್ಷಕರ ತರಬೇತಿ, ಅಂಗನವಾಡಿ ತರಬೇತಿಗಳನ್ನು ಯಲ್ಲಾಪುರದ ಬ್ರಹ್ಮಕುಮಾರಿ ವಿದ್ಯಾಲಯಕ್ಕೆ ವಹಿಸಿದರು. ಅಲ್ಲಿ ದಿನಬೆಳಿಗ್ಗೆ ಆರ್‌ಎಸ್‌ಎಸ್ ನ ಹಾಡು ಹೇಳಿಕೊಟ್ಟರು. ಹೋದವರಲ್ಲಿ ಮುಕ್ಕಾಲುಪಾಲು ಜನ ಕೋಮುವಾದಿ ವಿಚಾರವನ್ನು ತುಂಬಿಕೊಂಡು ಬಂದರು. ಅಂದರೆ ಕಾಂಗ್ರೆಸ್ ಸರ್ಕಾರ, ಕಾಂಗ್ರೆಸ್ ಪಕ್ಷದ ಮಂದಿ ಹಣ ತೊಡಗಿಸಿದರು; ಬಿಜೆಪಿ ಮಂದಿ ಅದರ ಫಲ ಉಂಡರು.

ಇಂತಹ ಸೈದ್ಧಾಂತಿಕ ತಿಳುವಳಿಕೆಯ ಕೊರತೆಯಿಂದಾಗಿಯೇ ಕೆಲವು ಅಭ್ಯರ್ಥಿಗಳು, ಇನ್ನು ಹಲವು ಕಾರ್ಯಕರ್ತರು ವಿಧಾನಸಭೆಗೆ ಕಾಂಗ್ರೆಸ್ಸಿಗೂ ಲೋಕಸಭೆಗೆ ಬಿಜೆಪಿಗೂ ಕೊಡುವಂತೆ (ಸಿಂಗಲ್ ವೋಟ್‌ಸ್ಟ್ರೇಟಜಿ) ಪ್ರಚಾರ ಮಾಡಿದರು. ಈ ಕಾರಣದಿಂದ ಮಾರ್ಗರೇಟ್ ಆಳ್ವಾರವರು 1,71,000 ಕ್ಕಿಂತ ಹೆಚ್ಚು ಅಂತರದಲ್ಲಿ ಸೋತರು ಎಲ್ಲಿಯವರೆಗೆ ಕಾಂಗ್ರೆಸ್ಸಿನಲ್ಲಿ ಇರುವ ಕೋಮುವಾದಿ ತಿಳುವಳಿಕೆಯನ್ನು ಅವರು ಹೋಗಲಾಡಿಸುವುದಿಲ್ಲವೋ ಅಲ್ಲಿಯವರೆಗೆ ಇದೇ ಗತಿ.

ಹಣ ಚೆಲ್ಲಿ ಗೆಲ್ಲುವ ದುರಹಂಕಾರ

ಈ ಕುರಿತು ಅನೇಕ ಸಂದರ್ಭದಲ್ಲಿ ಜಿಲ್ಲೆಯ ಎಡಪಂಥೀಯರು ಈ ಬಗ್ಗೆ ಕಾಂಗ್ರೆಸ್ಸಿಗರ ಗಮನ

ಗೆದ್ದಿದ್ದಲ್ಲ. ಅಭ್ಯರ್ಥಿಯ ಬೋಳೆತನ ಸದಾ... ಹಂಚುವ ಹಣ, ಬಿಜೆಪಿಯಲ್ಲಿದ್ದ ಗೊಂದಲ ಜೆಡಿಎಸ್ ಕಾರ್ಯಕರ್ತರಿಗಿದ್ದ ತರಬೇತಿಯ ಕೊರತೆ... ಇದಕ್ಕೆ ಕಾರಣವಾಯಿತು. ಮೋಹನ ಶೆಟ್ಟರ ಕೆಲ... ಹಿಂಬಾಲಕರ ಕಾರಣದಿಂದಾಗಿ ಬರಬಹುದಾದ... ಒಂದಿಷ್ಟು ಮತವನ್ನು ಅವರು ಕಳೆದುಕೊಂಡರು...

ಬಿಜೆಪಿಗೆ ಹಚ್ಚಿದರು 'ಕೈ'

ಕಾರವಾರದಲ್ಲಿಯ ಬಿಜೆಪಿಯ ಗೆಲುವು ಹೆಚ್... ಅಪಾಯಕಾರಿಯಾದದ್ದು. ಕ್ಷೇತ್ರದಲ್ಲಿ... ಸ್ವತಂತ್ರ್ಯವಾಗಿ 5-10 ಸಾವಿರ... ಮತಗಳಿಸಲಾರದ ಬಿಜೆಪಿ ಇಂದು... ಸ್ಥಾನಗಳಿಸಿಕೊಳ್ಳುವಲ್ಲಿ ಕಾಂಗ್ರೆಸ್ಸಿಗರ ಪಾತ್ರ ತೀರಾ... ಮಹತ್ವದ್ದು. ಎಂದೂ ಜನ ಹೋರಾಟದಲ್ಲಿ... ಪಾಲ್ಗೊಳ್ಳದ, ಕನ್ನಡ ಬಾರದ (ಪ್ರಜಾವಾಣಿ ವರದಿ... ವ್ಯಾಖ್ಯಾನಿಸಿದಂತೆ) ಒಬ್ಬ ವ್ಯಕ್ತಿ ಇಂದು ಕಮಲದ... ಚಿನ್ಹೆಯಡಿ ಕಾಂಗ್ರೆಸ್ಸಿಗರ ಕೈಗಳಿಂದ... ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ಸಿನ ಎಂ.ಎಲ್.ಎ...



ಯಾಗಿರುವ ಶುಭಲತಾ ಅಸ್ನೋಟಿಕರ ಅವರ... ಬೆಂಬಲಿಗರೆಲ್ಲರೂ (ಅಸ್ನೋಟಿಕರರ ಅಭಿಮಾನಿ... ಸಂಘ) ಬಿಜೆಪಿಯ ಪರ ಬಹಿರಂಗವಾಗಿ ಕೆಲಸ... ಮಾಡಿದರು. ಹಾಗಾಗಿ ಗಂಗಾಧರ ಭಟ್ಟ ಅವರನ್ನು... ಕಾಂಗೈ ಎಂ.ಎಲ್.ಎ ಎನ್ನಬೇಕೆ? ಅಥವಾ ಬಿಜೆಪಿ... ಎಂ.ಎಲ್.ಎ. ಎಂದು ಹೇಳಬೇಕೋ ಎನ್ನುವುದೇ... ಗೊಂದಲ. ಗಂಗಾಧರ ಭಟ್ ಅವರ ಹೈಕಮಾಂಡ್... ಬಹುಶಃ ಶುಭಲತಾ ಅಸ್ನೋಟಿಕರ್ ಅವರೇ... ಇರಬೇಕು. (ಸೋಲುತ್ತಾನೆಂದು ಈತನಿಗೆ ಸೀಟು... ಕೊಟ್ಟವಲ್ಲ: ಹೀಗೆ ಆಗುತ್ತದೆಂದರೆ ನಾವೇ... ನಿಲ್ಲಬಹುದಾಗಿತ್ತು ಎಂದು ಕೆಲವು ಬಿಜೆಪಿ... ಹಿರಿಯರು ಈಗ ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ) ಆದರೆ... ಕಾಂಗ್ರೆಸ್ ಈವರೆಗೂ ಇಂತಹ ನಾಚಿಕೆಗೇಡಿನ... ಕ್ರಮದ ಬಗ್ಗೆ ಶಿಸ್ತು ಕ್ರಮ ಕೈಗೊಂಡಿಲ್ಲ... ಕಾರವಾದಂತಹ ಆಯಕಟ್ಟಿನ ಸ್ಥಳ ಬಿಜೆಪಿಯ... ಕೈಸೇರಿದ್ದು ಮಾತ್ರ ಈ ಜಿಲ್ಲೆಯ ದುರಂತ.

ಜೆಡಿ(ಎಸ್) ಶಕ್ತಿ

ಸಿಪಿಎಂ ಪಕ್ಷದೊಂದಿಗೆ ಹೊಂದಾಣಿಕೆ...

ಪುಟ 9 ಕ್ಕೆ


ಕೆನರಾ ಲೋಕಸಭಾ ಕ್ಷೇತ್ರದ ವಿಧಾನ ಸಭಾ ಕ್ಷೇತ್ರಗಳ ಬಿಜೆಪಿ 5 ಸ್ಥಾನ, ಕಾಂಗ್ರೆಸ್ 2, ಪಕ್ಷೇತರ 1 ಸ್ಥಾನಗಳಲ್ಲಿ ಜಯಗಳಿಸಿದ್ದಾರೆ. ಕ್ರಮವಾಗಿ ಶೇ 36.01, 31.60, 6,10 ಗಳಿಸಿದರೆ, ಜನತಾ ದಳ (ಎಸ್)15.22 ಮತ್ತು ಜೆಡಿ(ಯು) 2.10 ರಷ್ಟು ಮತ ಗಳಿಸಿವೆ

ಲೋಕಸಭೆಯಲ್ಲಿ ಬಿಜೆಪಿ ಶೇ 51.94, ಕಾಂಗ್ರೆಸ್ 31.29 ಮತ್ತು ಜೆ.ಡಿ.ಎಸ್8.33 ರಷ್ಟು ಮತ ಗಳಿಸಿವೆ

ಒಂದು ಕಾರಿಗೆ 5 ಕೋಟಿ ರೂ ?

ಈ ಐಷಾರಾಮಿಗಳಿಗೆ ಎಲ್ಲಿಂದ ಬಂತು ಹಣ ?

ಒಂದು ಕಾರಿಗೆ ಐದು ಕೋಟಿ ರೂ., ಮಗಳ ಮದುವೆಗೆ 252 ಕೋಟಿ ರೂಪಾಯಿ ಖರ್ಚು, ತಿಂಗಳಿಗೆ 82 ಲಕ್ಷ ರೂಪಾಯಿ ಸಂಬಳ! ಇದು ಯಾವುದೋ ಶ್ರೀಮಂತ ದೇಶದಲ್ಲಿನ ಸಂಗತಿಯಲ್ಲ. ಬಡ ಭಾರತದ ನೆಲದಲ್ಲಿ ಕಾಣುವ ಧಾರುಣ ಸತ್ಯಗಳು



ಮುಖೇಶ್ ಅಂಬಾನಿ

ಹೌದು ವಿಚಿತ್ರವಾಗಿ ಕಂಡರೂ ಸತ್ಯ. ಒಂದು ಕಾರಿನ ಬೆಲೆ 5 ಕೋಟಿ ರೂಪಾಯಿ! ಆದರೂ ಭಾರತದ 15 ಜನ ಶ್ರೀಮಂತರು ಈ ಕಾರು ಖರೀದಿ ಮಾಡಲು ಮುಂಗಡ ನೀಡಿದ್ದಾರೆ. ಇದೇ ವರ್ಷದ ಅಕ್ಟೋಬರ್ ತಿಂಗಳಲ್ಲಿ ಈ ಕಾರು ಭಾರತದ ಪ್ರಮುಖ ನಗರಗಳ ರಸ್ತೆಗಳಿಗೆ ಬರುತ್ತವೆ. ಜರ್ಮನಿ ಮೂಲದ ಡೈಮ್ಲರ್ ಕ್ರಿಸ್ಲರ್ ಎಂಬ ಕಂಪನಿ ಈ ಕಾರನ್ನು ತಯಾರಿಸುತ್ತಿದ್ದು ಭಾರತದಲ್ಲಿ ಮಾರಾಟ ಆರಂಭಿಸಿದೆ. 5 ಕೋಟಿ ನೀಡಿ ಕಾರು ಖರೀದಿಸುವವರಲ್ಲಿ ಇನ್ನೆಷ್ಟು ಹಣವಿರಬಹುದು? ಬಡಜನರೇ ತುಂಬಿರುವ ಭಾರತದಲ್ಲಿ ಕೆಲವೇ ಮಂದಿ ಶ್ರೀಮಂತರು!

ಇವರಿಗೆ ಇಷ್ಟೊಂದು ಹಣ ಎಲ್ಲಿಂದ ಬರುತ್ತದೆ. 5 ಕೋಟಿ ರೂ.ಗೆ ಕಾರನ್ನು ಕೊಳ್ಳುವ ಈ ಶ್ರೀಮಂತರ ಕಂಪನಿಗಳಲ್ಲಿ ದುಡಿಯುವ ನೌಕರರಿಗೆ ಸಾಕಷ್ಟು ವೇತನ ನೀಡುವದಿಲ್ಲ ಅಥವಾ ಕೆಲಸಗಾರರ ಸಂಖ್ಯೆಯನ್ನು ತೀವ್ರವಾಗಿ ಕಡಿತಗೊಳಿಸುತ್ತಾರೆ. ಆದರೆ ತಾವು ಮಾತ್ರ ಕೋಟಿಗಟ್ಟಲೆ ವೇತನ ಮತ್ತಿತರೆ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ಆ ಮೂಲಕ ಐಷಾರಾಮಿ ಜೀವನ ನಡೆಸುತ್ತಾರೆ.

ಧೀರೂ ಭಾ ಅಂಬಾನಿ - ಭಾರತದ ಕೈಗಾರಿಕೆ ವಲಯಗಳಲ್ಲಿ ಪ್ರಸಿದ್ಧಿ ಪಡೆದ ಹೆಸರು. ಬೀದಿ ಬದಿ ವ್ಯಾಪಾರಿಯಾಗಿದ್ದುಕೊಂಡು 'ಕಷ್ಟಪಟ್ಟು ಮೇಲಕ್ಕೆ ಬಂದವರು' ಎಂಬ ಹೆಗ್ಗಳಿಕೆ. ಒಂದು ಹಂತದವರೆಗೆ ತಮ್ಮ ಶ್ರಮ ಶಕ್ತಿಯ ಮಿಗುತಾಯ ಮೌಲ್ಯದಿಂದ ತಮ್ಮ ಜೀವನಮಟ್ಟ ಹೆಚ್ಚಿಸಿಕೊಳ್ಳುವ ಇವರು, ನಂತರ ಶ್ರೀಮಂತರಾಗುವುದು ತಮ್ಮ ಕೆಲಸಗಾರರ ಶ್ರಮ ಶಕ್ತಿಯಿಂದ, ಅಲ್ಲಿ ಉಂಟಾಗುವ ಮಿಗುತಾಯ ಮೌಲ್ಯದಿಂದ. ಅದರ ಜೊತೆಯಲ್ಲಿ ಬಂಡವಾಳಶಾಹಿ ಆರ್ಥಿಕ ನಿಯಮದ ಇನ್ನಿತರ ನೀತಿಗಳು ಅವರ ಪರವಾಗಿರುತ್ತವೆ.

2001-2002 ರಲ್ಲಿ ಕೆಲವು ಪ್ರಮುಖ ಕಂಪನಿಗಳ ಮುಖ್ಯಸ್ಥರ ವೇತನ ಈ ಕೆಳಗಿನಂತಿತ್ತು.

ಹೆಸರು	ಕಂಪನಿ	ವರ್ಷಕ್ಕೇ ವೇತನ	ತಿಂಗಳಿಗೆ
ಅಂಜಿರೆಡ್ಡಿ	ಡಾ.ರೆಡ್ಡಿ ಲ್ಯಾಬೋರೇಟರೀಸ್	9.85 ಕೋಟಿ ರೂ.	82 ಲಕ್ಷ ರೂ.
ಅನಿಲ್ ಅಂಬಾನಿ	ರಿಲ್ಯಾಯನ್ಸ್ ಇಂಡಸ್ಟ್ರೀಸ್	10 ಕೋಟಿ ರೂ	83 ಲಕ್ಷ ರೂ.
ಮುಖೇಶ್ ಅಂಬಾನಿ	ರಿಲ್ಯಾಯನ್ಸ್ ಇಂಡಸ್ಟ್ರೀಸ್	9.5 ಕೋಟಿ ರೂ.	81 ಲಕ್ಷ ರೂ.
ಬಿ.ಎಲ್.ಮುಂಜಲ್	ಹೀರೋಹೊಂಡಾ	7.57 ಕೋಟಿ ರೂ.	63 ಲಕ್ಷ ರೂ.
ಹೆಚ್.ಎಫ್.ಕೊರಾಕಿವಾಲಾ	ವೊಕಾರ್ಡ್ ಆಸ್ಪತ್ರೆ	3.17 ಕೋಟಿ ರೂ.	26 ಲಕ್ಷ ರೂ.
ಅಜೀಮ್ ಪ್ರೇಮ್‌ಜಿ	ವಿಪ್ರೊ	1.69 ಕೋಟಿ ರೂ.	14 ಲಕ್ಷ ರೂ.
ನಂದನ ನೀಲಕೇಣಿ	ಇನ್‌ಫೋಸಿಸ್	0.20 ಕೋಟಿ ರೂ.	1.7 ಲಕ್ಷ ರೂ.

ಧೀರೂ ಭಾ ಅಂಬಾನಿ ಅವರು ತಮ್ಮ ಕಂಪನಿಯಿಂದ 2001-02 ರಲ್ಲಿ ವರ್ಷಕ್ಕೆ 11.7 ಕೋಟಿ ರೂ. ವೇತನ ಪಡೆಯುತ್ತಿದ್ದರು. (ಇತ್ತೀಚಿಗೆ ಅವರು ನಿಧನರಾಗಿರುತ್ತಾರೆ) ಅಂದರೆ ತಿಂಗಳಿಗೆ ಸಾಧಾರಣ 1 ಕೋಟಿ ರೂ. ಅವರ ಒಬ್ಬ ಮಗ ಮುಖೇಶ್ ಅಂಬಾನಿ 9.5 ಕೋಟಿ ರೂ.ವೇತನ ಪಡೆದಿದ್ದರೆ, ಇನ್ನೊಬ್ಬ ಮಗ ಅನಿಲ್ ಅಂಬಾನಿ 10 ಕೋಟಿ ರೂ. ವೇತನ ಪಡೆದಿರುತ್ತಾರೆ. ಅಂದರೆ ಒಂದೇ ಕುಟುಂಬದ ತಂದೆ, ಮಕ್ಕಳ ಒಟ್ಟು ವೇತನ ವರ್ಷಕ್ಕೆ 31.2 ಕೋಟಿ ರೂ. ತಿಂಗಳಿಗೆ ರೂ.2.5 ಕೋಟಿಗಳಿಗಿಂತಲೂ ಹೆಚ್ಚು. ಈ ವೇತನವಲ್ಲದೆ ಇನ್ನಷ್ಟು ಭತ್ಯೆ, ವಸತಿ ಸೌಕರ್ಯ ಇತ್ಯಾದಿ ಸವಲತ್ತುಗಳನ್ನು ಕಂಪನಿಯಿಂದ ಪಡೆದುಕೊಳ್ಳುತ್ತಾರೆ.



ಲಕ್ಷ್ಮಿ ಮಿತ್ತಲ್

ವಿಪ್ರೊ ಅಧ್ಯಕ್ಷ ಅಜಿಮ್ ಪ್ರೇಮ್‌ಜಿಯವರ ವೇತನ 2000-01 ರಲ್ಲಿ ವರ್ಷಕ್ಕೆ 4.3 ಕೋಟಿ ರೂ. ಇದ್ದದ್ದು, ಕಂಪನಿಯ ಲಾಭ ಕಡಿಮೆ ಆದುದರಿಂದ 2001-02 ರಲ್ಲಿ 1.69 ಕೋಟಿ ರೂ.ಗಳಿಗೆ ಇಳಿದಿತ್ತು.

ಮೇಲೆ ಹೇಳಿದ ಕಂಪನಿಗಳ ಮಾಲಕರು, ಉನ್ನತ ಅಧಿಕಾರಿಗಳು ಅಷ್ಟೊಂದು ವೇತನ ಪಡೆಯುವುದಲ್ಲದೆ, ತಮ್ಮ ಕಂಪನಿಗಳ ಶೇರುಗಳ ರೂಪದಲ್ಲಿಯೂ ಲಾಭಗಳಿಸುತ್ತಾರೆ. ಆದ್ದರಿಂದ ಇನ್‌ಫೋಸಿಸ್ ಕಂಪನಿಯ ಪಾಲುದಾರರು ವೇತನದ ಜತೆಯಲ್ಲಿ ಶೇರುಗಳನ್ನು ಪಡೆಯುತ್ತಾರೆ. ಶೇರುಗಳ ಮೇಲಿನ ಡಿವಿಡೆಂಡ್ ರೂಪದಲ್ಲಿ ಕೋಟ್ಯಾಂತರ ರೂಪಾಯಿ ಗಳಿಸಿದರೆ, ಮಾರುಕಟ್ಟೆಯಲ್ಲಿ ಶೇರುಗಳ ಬೆಲೆ ಹೆಚ್ಚಾದಾಗ, ತಮ್ಮಲ್ಲಿರುವುದನ್ನು ಮಾರುವುದರ ಮೂಲಕ ಹೇರಳಲಾಭ ಗಳಿಸುತ್ತಾರೆ.

ಇಂತಹ ಉದ್ದಿಮೆದಾರರೇ, 5 ಕೋಟಿ ರೂ.ಮೌಲ್ಯದ ಕಾರು ಖರೀದಿಸಲು ಹಾಗೂ ಇನ್ನಿತರ ದುಂದುವೆಚ್ಚಗಳನ್ನು ಮಾಡುವುದು ಸಾಧ್ಯ.

ಭಾರತದ ಪ್ರಧಾನಿಗೆ 1 ಕೋಟಿ ರೂ.ನ 6 ಕಾರುಗಳು! ಜೂನ್ 2 ರ ಹಿಂದೂ ಪತ್ರಿಕೆಯ ಮುಖಪುಟದಲ್ಲಿ ಬಂದ ವರದಿಯ ಪ್ರಕಾರ ಎನ್.ಡಿ.ಎ ಸರಕಾರ ಅಧಿಕಾರದಲ್ಲಿದ್ದ ಕೊನೆಯ ಕೆಲವು ತಿಂಗಳಲ್ಲಿ 1 ಕೋಟಿ ರೂ.ನ 6 ಕಾರುಗಳನ್ನು ಖರೀದಿಸಿತ್ತು. ಗುಂಡು ನಿರೋಧಕ, ಬಾಂಬುನಿರೋಧಕ ಶಕ್ತಿ ಹೊಂದಿರುವ ಕಾರುಗಳು ಭಾರತದಂತಹ ಪ್ರಮುಖ ದೇಶಗಳ ಪ್ರಧಾನಿಗೆ ಖಂಡಿತಾ ಅಗತ್ಯವಿದೆ. ಆದರೆ 6 ಕಾರುಗಳ ಅಗತ್ಯವಿತ್ತೆ? ಒಂದು ಅಥವಾ ಎರಡು ಕಾರುಗಳಿದ್ದರೆ ಸಾಕು. ಭಾರತ ಪ್ರಕಾಶಿಸುತ್ತಿದೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಹಿಂದಿನ ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರ 6 ಕಾರುಗಳನ್ನು ಖರೀದಿಸಿ ಸಾರ್ವಜನಿಕ ಹಣದ ದುರುಪಯೋಗ ನಡೆಸಿದೆ.

ಮಗಳ ಮದುವೆಗೆ 252.6 ಕೋಟಿ ರೂ. ವೆಚ್ಚ!

ಭಾರತೀಯ ಮೂಲದ ಈಗ ಲಂಡನ್‌ನಲ್ಲಿ ವಾಸವಾಗಿರುವ ಲಕ್ಷ್ಮಿ ಮಿತ್ತಲ್ ಉಕ್ಕು ಕೈಗಾರಿಕೆಯಲ್ಲಿ ಜಗತ್ತಿನಲ್ಲೇ ಎರಡನೇ ದೊಡ್ಡ ಉದ್ದಿಮೆದಾರ ಎಂಬ ಹೆಸರುಗಳಿಸಿದ್ದಾರೆ. ಇವರ ಮಗಳ ಮದುವೆ ಜೂನ್ 22 ರಂದು ಪ್ಯಾರೀಸ್‌ನಲ್ಲಿ ನಡೆಯಲಿದೆ ಎಂದು ವರದಿಯಾಗಿದೆ. ಈ ಮದುವೆಗೆ ತಗಲುವ ವೆಚ್ಚ ಎಷ್ಟು ಗೊತ್ತೆ? ಕೇವಲ 252.6 ಕೋಟಿ ರೂ! (30 ಮಿಲಿಯ ಪೌಂಡ್) ಈ ಮಹಾಶಯನ ಮಗನ ಮದುವೆ 4 ವರ್ಷಗಳ ಹಿಂದೆ ಕಲ್ಕತ್ತದಲ್ಲಿ ನಡೆದಿದ್ದು ಆ ಸಂದರ್ಭದಲ್ಲಿ ಜರುಗಿದ ಹೆಸರಾಂತ ಹಿಂದಿ ಚಿತ್ರ ಕಲಾವಿದ ಶಾರೂಖ್ ಖಾನ್‌ರವರ ಡ್ಯಾನ್ಸ್ ಕಾರ್ಯಕ್ರಮ ಒಂದಕ್ಕೆ ಮಾತ್ರವೇ 2.5 ಕೋಟಿ ರೂ. ಖರ್ಚು ಮಾಡಿದ್ದ.

2002 ರಲ್ಲಿ ಬೊಂಬಾಯಿ ಮೂಲದ ವಜ್ರದ ವ್ಯಾಪಾರಿ ವಿಜಯ್‌ಷಹಾ ತನ್ನ ಇಬ್ಬರು ಮಕ್ಕಳ ಮದುವೆಗೆ ಸಾಧಾರಣ 80 ಕೋಟಿ ರೂ. ಖರ್ಚು ಮಾಡಿದ್ದ. ಇತ್ತೀಚೆಗೆ ಸಹರಾ ಸಮೂಹದ ಸುಬ್ರತೊ ರೈ ತನ್ನ ಮಕ್ಕಳಿಗೆ ಲಕ್ನೋದಲ್ಲಿ ಮದುವೆ ಮಾಡಿಸಿದ್ದು ಅಂದಿನ ಪ್ರಧಾನಿ ವಾಜಪೇಯಿ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದ ಈ ಮದುವೆಯಲ್ಲಿ 100 ಕೋಟಿ ರೂ. ಖರ್ಚಾಗಿದೆ ಎಂದು ಅಂದಾಜು ಮಾಡಲಾಗಿದೆ.



ವಜ್ರ ವ್ಯಾಪಾರಿ ವಿಜಯ್ ಷಾಹ ತಮ್ಮ ಮಕ್ಕಳ ಮದುವೆ ಸಂದರ್ಭದಲ್ಲಿ

ಇಷ್ಟೊಂದು ದುಂದುವೆಚ್ಚ ಮಾಡುವ ಉದ್ದಿಮೆದಾರರು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಲೀ, ಬಡ ಜನರ ಏಳಿಗೆಗಾಗಲಿ ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳುವುದಿಲ್ಲ. ಆಳುವ ಬಿಜೆಪಿ-ಕಾಂಗ್ರೆಸ್ ಸರಕಾರಗಳೂ ಸಹ ಅಂತಹ ಉದ್ದಿಮೆದಾರರ ಆದಾಯದ ಮೇಲೆ ತೆರಿಗೆ ಹೆಚ್ಚಿಸುವುದರ ಬದಲಾಗಿ ಅವರಿಗೆ ರಿಯಾಯಿತಿಗಳ ಹೊಳೆಯನ್ನೇ ಹರಿಸುತ್ತಾರೆ.

ಮೇಲೆ ಹೇಳಿದಂತೆ ಕೋಟಿಗಟ್ಟಲೆ ಹಣ ದುಂದುವೆಚ್ಚ ಮಾಡಿದರೂ, ಅವರ ಆಸ್ತಿ ಬೆಳೆಯುತ್ತಲೇ ಹೋಗುತ್ತದೆ. 22 ದೊಡ್ಡ ಮನೆತನಗಳ ಆಸ್ತಿ 1957 ರಲ್ಲಿ 312.63 ಕೋಟಿ ಇದ್ದದ್ದು 1999 ರಲ್ಲಿ 1,58,004.72 ಕೋಟಿ ರೂ.ಗಳಿಗೆ ಏರಿದ್ದು 2001 ರಲ್ಲಿ 2,00,000 ಕೋಟಿ ರೂ. ಗಿಂತ ಹೆಚ್ಚಾಗಿದೆ. ರಿಲೈಯನ್ಸ್ ಸಮೂಹದ ಒಂದೇ ಮನೆತನದ ಆಸ್ತಿ 75 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿದೆ. ಇವರೇ ಸರಕಾರಗಳನ್ನು ನಿಯಂತ್ರಿಸುವ ಭೂಪರು.

ಪ್ರಗತಿಪರ, ಜನಪರ ಚಳುವಳಿ ಮಾತ್ರವೇ ಇಂತಹ ನೀತಿಗಳನ್ನು ಬದಲಿಸಿ ಬಡಜನರ ಬಾಳನ್ನು ಹಸನು ಮಾಡಲು ಸಾಧ್ಯ.

• ಬಾಲಕೃಷ್ಣ ಶೆಟ್ಟಿ

ಉತ್ತರ ಕನ್ನಡ ಚುನಾವಣಾ ಫಲಿತಾಂಶ

ಪುಟ 8 ರಿಂದ

ಮಾಡಿಕೊಂಡಿದ್ದ ಜೆಡಿಎಸ್ ರಾಜ್ಯದಾದ್ಯಂತ ಗಣನೀಯವಾಗಿ ಬೆಳೆದಂತೆ ಜಿಲ್ಲೆಯಲ್ಲಿಯೂ ಗಮನಾರ್ಹ ಪ್ರದರ್ಶನ ನೀಡಿದೆ. ಕುಮಟಾ, ಕಾರವಾರ, ಸಿರ್ಸಿ, ಸಿದ್ದಾಪುರಗಳಲ್ಲಿ ಮತ್ತು ಇತರ ಕ್ಷೇತ್ರದಲ್ಲಿಯೂ ಕೂಡ ಒಂದು ಶಕ್ತಿಯಾಗಿ ಬೆಳೆಯುವ ಆಶಾವಾದ ತೋರಿದೆ. ಕಾರವಾರದಲ್ಲಿ ಪ್ರಭಾಕರ ರಾಣೆ ಗೆದ್ದೇ ಗೆಲ್ಲುತ್ತಾರೆಂದು ಎಲ್ಲಾ ಸಮೀಕ್ಷೆಗಳು ಹೇಳುತ್ತಿರುವಾಗಲೇ ಕಾಂಗ್ರೆಸ್ ಮತ್ತು ಬಿಜೆಪಿಯ ಹೊಂದಾಣಿಕೆ ಹೋರಾಟದಿಂದಾಗಿ ಅವರಿಗೆ ಸೋಲಾಯಿತು. ಅವರು ಜೆಡಿಎಸ್‌ಗೆ ಸೇರಿದ್ದು ತಡವಾಗಿರುವುದರಿಂದ ಚುನಾವಣೆ ತಯಾರಿ ಕಡಿಮೆಯಾಯಿತು; ಜಿಲ್ಲೆಯಲ್ಲಿ ಗಮನ ಸೆಳೆದ ಕ್ಷೇತ್ರ 'ಕುಮಟಾ' - ದಿನಕರ ಶೆಟ್ಟಿಯವರೂ ಕೊನೆಯ ಹಂತದಲ್ಲಿ ಸಂಯುಕ್ತದಳ ತೊರೆದು ಜೆಡಿಎಸ್‌ಗೆ ಬಂದು ಅಭ್ಯರ್ಥಿಯಾದರು. ಪ್ರಬಲ ಪೈಪೋಟಿ ನೀಡಿದರು. ಕುಮಟಾ ತಾಲೂಕಿನಲ್ಲಿ ಅತಿ ಹೆಚ್ಚು ಮತ ಪಡೆದು ಹೊನ್ನಾವರ ತಾಲೂಕಿನಲ್ಲಿ ಮುಗ್ಗರಿಸಿದರು. ಹೊನ್ನಾವರ ತಾಲೂಕಿನಲ್ಲಿ ಅವರ ಸಾರ್ವಜನಿಕ ಜೀವನ ಕಡಿಮೆಯಾಗಿದ್ದು ಒಂದು ಕಾರಣವಾಗಿದ್ದರೆ, ಜೆಡಿಎಸ್‌ನ ಮುಖಂಡರೇ ಬಿಜೆಪಿಗೆ ಸಹಕಾರಿಯಾಗಿದ್ದು ಇನ್ನೊಂದು ಕಾರಣ. ದಿನಕರ ಶೆಟ್ಟರಿಗೆ ಕೈಕೊಟ್ಟಿದ್ದು 'ಸಿಂಗಲ್ ವೋಟ್ ಸ್ಟ್ರಟಜಿ'.

ಉಳಿದ ಕ್ಷೇತ್ರದಲ್ಲೂ ಜೆಡಿಎಸ್‌ನೊಂದಿಗೆ ಜನರಿದ್ದಾರೆ ಎಂದು ತೋರಿಸಿಕೊಟ್ಟಿದೆ. ಈ ಚುನಾವಣೆ; ಅದನ್ನು ಬೆಳೆಸಿಕೊಂಡು ಹೋಗುವ ಕಾರ್ಯಕ್ರಮ ರೂಪಿಸಬೇಕು. ಕಾಂಗ್ರೆಸ್ ಮತ್ತು ಬಿಜೆಪಿ ರಾಜಕೀಯ ಆರ್ಥಿಕ ನೀತಿಗಳೊಂದಿಗೆ ಹೋರಾಟ ಬೆಳೆಸಬೇಕು. ಹಾಗಾದಾಗ ಮುಂದಿನ ಚುನಾವಣೆ ಅವರ ಪಾಲಿಗೆ ಆಶಾದಾಯಕ ಆಗಬಲ್ಲದು.

ಎಡಶಕ್ತಿಗಳ ದೃಢ ಹೆಜ್ಜೆ

ಎಡಪಕ್ಷಗಳು, ಜನ ಸಂಘಟನೆಗಳು ತಮ್ಮ ಮಿತಿಯಲ್ಲಿ ಜಿಲ್ಲೆಯಲ್ಲಿ ಕೆಲಸ ಮಾಡಿದವು. ಭಾರತ ಪ್ರಕಾಶಿಸುತ್ತಿದೆಯೇ? ಮಹಿಳೆಯರು ಬಿಜೆಪಿಗೆ ಯಾಕೆ ಮತಕೊಡಬಾರದು? ಜಾತ್ಯಾತೀತ ಶಕ್ತಿ ಬೆಂಬಲಿಸಿ, ಸಾಹಿತಿ ಬರಹಗಾರರ ಮನವಿ, ಐಕ್ಯರಂಗ ಇತ್ಯಾದಿ ಸಾಹಿತ್ಯವನ್ನು ಅನೇಕ ಕರಪತ್ರಗಳನ್ನು ಜಿಲ್ಲೆಯಾದ್ಯಂತ ಹಂಚಿ ಬಿಜೆಪಿಯ ವಿರುದ್ಧ ಪ್ರಚಾರ ಮಾಡಿದ್ದರೂ ಜಾತ್ಯಾತೀತ ಶಕ್ತಿಗಳು ಅವರ ಪ್ರಯೋಜನ ಪಡೆಯುವಲ್ಲಿ ಎಡವಿದರು. ಮುಂದೆ ಈ ಜಿಲ್ಲೆಯ ಭವಿಷ್ಯದ ದೃಷ್ಟಿಯಿಂದ, ಸೌಹಾರ್ದ ಪರಂಪರೆಯ ದೃಷ್ಟಿಯಿಂದ ಕೋಮುವಾದಿಗಳನ್ನು ಸೋಲಿಸುವಲ್ಲಿ ಪ್ರಜ್ಞಾವಂತರು ಮುಂದಾಗಬೇಕಾಗಿದೆ; ಕಾಂಗ್ರೆಸ್ - ಜೆಡಿಎಸ್ ಈ ಚುನಾವಣೆಯಿಂದ ಪಾಠ ಕಲಿಯುತ್ತಿದೆ ಎಂದು ಜಿಲ್ಲೆ ಆಶಿಸುತ್ತಿದೆ.

ನೈತಿಕ ಪ್ರತಿಭಟನೆ ಪ್ರಬಲ ಅಸ್ತ್ರವಾದಾಗ

ಪುಟ 12 ರಿಂದ

ಪಾಲಾದರು. ಇದೇ ಸಮಯಕ್ಕೆ ಸರಿಯಾಗಿ, ಉಳ್ಳವರ ಪರವಾಗಿರುವ ಬುಷ್ ಸರ್ಕಾರದ ಆರ್ಥಿಕ ನೀತಿಯಿಂದಾಗಿ ಈ ನಿರುದ್ಯೋಗಿಗಳು ಸರಿಯಾದ ಕೆಲಸ, ಊಟ, ವಸತಿ, ಆರೋಗ್ಯ ಸವಲತ್ತುಗಳಿಂದ ವಂಚಿತರಾದರು.

ಕೇವಲ ಹೈಸ್ಕೂಲ್ ತನಕ ಓದಿರುವ ಮೈಕಲ್ ಮೂರ್ ಎಡಪಂಥದಲ್ಲಿ ನಂಬಿಕೆ ಇಟ್ಟುಕೊಂಡಿರುವವರು. ಜನರಲ್ ಮೋಟರ್ಸ್‌ನ ಧಣಿಗಳು ತಮ್ಮ ಕಾರ್‌ಗಳ ತಾಂತ್ರಿಕ ಕೌಶಲ್ಯವನ್ನು ಹೆಚ್ಚಿಸುವುದರಲ್ಲಾಗಲೀ, ಅವುಗಳನ್ನು ಕಡಿಮೆ ಬೆಲೆಗೆ ತಯಾರಿಸುವುದರಲ್ಲಾಗಲೀ ಆಸಕ್ತಿ ತೋರಿಸದೇ ಏಕಾಏಕಿ ತಮ್ಮ ಕಾರ್ಖಾನೆಯನ್ನು ಮುಚ್ಚಿದ್ದು ಮೈಕಲ್ ಮೂರ್‌ರಲ್ಲಿ ರೋಷವನ್ನುಕ್ಕಿಸಿತು.



ಸಿನಿಮಾ ದೃಶ್ಯವೊಂದರಲ್ಲಿ ಮೂರ್

ಸಾವಿರಾರು ಜನರನ್ನು ಹೀಗೇಕೆ ಬೀದಿಪಾಲು ಮಾಡಿದಿರೆಂದು ಜನರಲ್ ಮೋಟರ್ಸ್ ಕಂಪನಿಯ ಚೇರ್ಮನ್ ರೋಜರ್ ಸ್ಮಿತ್‌ರವರನ್ನು ಮುಖಾಮುಖಿ ಪ್ರಶ್ನಿಸಬೇಕೆಂದು ಮೂರ್ ನಿರ್ಧರಿಸಿದರು. ಅಷ್ಟೇ ಅಲ್ಲದೆ ಆ ಭೇಟಿಯನ್ನು ಚಿತ್ರೀಕರಿಸಿದರು ಕೂಡ. ಆನಂತರ, ಜನರಲ್ ಮೋಟರ್ಸ್‌ರಂತಹ ಬಂಡವಾಳಶಾಹಿ ಕಂಪನಿಗಳ ನಿರ್ಧಾರದಿಂದಾಗಿ ಹೇಗೆ ಜನರ ಬದುಕೇ ಡೋಲಾಯಮಾನವಾಗುತ್ತಿದೆ ಎನ್ನುವುದನ್ನು ವಿಮರ್ಶಿಸಿ "ರೋಜರ್ ಅಂಡ್ ಮೀ" ಎಂಬ ಸಾಕ್ಷ್ಯ ಚಿತ್ರವನ್ನು ತಯಾರಿಸಿದರು. ಈ ಚಿತ್ರ ಹಲವಾರು ಪ್ರಶಸ್ತಿಗಳನ್ನು ಪಡೆಯಿತಲ್ಲದೆ, ಮೈಕಲ್ ಮೂರ್‌ರನ್ನು ಕೋಟ್ಯಾಧಿಪತಿಯನ್ನಾಗಿಸಿತು.

ಮೂರ್‌ರವರ ಸಿದ್ಧಾಂತಕ್ಕೆ ತದ್ವಿರುದ್ಧವಾದದ್ದು ಬುಷ್‌ರವರ ಸಾಂಪ್ರದಾಯಿಕ ರಿಪಬ್ಲಿಕನ್ ಪಕ್ಷದ ಸಿದ್ಧಾಂತ. ಉದಾಹರಣೆಗೆ ಮೈಕಲ್ ಮೂರ್ ಅಹಿಂಸಾವಾದವನ್ನು ನಂಬಿದರೆ, ಬುಷ್‌ರವರ ರಿಪಬ್ಲಿಕನ್ ಪಕ್ಷದ ಸಿದ್ಧಾಂತ ಎಂತಹದ್ದೆಂದರೆ ಇವತ್ತು ಅಮೆರಿಕಾದಲ್ಲಿ ಯಾರು ಬೇಕಾದರೂ ಒಂದು ಚಾಕಲೇಟ್ ಕೊಂಡಷ್ಟೇ ಸುಲಭವಾಗಿ ಆಟೋಮೇಟಿಕ್‌ಗನ್‌ಗಳನ್ನು ಕೊಳ್ಳಬಹುದು.

ಬೇಟೆಗೆಂದು, ಆತ್ಮರಕ್ಷಣೆಗೆಂದು, ಮತ್ತಿನ್ನ್ಯಾವುದೋ ಕಾರಣಕ್ಕೆಂದು ಪುಟ್ಟ ರಿವಾಲ್ವರ್‌ನಿಂದ ಹಿಡಿದು ಭಯೋತ್ಪಾದಕರು ಬಳಸುವ ಎಕೆ- 47 ನಂತಹ ಗನ್‌ಗಳೂ ಅಂಗಡಿಗಳಲ್ಲಿ ಲಭ್ಯವಿರುತ್ತವೆ. ಸುಲಭವಾಗಿ ಗನ್‌ಗಳು ಹೀಗೆ ಸಿಗುವುದರ ವಿರುದ್ಧ ಹೋರಾಟಗಳು ಹಲವಾರು ವರ್ಷಗಳಿಂದ ನಡೆಯುತ್ತಿದ್ದರೂ ರಿಪಬ್ಲಿಕನ್ ಪಕ್ಷದ ನೀತಿಯಿಂದಾಗಿ, ಪ್ರಬಲವಾದ ಗನ್ ಮಾಲೀಕರ ಸಂಘಟನೆಯ ಒತ್ತಡದಿಂದಾಗಿ ಮತ್ತು ಇವುಗಳನ್ನು ತಯಾರಿಸುವ ಕಂಪನಿಗಳ ಪ್ರಭಾವದಿಂದಾಗಿ ಯಾವ ಹೋರಾಟವೂ ಯಶಸ್ವಿಯಾಗಿಲ್ಲ. ಅದೇ ಸಮಯಕ್ಕೆ ಈ ಗನ್‌ಗಳಿಂದ ಕೊಲೆಯಾಗುವವರ ಸಂಖ್ಯೆಯೂ ಕಡಿಮೆಯಾಗುತ್ತಿಲ್ಲ.



ಸಿನಿಮಾ ದೃಶ್ಯ

ಒಂದು ಅಂದಾಜಿನ ಪ್ರಕಾರ, ಪ್ರತಿ ಅರ್ಧ ಗಂಟೆಗೆ ಒಬ್ಬ ಅಮೆರಿಕನ್ ಹೀಗೆ ಸುಲಭವಾಗಿ ಮತ್ತು ಕಾನೂನು ಬದ್ಧವಾಗಿ ಸಿಗುವ ಗನ್‌ಗೆ ಬಲಿಯಾಗುತ್ತಾನೆ. ಇವುಗಳಲ್ಲಿ ಗನ್‌ಗಳ ವಿನಾಶಕಾರ ಶಕ್ತಿ ಅರಿಯದೆ ಅವುಗಳೊಂದಿಗೆ ಆಟವಾಡುವ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಅಷ್ಟೇ ಅಲ್ಲದೆ, ಚಿಕ್ಕಮಕ್ಕಳೂ ಇಂತಹ ಗನ್‌ಗಳನ್ನು ತಮ್ಮ ಶಾಲೆಗೆ ಒಯ್ದು ಅಲ್ಲಿ ಹತ್ತಾರು ಸಹಪಾಠಿಗಳ ಮೇಲೆ ಹಾರಿಸಿ ಕೊಂದಿರುವ ದಾರುಣ ಘಟನೆಗಳು ನಡೆಯುತ್ತಿರುತ್ತವೆ.

1999ರಲ್ಲಿ ಒಬ್ಬ ಯುವಕ 14 ಶಾಲಾ ಮಕ್ಕಳನ್ನು ಹೀಗೆ ಕೊಂದಾಗ, ಸಾರ್ವಜನಿಕರು ಶಸ್ತ್ರಾಸ್ತ್ರಗಳನ್ನು ......

'ಬೌಲಿಂಗ್ ಫಾರ್ ಕೋಲಂಬೈನ್' ಎಂಬ ಸಾಕ್ಷ್ಯ ಚಿತ್ರವನ್ನು ಮೈಕಲ್ ಮೂರ್ ನಿರ್ಮಿಸಿ-ನಿರ್ದೇಶಿಸಿದ್ದರು. ಈ ಚಿತ್ರ ಪ್ರಖ್ಯಾತ ಆಸ್ಕರ್ ಪ್ರಶಸ್ತಿಯನ್ನು ಪಡೆಯಿತಲ್ಲದೆ, ಸಾಹುಕಾರರು ಸಾಹುಕಾರರಾಗುತ್ತಲೇ ಇರುವುದನ್ನು ಪ್ರತಿಭಟಿಸುವ ಕೋಟ್ಯಾಧಿಪತಿ ಮೂರ್‌ಗೆ ಮತ್ತಷ್ಟು ಕೋಟಿಗಳ ಲಾಭವನ್ನು ತಂದಿತು! ಅದೇ ವೇಳೆಗೆ ಆದಾಯ ತೆರಿಗೆಯನ್ನು ಬುಷ್ ಕಡಿತಗೊಳಿಸಿದ್ದರಿಂದ ಮೂರ್‌ರವರ ಸಂಪತ್ತು ಮತ್ತಷ್ಟು ಹೆಚ್ಚಿತು!

ಮೂರ್‌ರವರ ಜೀವನದ ವಿಪರ್ಯಾಸಗಳಲ್ಲಿ ಇದೊಂದು ಉದಾಹರಣೆಯಷ್ಟೇ. ಹಿಂದೊಮ್ಮೆ ಬಂಡವಾಳಶಾಹಿಗಳ ವಿರುದ್ಧ ಮೂರ್‌ರವರು ಟೀವಿ ಕಾರ್ಯಕ್ರಮವನ್ನು ತಯಾರಿಸಿದಾಗ, ಅದರ ಪ್ರಾಯೋಜಕರು ಇದೇ ಬಂಡವಾಳ ಶಾಹಿಗಳಾಗಿದ್ದರು. "ಬಂಡವಾಳಶಾಹಿಗಳಲ್ಲಿ ಇರುವ ಒಂದು ಸುಂದರವಾದ ದೋಷ ಯಾವುದೆಂದರೆ ನನ್ನಂತಹವರು ಅವರ... ವಿರೋಧಿಸುವುದರಲ್ಲ... ಅವರಿಗೆ ನಾಲ್ಕು ಪೈ... ಲಾಭ ಸಿಗುತ್ತದೆ ಎಂದ... ಸಾಕು ಅವರು ನನಗು... ಸಹಾಯ ಮಾಡುತ್ತಾ... ಎಂದಿದ್ದರು ಮೂರ್.

ಹೀಗೆ, ಬಂಡವಾ... ಶಾಹಿಗಳನ್ನು ವಿರೋ... ಸುತ್ತಲೇ ಕೋಟ್ಯಾಧಿಪತಿಯಾದ ಮೂರ್, ಈ... ವರ್ಷ ನಡೆಯಲಿರುವ ಚುನಾವಣೆಯಲ್ಲಿ ಬುಷ್... ಸೋಲುವಂತೆ ತನ್ನ ಗಳಿಕೆಯನ್ನು... ಉಪಯೋಗಿಸದಿದ್ದರೆ ಅದು ಅನೈತಿಕವಾಗಿ ಪಡೆ... ಹಣಕ್ಕೆ ಸಮಾನ ಎಂದು ಭಾವಿಸಿದರು. ಅದರ... ಫಲವೇ ಈಗ ಬಿಡುಗಡೆಯಾಗಲಿರುವ... 'ಫರನ್‌ಹೈಟ್ 9/11' ಚಿತ್ರ.

ಬುಷ್ ಸರ್ಕಾರದ ನಿಲುವುಗಳನ್ನು ಖಂಡಿಸಿ... ಈಗಾಗಲೇ 'ಸ್ಟುಪಿಡ್ ವೈಟ್ ಮೇನ್' ಎಂಬ... ಜನಪ್ರಿಯ ಪುಸ್ತಕವನ್ನು ಬರೆದಿರುವ ಮೂರ್ ತಮ್ಮ... ಹೊಸ ಚಿತ್ರದಲ್ಲಿ ಅಮೆರಿಕಾದ ನಿಜವಾದ ವೈ... ಬುಷ್ ಎಂದು ತೋರಿಸಿದ್ದಾರಂತೆ.

ತನ್ನ ಹುಟ್ಟೂರಾದ ಫ್ಲಿಂಟ್‌ನಲ್ಲಿ ಇವತ್ತು ಶೇ... 70 ರಷ್ಟು ಮಕ್ಕಳು ಸರ್ಕಾರ ನಿರ್ಧರಿಸಿರುವ... ಬಡತನದ ರೇಖೆಯ ಕೆಳಗೆ ಬದುಕುತ್ತಿರುವುದಕ್ಕೆ... ಬುಷ್‌ರವರ ಆರ್ಥಿಕ ನೀತಿ ಕಾರಣ ಎನ್ನುವ... ಮೂರ್ "ಭಯೋತ್ಪಾದನೆ ನನ್ನ ಪ್ರಕಾರ... ಯಾವುದೆಂದರೆ ಕಳೆದ ಒಂದು ವರ್ಷದಲ್ಲಿ ಈ... ದೇಶದ ಶೇ.20 ರಷ್ಟು ಜನಸಂಖ್ಯೆಯನ್ನು... ಬೀದಿಪಾಲು ಮಾಡಿರುವುದು; ಅವರನ್ನು... ಹಸಿವಿನಲ್ಲಿ ಇಟ್ಟಿರುವುದು", ಎಂದು ಟೀಕಿಸುತ್ತಾರೆ... "ಒಸಮಾ ಬಿನ್ ಲಾಡೆನ್ ನೂರಾರು ಜನರನ್ನು... ಕೊಂದ ನಿಜ. ಆದರೆ ಇವತ್ತು ಸೂಕ್ತವಾದ... ಆರೋಗ್ಯ ವ್ಯವಸ್ಥೆ ಇಲ್ಲದಿರುವುದರಿಂದ... ಕುಡಿಯುವ ನೀರು ಮತ್ತು ಉಸಿರಾಡುವ ಗಾಳಿ... ಕಲುಷಿತಗೊಂಡಿರುವುದರಿಂದ, ಸುರಕ್ಷಿತವಲ್ಲದ... ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವುದರಿಂದ... ಸಾವಿರಾರು ಅಮೆರಿಕನ್ನರು ಸಾಯುತ್ತಿದ್ದಾರೆ. ಆದ್ದರಿಂದ ಇವತ್ತು ಬುಷ್ ನಿಜವಾಗಲೂ ಈ... ದೇಶದ ವೈರಿ. ಆತನನ್ನು ಅಧ್ಯಕ್ಷ ಸ್ಥಾನದಿಂದ... ಕೆಳಗಿಳಿಸುವುದು ಎಲ್ಲ ಪ್ರಜ್ಞಾವಂತರ... ಗುರಿಯಾಗಬೇಕು", ಎಂದು ಶಪಥ ಗೈದಿದ್ದಾರೆ... ಮೂರ್......

ಕಳೆದ ವರ್ಷ ಇರಾಕ್ ಮೇಲೆ ಅಮೆರಿಕಾ ದಾಳಿ... ಮಾಡಿದಾಗ ಬುಷ್‌ನನ್ನು ಟೀಕಿಸುವುದೇ... ದೇಶದ್ರೋಹ ಎಂಬ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೂ ಆಸ್ಕರ್ ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ... "ಕಾಲ್ಪನಿಕ ಕಾರಣಗಳಿಗೆ ಅಮೆರಿಕಾವನ್ನು ಯುದ್ಧಕ್ಕೆ... ದೂಡಿರುವ ಬುಷ್‌ಗೆ ನಮ್ಮ ವಿರೋಧವಿರಲಿ" ಎಂದು ಘೋಷಿಸಿದ್ದ ಮೂರ್ ಈಗ ಅದನ್ನು... 'ಫರನ್‌ಹೈಟ್ 9/11' ಚಿತ್ರದ ಮೂಲಕ... ತೋರಿಸುತ್ತಿದ್ದಾರೆ.

ಮೂರ್ ವಿರುದ್ಧ ರಿಪಬ್ಲಿಕ್ ಪಕ್ಷದವರು ಈಗಾಗಲೇ ತಮ್ಮ ವಾಗ್ದಾಳಿಯನ್ನು... ಶುರುಮಾಡಿದ್ದಾರೆ. ಆತ ಹುಚ್ಚ, ಪೆದ್ದ, ಮೂರ್ಖ... ಎಂದೆಲ್ಲ ಬಣ್ಣಿಸುತ್ತಿದ್ದಾರೆ. 'ಫರನ್‌ಹೈಟ್ 9/11' ಚಿತ್ರ ಬಿಡುಗಡೆಯಾಗದಂತೆ ಕುತಂತ್ರಗಳನ್ನು... ನಡೆಸಿದ್ದಾರೆ. ಬುಷ್‌ರವರ ಜನಪ್ರಿಯತೆ... ಈಗಾಗಲೇ ಕುಸಿಯುತ್ತಿದ್ದು ಆತ ಮತ್ತೆ ಗೆಲ್ಲುವ... ಸಾಧ್ಯತೆಗಳು ಕಡಿಮೆಯಾಗುತ್ತಿವೆ.

ಈ ಸನ್ನಿವೇಶದಲ್ಲಿ ಮೈಕಲ್ ಮೂರ್‌ರವರ... ಸಾಕ್ಷ್ಯ ಚಿತ್ರ ಎಷ್ಟು ಯಶಸ್ವಿಯಾಗುತ್ತದೆ ಎಂದು... ಹೇಳಲಿಕ್ಕಾಗದಿದ್ದರೂ, ನೈತಿಕತೆಯಲ್ಲಿ ಜನಿಸುವ... ಪ್ರತಿಭಟನೆ ಎಂತಹವರನ್ನೂ ಕಂಗಾಲಾಗಿಸಬಲ್ಲ... ಅಸ್ತ್ರವಾಗುತ್ತದೆ ಎಂಬುದು ಮೂರ್ ಪ್ರಕರಣ... ತೋರಿಸಿದೆ.

- ಗೌರಿ ಲಂಕೇಶ್

ಲಂಕೇಶ್ ಪತ್ರಿಕೆ

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





'ಎಲ್ಲರಿಗೂ ಆರೋಗ್ಯ ಈಗಲೇ'

ಜನಾರೋಗ್ಯಕ್ಕೆ ಜನಾಂದೋಲನ (ಮುಂಬೈ ಘೋಷಣೆ)

ಆರೋಗ್ಯಕ್ಕಾಗಿ ತಾರತಮ್ಯ ಕೊನೆಗೊಳ್ಳಬೇಕು

ಎಲ್ಲರಿಗೂ ಆರೋಗ್ಯ ಮೂಲಭೂತ ಹಕ್ಕು, ಆದರೂ ಆರೋಗ್ಯ ಪಾಲನೆಯಲ್ಲಿ ತಾರತಮ್ಯ ಕಂಡುಬರುತ್ತಿದೆ. ಮಹಿಳೆಯರಿಗೆ ಮೂಲಭೂತ ಆರೋಗ್ಯ ಸೌಕರ್ಯಗಳು ಸಮರ್ಪಕವಾಗಿಲ್ಲ. ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯಿಂದಾಗಿ ಹಾಗೂ ಧಾರ್ಮಿಕ, ಮೂಲಭೂತವಾದದಿಂದ ಕುಟುಂಬಗಳು ಆಪತ್ತಿನಲ್ಲಿವೆ. ಮಹಿಳೆಯ ಲೈಂಗಿಕ ಹಾಗೂ ಸಂತಾನೋತ್ಪತ್ತಿಗೆ ಸಂಬಂಧಿಸಿದ ಹಕ್ಕುಗಳನ್ನು ನಿರಾಕರಿಸಲಾಗಿದೆ. ಕಡ್ಡಾಯ ಸಂತಾನ ನಿಯಂತ್ರಣ, ನೈತಿಕ ಹಕ್ಕನ್ನು ಉಲ್ಲಂಘಿಸದೆ ಲೈಂಗಿಕ ದುರ್ಬಳಕೆಯಿಂದಾಗಿ ಆರೋಗ್ಯಕ್ಕೆ ಧಕ್ಕೆ ಉಂಟಾಗಿದೆ. ತಂತ್ರಜ್ಞಾನದ ದುರ್ಬಳಕೆಯಿಂದಾಗಿ ಲಿಂಗ ನಿರ್ಧಾರ ಗರ್ಭಪಾತಗಳು ಹೆಣ್ಣು ಶಿಶುವಿಗೆ ಮಾರಕವಾಗಿದೆ. ಲೈಂಗಿಕ ಕಾರ್ಯಕರ್ತರ (Sex workers) ಆರೋಗ್ಯದ ಬಗ್ಗೆ, ಸಮಾಜ, ಸರಕಾರ, ಸಂಪೂರ್ಣ ನಿರ್ಲಕ್ಷ್ಯದ ಧೋರಣೆಯನ್ನು ಹೊಂದಿದೆ.

ಮಾನಸಿಕ ರೋಗಿಗಳ ಆರೋಗ್ಯ ಹಾಗೂ ಮಾನವ ಹಕ್ಕುಗಳು ಜಗತ್ತಿನಾದ್ಯಂತ ಕಡೆಗಣಿಸಲ್ಪಟ್ಟಿವೆ. ಈ ಸಮಸ್ಯೆಗೆ ಪರಿಹಾರ ಸಾಮಾಜಿಕ ಆಧಾರಿತ ಕಾರ್ಯಕ್ರಮಗಳು.

ಜಾತಿ ಪದ್ಧತಿ ಹಾಗೂ ಅಸಮಾನ ಸಾಮಾಜಿಕ ವ್ಯವಸ್ಥೆಯಿಂದ ಇಂದು ಕೆಲವರ ಆರೋಗ್ಯ ಕಡೆಗಣಿಸಲ್ಪಟ್ಟಿದೆ. ಮುಂದುವರೆದ ಹಾಗೂ ಮುಂದುವರೆಯುತ್ತಿರುವ ಸ್ಥಳೀಯ ಜನರನ್ನು (Indigenous people) ಸಮಾಜದ ಇತರರಿಗೆ ಹೋಲಿಸಿದಲ್ಲಿ ಆರೋಗ್ಯ ವ್ಯವಸ್ಥೆಗಳಿಂದ ವಂಚಿತರಾಗಿದ್ದಾರೆ. ಅಂಗವಿಕಲರ ಆರೋಗ್ಯ ಹಾಗೂ ಮಾನವ ಹಕ್ಕು ಸಂಹಿತೆಗಳು ಈಗ ಉಲ್ಲಂಘನೆಗೊಂಡಿವೆ.

ವಲಸೆ ಬಂದ ಕೆಲಸಗಾರರು, ಇತರರಿಗೆ ಹೋಲಿಸಿದಲ್ಲಿ ಆರೋಗ್ಯ ಹಾಗೂ ಮೂಲಭೂತ ಮಾನವ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಅವರಿಗೆ ಆರೋಗ್ಯವಲ್ಲದೆ ಶಿಕ್ಷಣ, ವಸತಿ ಸೌಕರ್ಯವೂ ನಿರಾಕರಿಸಲ್ಪಟ್ಟಿದೆ. ಬೀದಿ ಮಕ್ಕಳು, ಏಡ್ಸ್‌ನಿಂದ ಅನಾಥವಾದ ಮಕ್ಕಳು, ಯುದ್ಧದಿಂದ ಅನಾಥರಾದ ಮಕ್ಕಳು ಅಸಹಾಯಕರಾಗಿ ಅಪಾಯದ ಪರಿಸ್ಥಿತಿಯಲ್ಲಿದ್ದಾರೆ. ಜಾಗತೀಕರಣ ಅವರ ಆರೋಗ್ಯದ ಹಾಗೂ ಜೀವನದ ಪ್ರಶ್ನೆಗಳನ್ನು ಆತಂಕಕ್ಕೆ ಒಡ್ಡಿದೆ. ಅಪಾಯಕ್ಕೆ ಒಳಗಾದ, ಅಪಾಯದ ಅಂಚಿನಲ್ಲಿರುವ ಜನಸಮುದಾಯದ ಸಮಾಜಗಳನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸಬೇಕು. 'ನೋಡದೇ ಇದ್ದ' (unseen), 'ಕೇಳದೆ ಇದ್ದ' (unheard) ಜನಸಮುದಾಯಗಳ ಸಮಸ್ಯೆಗಳನ್ನು ಅರಿಯಲು ಪ್ರಯತ್ನ ಮಾಡಬೇಕು ಹಾಗೂ ಅವರ ಆರೋಗ್ಯದ ಬಗ್ಗೆ ಪ್ರಯತ್ನಿಸಬೇಕು.

ಎಲ್ಲರಿಗೂ ಆರೋಗ್ಯ ಸಾಧ್ಯವಿದೆ. ಆರೋಗ್ಯಕರ ಜಗತ್ತು ತಮ್ಮ ಗುರಿಯಾಗಬೇಕು. ವಸಹಾತು ನೀತಿ, ಯುದ್ಧನೀತಿ ಅಸಮಾನತೆ ಉಂಟುಮಾಡುತ್ತದೆ. ಅದನ್ನು ವಿರೋಧಿಸಬೇಕು. ಇದರಿಂದ ಇನ್ನೊಂದು ಜಗತ್ತು ಸಾಧ್ಯ. ಈ ಮೂಲಕ ಜನಾರೋಗ್ಯ ಸನ್ನದಿಗೆ ನಿಮ್ಮ ಬೆಂಬಲ ಸೂಚಿಸಿ.

ಇರಾಕ್‌ಗೆ ಅಧಿಕಾರ ಹಸ್ತಾಂತರದ ಪ್ರಹಸನ

ದಿನಾಲ್ಕು ತಿಂಗಳುಗಳ ನೇರ ಮಿಲಿಟರಿ ಸರ್ವಾಧಿಕಾರದ ನಂತರ ಇರಾಕ್‌ನಲ್ಲಿ ಮೇರಿಕದ ಸರ್ವಾಧಿಕಾರದ ಎರಡನೇ ಅಂಕ ಆರಂಭವಾಗಿದೆ. ಜೂನ್ 30 ರ ಅತ್ತಿ ಅಮೇರಿಕದ ಕೈಗೊಂಬೆಗಳಾದ ನರಸತ್ತ ಕೆಲವು ಇರಾಕಿಗಳಿಗೆ ಅಧಿಕಾರ ಸ್ತಾಂತರ ಮಾಡಲಾಗುವುದು. "ಇರಾಕಿ ಸಾರ್ವಭೌಮತ್ವದ 'ಹಸ್ತಾಂತರ' " ಂಬುದು ಇದಕ್ಕೆ ಸಾಮ್ರಾಜ್ಯಶಾಹಿಯ ಹೊಸ ಹಾಸ್ಯಾಸ್ಪದ ನಾಮಕರಣ. ವಿಶ್ವಸಂಸ್ಥೆ ದ್ರತಾ ಸಮಿತಿ ಮತ್ತು ಮಹಾಕಾರ್ಯದ ಪುನಃ ಅಮೇರಿಕಕ್ಕೆ 'ಜೀ ಹುಕುಂ' ಹೇಳಿದ್ದು ರಂತ. ಆದರೆ ಇರಾಕಿ ಜನತೆ ಈ ಪ್ರಹಸನ ನಡೆಯಗೊಡುವುದಿಲ್ಲ. ಇರಾಕ್ ಮೇರಿಕದ 'ಇನ್ನೊಂದು ವಿಯೆಟ್ನಾಮ್' ಆಗುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ.

ಅಮೆರಿಕನ್ ಸರ್ವಾಧಿಕಾರ-ಎರಡನೇ ಅಂಕ

ಅಮೇರಿಕನ್ ಸಾಮ್ರಾಜ್ಯಶಾಹಿಯ ಲಿಟರಿ ಸರ್ವಾಧಿಕಾರಿಗೆ ಎಲ್ಲಾ ಇರಾಕಿ ನವಿಭಾಗಗಳು ತೋರಿದ ಪೂರ್ಣ ತಿರೋಧದಿಂದಾಗಿ, ಬುಶ್ ಸರ್ಕಾರ ಶ್ವಸಂಸ್ಥೆಯ ಮೊರೆ ಹೋಗಬೇಕಾಯಿತು. ಶ್‌ಗೆ ತನ್ನ ದೇಶದಲ್ಲಿ ಮಾನ ಳಿಸಿಕೊಳ್ಳಲು ಚುನಾವಣೆಗೆ ಹಾಯಕವಾಗುವಂತೆ ಅಮೇರಿಕನ್ ಮಿಲಿಟರಿ ರ್ವಾಧಿಕಾರಕ್ಕೆ ಇನ್ನೊಂದು ಹೆಸರು ಡಬೇಕಾಗಿದೆ. ಎಂದಿನಂತೆ ರದೃಷ್ಟವಶಾತ್ ವಿಶ್ವಸಂಸ್ಥೆ ಭದ್ರತಾ ಸಮಿತಿ ತ್ತು ಮಹಾ ಕಾರ್ದರ್ಶಿ ಅಮೇರಿಕನ್ ರ್ಕಾರಕ್ಕೆ 'ಜೀ ಹುಕುಂ' ಎಂದಿದ್ದಾರೆ. ಇರಾಕಿಗೆ ಶ್ವಸಂಸ್ಥೆ ಪ್ರತಿನಿಧಿ ಲಬ್‌ದರ್ ಬ್ರಾಹಿಮಿ ಸಲಾಯಿತು. ಆತ ಅಮೇರಿಕನ್ನರಿಗೆ ನುಕೂಲಕರವಾಗಿರುವ ಇರಾಕಿಗಳ ಡುಕಾಟದಲ್ಲಿದ್ದ. ಈ ನಡುವೆ ಭದ್ರತಾ ಮಿತಿ 'ಸಾರ್ವಭೌಮತ್ವ ಹಸ್ತಾಂತರ'ಕ್ಕೆ ಒಪ್ಪಿ, ಮೇಕನ್ ಮಿಲಿಟರಿ ನಾಯಕತ್ವದಲ್ಲಿ ಹುರಾಷ್ಟ್ರೀಯ' ಮಿಲಿಟರಿ ಪಡೆ ಂದುವರೆಯಲು ಅನುಮತಿ ನೀಡಿದೆ. ದರರ್ಥ ಇರಾಕ್‌ನಲ್ಲಿ ಮಿಲಿಟರಿ ಸ್ಥಿತಿಯಲ್ಲಿ ಾವುದೇ ಬದಲಾವಣೆ ಆಗುವುದಿಲ್ಲ. ಮೇರಿಕಾದ ಕೈಗೊಂಬೆ ಸರ್ಕಾರಕ್ಕೆ ಇರಾಕಿ ುಖವಾಡ ತೊಡುವ ಪ್ರಹಸನ ಡೆಸಲಾಗುತ್ತಿದೆ.

ಜೂನ್ 30 ರಂದು ಅಧಿಕಾರ ಹಿಸಿಕೊಳ್ಳಲಿರುವ 'ಇರಾಕಿ ಸರ್ಕಾರ'ವನ್ನು ರಿಸಿದ ಮತ್ತು ಘೋಷಿಸಿದ ರೀತಿಯೇ ಲ್ಲರಿಗೂ ತಿಳಿಯಪಡಿಸುವಂತಿತ್ತು. ವಿಶ್ವಸಂಸ್ಥೆ ತಿನಿಧಿ ಇರಾಕಿ ಪ್ರಧಾನಿ ಹುಡುಕುತ್ತಿದ್ದಂತೆ, ಗ ಇರಾಕಿನ ಅಮೇರಿಕನ್ ಪ್ರತಿನಿಧಿ ಪಾಲ್ ಮೆರ್ ತನ್ನ ಆಯ್ಕೆ ಪ್ರಕಟಿಸಿಯಾಗಿತ್ತು. ಮೆರ್ ಆರಿಸಿದ 'ಪ್ರಧಾನಿ' ಇಯಾರ್ ಲಾವಿ, ಅಮೇರಿಕನ್ನರು ಕಳೆದ ವರ್ಷ ಪಿಸಿದ 'ಕೈಗೊಂಬೆ' 'ಗವರ್ನಿಂಗ್ ಕೌನ್ಸಿಲ್'ನ ದಸ್ಯ. ಆತನೇ ಒಪ್ಪಿಕೊಂಡಿರುವಂತೆ ಹಿಂದೆ ಐಎ ಮತ್ತು ಎಂಐಬಿ (ಅಮೇರಿಕ ಮತ್ತು ರಾಕಿ ಗೂಢಾಚಾರ ಸಂಸ್ಥೆ)ಗಳ ಏಜೆಂಟ್. ಐಎ ಹಿಂದೆ ಆತನನ್ನು ತನ್ನ 'ಆಸ್ತಿ' ಎಂದು ರೆದಿತ್ತು. ಪಾಲ್ ಬ್ರೆಮೆರ್‌ನ ಈ ಆಯ್ಕೆ ಮತ್ತು ಆಯ್ಕೆಯ ರೀತಿ ವಿಶ್ವಸಂಸ್ಥೆ ಮಹಾಕಾರ್ಯದರ್ಶಿಯನ್ನು ರೇಗಿಸಲಿಲ್ಲ. ಆದರೆ ವಿಶ್ವಸಂಸ್ಥೆ ಪ್ರತಿನಿಧಿ ಬ್ರಾಹಿಮಿಯನ್ನಂತೂ ರೇಗಿಸಿತ್ತು. ಬ್ರೆಮೆರ್ ಇರಾಕಿನ ಸರ್ವಾಧಿಕಾರಿ. ಆತನು ಬಯಸಿದ್ದು ಮಾತ್ರ ಈ ದೇಶದಲ್ಲಿ ನಡೆಯುವುದು ಎಂದು ಮೂದಲಿಸಿತು.

ಈ 'ಮಧ್ಯಂತರ' ಸರ್ಕಾರಕ್ಕೆ ಒಬ್ಬ ಅಧ್ಯಕ್ಷನಿರುತ್ತಾನೆ. ಇಬ್ಬರು ಉಪಾಧ್ಯಕ್ಷರಿರುತ್ತಾರೆ. ಅಧ್ಯಕ್ಷ ಪದವಿ ಅಲಂಕಾರಕ್ಕೆ. ಅಧ್ಯಕ್ಷ ಪದವಿಗೂ ಈಗಿನ ಕೈಗೊಂಬೆ 'ಗವರ್ನಿಂಗ್ ಕೌನ್ಸಿಲ್'ನಿಂದಲೇ ಆಯ್ಕೆ ಮಾಡಿದ್ದು. ಶೇಕ್ ಗಾಜಿ ಅಲ್-ಯವರ್ ಎಂಬಾತ ಅಧ್ಯಕ್ಷ. ಪ್ರಧಾನಿಯಲ್ಲದೆ ಈ ಸರ್ಕಾರದಲ್ಲಿ 27 ಜನ ಮಂತ್ರಿಗಳಿರುತ್ತಾರೆ. ಆದರೆ ಅವರ ಆಯ್ಕೆ ಮಾಡಿದ್ದು ಇರಾಕಿ 'ಸರ್ವಾಧಿಕಾರಿ' ಪಾಲ್ ಬ್ರೆಮೆರ್ ಮತ್ತು ಕೈಗೊಂಬೆ 'ಗವರ್ನಿಂಗ್ ಕೌನ್ಸಿಲ್'. ಇರಾಕಿ ಸಮಾಜದ ಯಾವುದೇ ಜನವಿಭಾಗಗಳನ್ನು ಪ್ರತಿನಿಧಿಸುವ ಯಾವುದೇ ಸ್ವತಂತ್ರ ವ್ಯಕ್ತಿಗಳಿಲ್ಲ, ಈ ಮಧ್ಯಂತರ ಸರ್ಕಾರ ಜನವರಿ 2006 ರವರೆಗೆ ಇರುತ್ತದೆ. ಆಮೇಲೆ ಚುನಾವಣೆ ಆಧಾರದ ಮೇಲೆ ಹೊಸ ಸರ್ಕಾರ ರಚಿಸುವ ಯೋಜನೆ ಇದೆ.



ಈ 'ಮಧ್ಯಂತರ' ಸರ್ಕಾರ ಸ್ಥಾಪಿಸುವ ಪ್ರಹಸನ ಮಧ್ಯೆ, ಅಮೇರಿಕ ಸರ್ಕಾರದ ಮಾನ ಕಳೆಯುವ ಇನ್ನೊಂದು ಉಪಕಥೆ ನಡೆದು ಹೋಗಿದೆ. ಅದು ಹಿಂದೆ ಅಮೇರಿಕದ ಆಪ್ತಮಿತ್ರ ಅಹಮದ್ ಛಲಾಬಿಯ ಪತನ. ಈತ ಒಂದು ಕಾಲದಲ್ಲಿ ಪೆಂಟಗಾನ್ (ಅಮೇರಿಕದ ಮಿಲಿಟರಿ ವ್ಯವಸ್ಥೆ) ಮತ್ತು ಸಿಐಎ (ಗೂಢಚಾರ ಸಂಸ್ಥೆ) ಎರಡಕ್ಕೂ ಬೇಕಾಗಿದ್ದವ. ಅಮೇರಿಕದ ಕೈಗೊಂಬೆ ಸರ್ಕಾರದ ಮುಖ್ಯಸ್ಥನಾಗುವವ ಎಂದು ಎಲ್ಲರೂ ಅಂದುಕೊಂಡಿದ್ದ ಭೂಪ. ಈತ ಪ್ರತಿತಿಂಗಳು ಮೂರುವರೆ ಕೋಟಿ ಡಾಲರು ಸಂಬಳ ಸಿಐಎನಿಂದ ಪಡೆಯುತ್ತಿದ್ದ. ಈತನ ಇರಾಕಿ ನ್ಯಾಶನಲ್ ಕಾಂಗ್ರೆಸ್ ಈವರೆಗೆ ಅಮೇರಿಕನ್ ಸರ್ಕಾರದಿಂದ ಮೂರುವರೆ ಕೋಟಿ ಧನ ಸಹಾಯ ನುಂಗಿ ನೀರು ಕುಡಿದಿದೆ. ಇಂತಹ ಭೂಪ ರಾತ್ರೋರಾತ್ರಿ 'ವಿಲ್ಲನ್' ಆಗಿಬಿಟ್ಟ. ಆತನ ಗಿಂಬಳ ನಿಲ್ಲಿಸಲಾಯಿತು. ಆತನ ಆಫೀಸು, ಮನೆಗಳಿಗೆಲ್ಲಾ ದಾಳಿ ಮಾಡಲಾಯಿತು. ಆತನ ಮತ್ತು ಆತನ ಸಂಘಟನೆಯ 'ಕ್ರಿಮಿನಲ್ ಚಟುವಟಿಕೆ' ಬಗ್ಗೆ ತನಿಖೆ ಮಾಡಲು ಆರಂಭಿಸಿತು. ಆತ ಇರಾನ್‌ಗೆ ಗುಪ್ತ ಮಾಹಿತಿ ಕೊಡುತ್ತಿದ್ದಾನೆ ಎಂಬ ಆಪಾದನೆ ಮಾಡಲಾಯಿತು. ಆದರೆ ಛಲಾಬಿಯ 'ಅಪರಾಧ'ವಾದರೂ ಏನು. ಆತ ಅಮೆರಿಕನ್ನರಿಂದ ಸ್ವತಂತ್ರವಾಗಿ ತನ್ನ 'ನೆಲೆ' ಬೆಳೆಸಿಕೊಳ್ಳಬೇಕು. ಬರಿಯ ಅಮೆರಿಕನ್ನರ ಮೇಲೆ ಅವಲಂಬಿಸದೆ, ತನ್ನ ಸ್ವಂತ ನೆಲೆ ಮಾಡಿಕೊಳ್ಳಬೇಕು ಎಂದು ಪ್ರಯತ್ನಿಸಿದ. ಹಲವು ಶಿಯಾ ನಾಯಕರ ಜತೆ ಸಂಪರ್ಕ ಬೆಳೆಸಿದ್ದು ಮಾತ್ರವಲ್ಲ, ಅವರಲ್ಲಿ ಕೆಲವರನ್ನು ನಾಯಕತ್ವಕ್ಕೆ ಸೂಚಿಸಲು ಆರಂಭಿಸಿದ್ದ. ಆತನ 'ಸ್ವತಂತ್ರ' ಚಟುವಟಿಕೆ ಅಮೆರಿಕನ್ನರನ್ನು ಕೆರಳಿಸಿದೆ. ಇದೇ ಸಾಕು ಬುಶ್‌ನ ಈ 'ಹಸ್ತಾಂತರದ' ಪ್ರಹಸನ ಬಗ್ಗೆ ಅರ್ಥೈಸಲು.

ಬುಶ್ ಈ ಪ್ರಹಸನ ನಡೆಸುತ್ತಿದ್ದಂತೆ, ಅಮೆರಿಕನ್ ಸರ್ವಾಧಿಕಾರದ ವಿರುದ್ಧ ಪ್ರತಿರೋಧ ತೀವ್ರವಾಗಿದೆ. ಅಬು ಘೈರೈಬ್ ಜೈಲಿನಲ್ಲಿ ಇರಾಕಿ ಕೈದಿಗಳ ಮೇಲೆ ಅಮೆರಿಕನ್ ಸೈನ್ಯ ನಡೆಸುತ್ತಿದ್ದ ಅತ್ಯಾಚಾರದ ಚಿತ್ರಗಳು ಇರಾಕಿಗಳನ್ನು ಬಹುವಾಗಿ ಕೆರಳಿಸಿವೆ. ಇರಾಕಿಗಳ ಬಗ್ಗೆ ಅಮೆರಿಕನ್ನರ ನಿಜವಾದ ಧೋರಣೆ ಬಯಲಾಗಿದೆ. ಸಿಐಎ ಮುಖ್ಯಸ್ಥ ಜಾಜ್ ಟೆನೆಟ್‌ನನ್ನು 'ಬಲಿಪಶು' ಮಾಡಿ ಆತನ ರಾಜಿನಾಮೆಯಿಂದ ಈ ಬಿಕ್ಕಟ್ಟಿನಿಂದ ಹೊರಬರುವ ಪ್ರಯತ್ನ ವಿಫಲವಾಗಿದೆ. ಬುಶ್‌ಗೆ ಇನ್ನೊಂದು ಬಾರಿ ಅಧ್ಯಕ್ಷತೆ ಕೊಡುವ ಬಗ್ಗೆ ಬೆಂಬಲ ಕುಸಿಯುತ್ತ ನಡೆದಿದೆ. ಇರಾಕ್ ಯುದ್ಧದ ಬಗ್ಗೆ ಬುಶ್ ಸರ್ಕಾರ ಬೆಂಬಲಿಸಿದ್ದ ನ್ಯೂಯಾರ್ಕ್ ಟೈಮ್ಸ್ ಇರಾಕ್‌ಗೆ ಸಾರ್ವಭೌಮತ್ವದ ಈ ಯೋಜನೆಯಲ್ಲಿ ಹುರುಳಿಲ್ಲ ಎಂದಿದೆ.

ಇರಾಕಿ ಸರ್ಕಾರ ಉತ್ತರದಲ್ಲಿ ಸುನ್ನಿ, ದಕ್ಷಿಣದಲ್ಲಿ ಶಿಯಾಗಳ ತೀವ್ರ ದಂಗೆ ಎದುರಿಸಬೇಕಾಗಿದೆ. ಫಲುಜಾದಲ್ಲಿ 600 ನಾಗರಿಕರನ್ನು ಕೊಂದ ನಂತರವೂ, ಕದನವಿರಾಮ ಮಾಡಿ ಹಿಂದೆ ಬರಬೇಕಾಯಿತು. ಅಮೆರಿಕಾದ ವಿರುದ್ಧ ಹೋರಾಟ ನಡೆಸುತ್ತಿರುವ ಗೆರಿಲ್ಲಾಗಳನ್ನು ಹತ್ತಿಕ್ಕಲು ಸಾಧ್ಯವಾಗಿಲ್ಲ. ಅದೇ ರೀತಿ ದಕ್ಷಿಣದ ನಝಾಫ್‌ನಲ್ಲೂ ಶಿಯಾ ಧರ್ಮಗುರು ಮುಕ್ತಾದಾ-ಅಲ್-ಸದಕ್ ಮತ್ತು ಆತನ ಮಹದಿ ಗೆರಿಲ್ಲಾಗಳನ್ನು ಹತ್ತಿಕ್ಕದೆ, ವಾರಗಳ ಕಾದಾಟದ ನಂತರ ಕಾಲ್ತೆಗೆಯಬೇಕಾಯಿತು. 'ಅಧಿಕೃತ ಯುದ್ಧ' ಮುಗಿದ ನಂತರ 690 ಅಮೆರಿಕನ್ ಸೈನಿಕರೂ, 110 ಇತರ ಅಮೆರಿಕನ್ 'ಮಿತ್ರದೇಶ' ಗಳ ಸೈನಿಕರು ಸತ್ತಿದ್ದಾರೆ.

ಅಮೆರಿಕನ್ ಸರ್ವಾಧಿಕಾರದ ಈ ಎರಡನೇ ಹಂತದಲ್ಲಿ, ಸರ್ಕಾರ ಬಹಳ ದುರ್ಬಲವಾಗಿರುತ್ತದೆ. ಪ್ರತಿರೋಧ ಏರುತ್ತಾ ತಾರಕಕ್ಕೆ ಹೋಗುತ್ತದೆ. ಅಮೆರಿಕದ ಕಂಪನಿಗಳಿಗೆ ಇರಾಕನ್ನು ಮಾರಾಟ ಮಾಡುವ



ಮತ್ತು ಅಮೆರಿಕನ್ ಕಂಪನಿಗಳಿಗೆ ಖಾಸಗಿ 'ಬಾಡಿಗೆ' ಸೈನಿಕರಿಂದ ರಕ್ಷಣೆ ಕೊಡುವ ಯೋಜನೆ ಸಹ ವಿಫಲವಾಗಿದೆ. ಇರಾಕಿ ಗೆರಿಲ್ಲಾಗಳು ಬಾಡಿಗೆ ಸೈನಿಕರ ಮೇಲೆ ಧಾಳಿ ಹೆಚ್ಚಿಸಿದ್ದಾರೆ.

ಅಮೆರಿಕನ್ ಒತ್ತಡದಿಂದ ಮಂಜೂರಾದ ಭದ್ರತಾ ಸಮಿತಿ ನಿರ್ಣಯದಿಂದಲೂ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಅಮೆರಿಕದ ಕೈಗೊಂಬೆ ಸರ್ಕಾರಕ್ಕೆ ಅಮೆರಿಕನ್ ಸೈನ್ಯ ಇರಾಕ್‌ನಲ್ಲಿದೆ ಎಂಬುದು ಇಡೀ ಇರಾಕ್ ಜನತೆಗೆ ಗೊತ್ತಿದೆ. ಸರ್ಕಾರಕ್ಕೆ, ಸೈನ್ಯಕ್ಕೆ ಬೇರೆ ಹೆಸರು ಕೊಡುವುದರಿಂದ ಪರಿಸ್ಥಿತಿ ಬದಲಾಗುವುದಿಲ್ಲ.

ಇರಾಕೀ ಪ್ರತಿರೋಧ, 21ನೇ ಶತಮಾನದಲ್ಲೂ 20ನೇ ಶತಮಾನದ ಮಹಾನ್ ಅನುಭವ ನಿಜವಾಗುವುದೆ ಎಂದು ತೋರಿಸಿಕೊಟ್ಟಿದೆ. ಎಷ್ಟೇ ಮಹಾನ್ ಮಿಲಿಟರಿ ಬಲ ಇದ್ದರೂ, ಜನತೆಯನ್ನು ಬಲಪ್ರಯೋಗದಿಂದ ಮಾತ್ರ ದಮನ ಮಾಡಲು ಸಾಧ್ಯವಿಲ್ಲ. ಜನ ಎದ್ದು ನಿಂತಾಗ ಯಾವ ಮಿಲಿಟರಿ ಬಲವೂ ಸಾಲುವುದಿಲ್ಲ. ಇದೇ 20ನೇ ಶತಮಾನದಲ್ಲಿ ಮನುಕುಲದ ಅನುಭವವಾಗಿತ್ತು. ಒಂದೇ ಶತಮಾನದಲ್ಲಿ ಎರಡು ಭೀಕರ ಮಹಾಯುದ್ಧಗಳು, ಹಲವು ದೇಶಗಳಲ್ಲಿ 'ಫ್ಯಾಸಿಸ್ಟ್' ಸರ್ಕಾರ ಬಂದಿತ್ತು. ಆದರೆ ಉತ್ತರಾರ್ಧದಲ್ಲಿ ಜನತೆಯ ಹೋರಾಟಗಳು ಅವನ್ನೆಲ್ಲಾ ಹಿಮ್ಮೆಟ್ಟಿಸಿ ಪ್ರಗತಿ ಸಾಧಿಸಿದವು. ಇದನ್ನು ಇರಾಕಿ ಜನತೆ ಸೋಲಿಸಲಿದ್ದಾರೆ.

ಇರಾಕಿ ಜನತೆ ಹೋರಾಟ ತೀವ್ರವಾದ, ದೀರ್ಘವಾದ ಹೋರಾಟವಾಗಿರುತ್ತದೆ. ಇದಕ್ಕೆ ಎಲ್ಲಾ ಶಾಂತಿಪ್ರಿಯ ಜನತೆಯ ಸೌಹಾರ್ದ ಬೆಂಬಲ ಬೇಕಾಗುತ್ತದೆ. ಇರಾಕಿಗೆ ಭಾರತ ಸೈನ್ಯ ಕಳಿಸುವುದಿಲ್ಲ ಮಾತ್ರವಲ್ಲ, ಅಲ್ಲಿ ಅಮೆರಿಕದ ಸರ್ವಾಧಿಕಾರದ ಸಕ್ರಿಯವಾಗಿ ವಿರೋಧಿಸುವ ನೀತಿ ಅನುಸರಿಸಬೇಕು.

ನಟವರ್ ಸಿಂಗ್ ಅಪಸ್ವರ

ಹೊಸ ವಿದೇಶಿ ಮಂತ್ರಿ ನಟವರ್ ಸಿಂಗ್ ವಾಷಿಂಗ್ಟನ್ ಭೇಟಿ ಸಮಯದಲ್ಲಿ ಇರಾಕ್‌ಗೆ ಭಾರತ ಸೈನ್ಯ ಕಳಿಸುವ ಬಗ್ಗೆ ಮರು ವಿಶ್ಲೇಷಣೆ ಮಾಡಲಾಗುವುದು. ವಿಶ್ವಸಂಸ್ಥೆ ನಿರ್ಣಯದ ನಂತರ ಪರಿಸ್ಥಿತಿ ಬದಲಾಗಿದೆ ಎಂದಿದ್ದಾರೆ. ಇದನ್ನು ಸಿಪಿಐ(ಎಂ)-ಎಡಪಕ್ಷಗಳು ಬಲವಾಗಿ ಖಂಡಿಸಿವೆ. ಮೂಲಭೂತ ಪರಿಸ್ಥಿತಿ ಬದಲಾಗಿಲ್ಲ ಎಂದಿವೆ.

ನೈತಿಕ ಪ್ರತಿಭಟನೆ ಪ್ರಬಲ ಅಸ್ತ್ರವಾದಾಗ



'ಫಾರನ್ ಹೀಟ್ 9/11' ಖ್ಯಾತ ನಿರ್ದೇಶಕ ಮೈಕೆಲ್ ಮೂರ್‌ನ ಸಾಕ್ಷ್ಯ ಚಿತ್ರ. ಅಮೆರಿಕಾದ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಶ್ ಸರ್ಕಾರ ಇರಾಕ್ ಮೇಲಿನ ಆಕ್ರಮಣವನ್ನು ತೆರೆದು ತೋರಿಸುವ ವಿಡಂಬನಾತ್ಮಕ ಚಿತ್ರ. ಪ್ರಶಸ್ತಿ ಪಡೆದ ಈ ಚಿತ್ರ ಪ್ರದರ್ಶನಗೊಳ್ಳದಂತೆ ತಡೆಯಲು ನಡೆದ ಹುನ್ನಾರಗಳೂ ಅನೇಕ. ಎಲ್ಲಾ ಅಡೆತಡೆಗಳನ್ನು ಮೀರಿ ಇದೀಗ ಚಿತ್ರ ಪ್ರದರ್ಶನಕ್ಕೆ ಸಿದ್ಧವಾಗಿದೆ. ಅಮೆರಿಕಾದಾದ್ಯಂತ ಬಿರುಗಾಳಿ ಎಬ್ಬಿಸುವ ಮುನ್ಸೂಚನೆ ಇದೆ. ಇದು ಬುಶ್‌ಗೆ ನುಂಗಲಾರದ ತುತ್ತು, ಗಂಟಲಿಗೆ ಬಿದ್ದ ಗಾಳ... ಇಂತಹ ಮಹತ್ವದ ಬಗ್ಗೆ ಹಾಗೂ ಸಂದರ್ಭಗಳ ಬಗ್ಗೆ ಒಳನೋಟ ಒದಗಿಸುವ ಖ್ಯಾತ ಪತ್ರಕರ್ತೆ ಗೌರಿ ಲಂಕೇಶರ ವಿಶಿಷ್ಟ ಲೇಖನವಿಲ್ಲಿ ಹಾಗೂ ಶರತ್‌ಚಂದ್ರರ ಮಹತ್ವದ ಮಾಹಿತಿಗಳೂ ಕೂಡಾ...

ಇರಾಕ್ ಮೇಲೆ ಅಮೆರಿಕಾ ಮಾಡಿದ ದಾಳಿಯನ್ನು ಖಂಡಿಸುವ ಈ ಚಿತ್ರ ಅಮೆರಿಕಾ ಅಧ್ಯಕ್ಷ ಜಾರ್ಜ್ ಬುಷ್‌ನನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಅಮೆರಿಕನ್ನರಿಗೆ ಸುಳ್ಳು ಹೇಳಿದ್ದಲ್ಲದೆ, ಅವರನ್ನು ದಾರಿ ತಪ್ಪಿಸಿ ಯುದ್ಧಕ್ಕೆ ಪ್ರೇರೇಪಿಸಿದ್ದು, ಆ ಯುದ್ಧಕ್ಕೆ ಬೇಕಿದ್ದ ಆಯುಧಗಳನ್ನು ಸರಬರಾಜು ಮಾಡಿ ಬುಷ್‌ನ ಓಡ್ಡೋಲಗ ಅಪಾರ ಹಣ ಗಳಿಸಿದ್ದು, 500ಕ್ಕೂ ಹೆಚ್ಚು ಅಮೇರಿಕನ್ ಸೈನಿಕರ ಸಾವುಗಳಿಗೆ ಕಾರಣವಾಗಿದ್ದು... ಈ ಸಾಕ್ಷ್ಯ ಚಿತ್ರದ ಕೇಂದ್ರವಸ್ತು.

ಇದರ ನಿರ್ದೇಶಕ ಮೈಕಲ್ ಮೂರ್. ಅಪಾರ ಸಿಟ್ಟಿನ ಮನುಷ್ಯ. ಆದರೆ ಆತ ಈ ಸಿಟ್ಟನ್ನು ವ್ಯಕ್ತಪಡಿಸುವುದು ವಿಡಂಬನಾತ್ಮಕ ಲೇಖನಗಳಲ್ಲಿ, ಹಾಸ್ಯಮಯ ಭಾಷಣಗಳಲ್ಲಿ ಮತ್ತು ವಿಮರ್ಶಾತ್ಮಕ ಸಾಕ್ಷ್ಯ ಚಿತ್ರಗಳ ಮೂಲಕ. ಇವತ್ತು ಜಾರ್ಜ್ ಬುಷ್‌ನನ್ನು ಚುನಾವಣೆಗಳಲ್ಲಿ ಜಾಕ್ ಕೆರ್ರಿ ಎದುರಿಸುತ್ತಿದ್ದರೆ, ಆತನನ್ನು ನೈತಿಕವಾಗಿ ಪ್ರಶ್ನಿಸುತ್ತಿರುವವರು ಈ ಮೈಕಲ್ ಮೂರ್.

ಮೂರ್‌ನ ಹುಟ್ಟೂರಾದ ಫ್ಲಿಂಟ್ ಇರುವುದು ಮಿಚಿಗನ್ ಎಂಬ ರಾಜ್ಯದಲ್ಲಿ. ಭೌಗೋಳಿಕವಾಗಿ ಮಿಚಿಗನ್ ಅಮೆರಿಕಾ ದೇಶದ ಉತ್ತರ ಪ್ರದೇಶದಲ್ಲಿದ್ದರೂ ಅದು ಸಾಂಸ್ಕೃತಿಕವಾಗಿ ಆ ದೇಶದ ಹೃದಯ ಭಾಗವಿದ್ದಂತೆ. ನೂರಾರು ವರ್ಷಗಳಿಂದ ಅಮೆರಿಕಾದ ಕೃಷಿ ಮತ್ತು ಕೈಗಾರಿಕೆಯ ರಾಜಧಾನಿಯಂತಿದ್ದ ಮಿಚಿಗನ್

> "ಮೂರ್‌ನ 'ಫ್ಯಾರನ್‌ಹೀಟ್ 9/11' ಬುಶ್ ಅಧ್ಯಕ್ಷಗಿರಿಯನ್ನು ಸಾವಿರ ವಿಡಂಬನಾತ್ಮಕ ಹೋಳುಗಳನ್ನಾಗಿ ಮಾಡಿದೆ."
> **- ವಾಶಿಂಗ್ಟನ್ ಪೋಸ್ಟ್ ವಿಮರ್ಶೆ**

ರಾಜ್ಯ ಇತ್ತೀಚಿಗೆ ಕಳೆಗುಂದುತ್ತಿದೆ.

ಈಗ ಕೃಷಿಗೆ ಅಮೆರಿಕಾ ಸರ್ಕಾರ ಹೆಚ್ಚು ಒತ್ತು ಕೊಡುತ್ತಿಲ್ಲದಿರುವುದರಿಂದ ಮಿಚಿಗನ್ ರಾಜ್ಯದ ಹೊಲಗಳು ಪಾಳು ಬಿದ್ದಿವೆ.ಅದೇ ಸಮಯಕ್ಕೆ ವಿದೇಶಿ ವಸ್ತುಗಳು ಅಗ್ಗವಾಗಿ ಲಭ್ಯವಾಗುತ್ತಿರುವುದರಿಂದ ಅಲ್ಲಿನ ಕೈಗಾರಿಕೆಗಳೂ ಬಾಗಿಲು ಮುಚ್ಚುತ್ತಿವೆ.

ಇದೇ ರಾಜ್ಯದ ಪ್ರಮುಖ ನಗರವಾಗಿರುವ ಡೇಟ್ರಾಯಿಟ್‌ನಲ್ಲಿ ಹೆಚ್ಚಾಗಿ ಕಾರ್‌ಗಳನ್ನು ಮತ ಅವುಗಳಿಗೆ ಬೇಕಿರುವ ಟೈರ್ ಮತ ಬಿಡಿಭಾಗಗಳನ್ನು ತಯಾರಿಸುವ ಕಾರ್ಖಾನೆಗಳ ಇದ್ದವು. ಆದರೆ ಈಗ ಜಪಾನ್ ಮತ್ತು ಕೊರಿಯ ದೇಶಗಳು ತಯಾರಿಸುವ ಕಾರ್‌ಗಳ ತಾಂತ್ರಿಕವಾಗಿ ಅಮೆರಿಕಾದ ಕಾರ್‌ಗಳಿಗಿಂತಲು ಉತ್ತಮವಾಗಿರುತ್ತವಲ್ಲದೆ ಅವು ಅಲ್ಲಿ ತಯಾರಾ ಕಾರ್‌ಗಳಿಗಿಂತಲೂ ಕಡಿಮೆ ಬೆಲೆಗೆ ಸಿಗುತ್ತವ ಈ ಕಾರಣಗಳಿಂದಾಗಿ ಡೇಟ್ರಾಯಿಟ್‌ನಲ್ಲಿ ಜನರಲ್ ಮೋಟರ್ಸ್ ಕಂಪನಿ ನಷ್ಟವನ ಅನುಭವಿಸಿ ತನ್ನ ಬಾಗಿಲನ್ನು ಮುಚ್ಚಿತು ಅದರೊಂದಿಗೆ ಆ ರಾಜ್ಯದಲ್ಲಿದ್ದ ಬಿಡಿ ಭಾಗಗಳನ ತಯಾರಿಸುತ್ತಿದ್ದ ಕೈಗಾರಿಕೆಗಳೂ ಮುಚ್ಚಿದವು. ಆ ಮೈಕಲ್ ಮೂರ್ ಮನೆಯವರೂ ಸೇರಿದಂ ಮಿಚಿಗನ್ ರಾಜ್ಯದಲ್ಲಿ ಸಾವಿರಾರು ಜನ

ಪುಟ 10 ನೋಡಿ

ಆ ತಾಯಿಯ ಮಗ ದೂರದ ದೇಶವೊಂದರಲ್ಲಿ ಯುದ್ಧದಲ್ಲಿ ತೊಡಗಿದ್ದಾನೆ. ಆತನಿಗೆ ಗೊತ್ತಿಲ್ಲದಿರುವ, ಸಂಬಂಧವಿಲ್ಲದಿರುವ ದೇಶ ಅದು. ಹಾಗೆ ನೋಡಿದರೆ, ಆತನ ದೇಶಕ್ಕೂ ಆತ ಯುದ್ಧವಾಡುತ್ತಿರುವ ದೇಶಕ್ಕೂ ಯಾವುದೇ ಸಂಬಂಧವಿಲ್ಲ. ಆದರೂ ಆತ ಕೊಲ್ಲಬೇಕಿದೆ; ವೈರಿಗಳಿಂದ ಕೊಲ್ಲಲ್ಪಟ್ಟ ಮಿತ್ರರ ಹಣಗಳನ್ನು ನೋಡಬೇಕಿದೆ, "ನಾವು ಇಲ್ಲಿ ಯಾವ ಪುರುಷಾರ್ಥಕ್ಕಾಗಿ ಕಳುಹಿಸ್ಪಟ್ಟಿದ್ದೀವೆ ಅಂತಲೇ ಅರ್ಥವಾಗುತ್ತಿಲ್ಲ. ನನಗೆ ರೋಷ ಉಕ್ಕಿ ಬರುತ್ತಿದೆ ಅಮ್ಮ", ಎಂದು ಆ ಯುವಕ ತನ್ನ ತಾಯಿಗೆ ಪತ್ರವೊಂದನ್ನು ಬರೆಯುತ್ತಾನೆ.

ಆ ಪತ್ರ ಆಕೆಯ ಕೈ ಸೇರುವ ಮುನ್ನವೇ ಆ ಯುವ ಸೈನಿಕ ವೈರಿಗಳ ಬಂದೂಕಿಗೆ ಸಿಕ್ಕು ಸಾವನ್ನಪ್ಪುತ್ತಾನೆ. ಮಗನ ಹೆಣದೊಂದಿಗೆ ಆತನ ಕೊನೆಯ ಪತ್ರವೂ ತಾಯಿಯನ್ನು ತಲುಪುತ್ತದೆ. ದೇಶ ಪ್ರೇಮ, ದೇಶ ಸೇವೆ, ದೇಶದ ಸುಭದ್ರತೆಯ ಹೆಸರಲ್ಲಿ ತನ್ನ ಮುಗ್ಧ ಮಗನನ್ನು ಕಳೆದುಕೊಂಡ ತಾಯಿಗೆ ದಿಗ್ಭ್ರಮೆಯಾಗುತ್ತದೆ. ಆಕೆ ಕಣ್ಣೀರಿಡುತ್ತಾ ತನ್ನನ ಮಗನ ಕೊನೆ ಪತ್ರವನ್ನು ಓದುತ್ತಿರುವ ದೃಶ್ಯ 'ಫರನ್‌ಹೈಟ್ 9/11' ಎಂಬ ಸಾಕ್ಷ್ಯ ಚಿತ್ರದಲ್ಲಿದೆ.

ಇತ್ತೀಚಿಗೆ ಕಾನ್‌ನಲ್ಲಿ ಪ್ರತಿಷ್ಠಿತ ಪಾಮ್ ದಿ ಓರ್ ಪ್ರಶಸ್ತಿ ಪಡೆದ, ಇದೇ ತಿಂಗಳ ಕೊನೆಯಲ್ಲಿ ಅಮೆರಿಕಾದಾದ್ಯಂತ ಬಿಡುಗಡೆಯಾಗುತ್ತಿರುವ ಈ 'ಫರನ್‌ಹೈಟ್ 9/11' ಚಿತ್ರವನ್ನು ನಿರ್ದೇಶಿಸಿರುವವರು ಮೈಕಲ್ ಮೂರ್.

ಸಿನಿಮಾ

ಫ್ಯಾರನ್‌ಹೀಟ್ 9/11

ಮೈಕೆಲ್ ಮೂರ್‌ನ ಸಾಕ್ಷ್ಯಚಿತ್ರ ಅಧ್ಯಕ್ಷ ಬುಶ್‌ನನ್ನು ಪುನಃ ಆಯ್ಕೆ ಮಾಡಬೇಡಿ ಎಂದು ಸಾರುವ ಚಿತ್ರ. ಆದರೆ ಅದನ್ನು ಹೇಳುವ ರೀತಿ ಎಷ್ಟು ಕಲಾತ್ಮಕವಾಗಿದೆಯೆಂದರೆ ಕ್ಯಾನೆ ಫಿಲಂ ಉತ್ಸವದಲ್ಲಿ ಅತ್ಯುತ್ತಮ ಸಾಕ್ಷ್ಯಚಿತ್ರ ಎಂಬ ಪ್ರಶಸ್ತಿ ಬಂದಿದೆ. ಚಿತ್ರದಲ್ಲಿ ನೇರ ಪುರಾವೆಗಳು, ಆಸಕ್ತಿಕಾರಕ ಹೊಸ ಮಾಹಿತಿ, ಮನ ಮಿಡಿಯುವ ದೃಶ್ಯಗಳು ಮತ್ತು ರಾಜಕೀಯ ಸಿದ್ಧಾಂತಗಳ ಪ್ರತಿಪಾದನೆಗಳ ಮಿಶ್ರಣ ಇದೆ. ವಿಡಂಬನೆಗೆ ಜಗತ್‌ಪ್ರಸಿದ್ಧ ಮೂರ್‌ನ ಶೈಲಿಯೇ ಅದ್ವಿತೀಯ.

ಚಿತ್ರ 2000 ಬುಶ್ ಚುನಾವಣಾ ಅಕ್ರಮದಿಂದಲೇ ಆರಂಭವಾಗುತ್ತದೆ. ಎಲ್ಲಾ ಚಾನಲ್‌ಗಳು ಅಲ್ ಗೋರ್ ಗೆದ್ದ ಎಂದು ಪ್ರಸಾರ ಮಾಡುತ್ತಿರುವಾಗ, ಫಾಕ್ಸ್ ಚಾನಲ್‌ನಲ್ಲಿ 'ಬುಶ್ ಗೆದ್ದ' ಎಂಬ ಸುದ್ದಿ ಪ್ರಸಾರಕ್ಕೆ ಕಾರಣ ಬುಶ್ ಸೋದರ ಸಂಬಂಧಿ- ಇಂತಹ ಆಸಕ್ತಿಕಾರಕ ಅಂಶ.

ಸೆಪ್ಟೆಂಬರ್11 ರಂದು ಎರಡನೇ ವಿಮಾನ ಟ್ರೇಡ್ ಸೆಂಟರ್ ಕಟ್ಟಡವನ್ನು ಅಪ್ಪಳಿಸಿದ ಸುದ್ದಿ ತಿಳಿದ ಮೇಲೂ, ಸ್ಕೂಲ್ ಒಂದರಲ್ಲಿ 10 ನಿಮಿಷಗಳ ಕಾಲ ಮಕ್ಕಳ ಜತೆ ಪುಸ್ತಕ ಓದುವುದರಲ್ಲಿ ಮಗ್ನರಾಗಿದ್ದ ದೃಶ್ಯ ಚಿತ್ರದಲ್ಲಿ ಬರುತ್ತದೆ.

ಬುಶ್-ಬಿನ್ ಲಾಡೆನ್ ನಡುವಣ ಗುಪ್ತ ಸಂಬಂಧಗಳನ್ನು ಅತ್ಯಂತ ಆಸಕ್ತಿಕಾರಕ ಮತ್ತು ವಿಸ್ಫೋಟಕ ಅಂಶಗಳು ಇವೆ.

ಸೆಪ್ಟೆಂಬರ್ 11 ರ ದುರಂತದ ಮುಂದಿನ ಕೆಲವು ದಿನಗಳಲ್ಲಿ ಒಸಮಾ ಬಿನ್ ಲಾಡೆನ್‌ನ 24 ಸಂಬಂಧಿಗಳು ಅಮೆರಿಕ ಬಿಟ್ಟು ಹೋಗಲು ಖಾಸಗಿ ವಿಮಾನಗಳನ್ನು ಬಳಸಿದರು. ವಿಮಾನಯಾನ ಇನ್ನೂ ಆರಂಭವಾಗಿರದ ದಿನಗಳಲ್ಲಿ ಇದು ಬುಶ್ ಸರ್ಕಾರದ ಹದ್ದಿನ ಕಣ್ಣಿಗೆ ಬೀಳದೆ ಇದ್ದಿತೆ? ಇದು ಬುಶ್-ಲಾಡೆನ್ ಶಾಮೀಲಾಗಿದ್ದರಿಂದ ಏಕಾಗಬಾರದು?

ಬುಶ್‌ನ ಕುಂಟಿಕೊಂಡು ನಡೆಯುತ್ತಿದ್ದ ಕಂಪನಿಗಳಲ್ಲಿ (ತೈಲ ಮತ್ತು ಶಸ್ತ್ರಾಸ್ತ್ರ) ಬಿನ್ ಲಾಡೆನ್ ಮತ್ತು ಇತರ ಸೌದಿ ಕುಟುಂಬಗಳು ಭಾರಿ ಬಂಡವಾಳ ಹೂಡಿದ್ದವು. ಈ ಕಂಪನಿಗಳು ಸೆಪ್ಟೆಂಬರ್ 11 ರ ದುರಂತದ ನಂತರ ಭಾರಿ ಕಾಂಟ್ರಾಕ್ಟ್ ಪಡೆದ ಕಂಪನಿಗಳು ಎಂಬುದು ಕಾಕತಾಳೀಯವಲ್ಲ. ಬಿನ್ ಲಾಡೆನ್ ಮತ್ತು ಇತರ ಸೌದಿಗಳು ಈ ಬಂಡವಾಳ ಹೂಡಿಕೆ ಮಾಡಿದ್ದು ಬುಶ್ ಜತೆ ಮಿಲಿಟರಿ ಸೇನೆಯಲ್ಲಿದ್ದ ಗೆಳೆಯನ ಮೂಲಕ. ಆತ ಬಿನ್ ಲಾಡೆನ್ ಕುಟುಂಬಕ್ಕೆ ವಿಮಾನಗಳನ್ನು ಮಾರಿದ್ದ.

ಬುಶ್‌ನ ಇರಾಕ್ ದುಸ್ಸಾಹಸದಲ್ಲಿ ಮಡಿದ ಅಮೆರಿಕನ್ ಸೈನಿಕರ ಕುಟುಂಬಗಳ ಜತೆ ಸಂದರ್ಶನ ಮನಮಿಡಿಯುವುದು. ಮೂರ್‌ನ ತವರೂರು ಫ್ಲಿಂಟ್‌ನಲ್ಲಿ ಹದಿಹರೆಯದ ಯುವಕರನ್ನು ಸೈನ್ಯಕ್ಕೆ ಒತ್ತಾಯದಿಂದ ಸೇರಿಸುವ ದೃಶ್ಯದೊಂದಿಗೆ, ಮೂರ್ ಸ್ವತಃ ಎಲ್ಲಾ ಸೆನೆಟರ್ ತಮ್ಮ ಮಕ್ಕಳನ್ನು ಇರಾಕ್‌ಗೆ ಯುದ್ಧಕ್ಕೆ ಕಳಿಸಬೇಕು ಎಂದು ಒತ್ತಾಯ ಮಾಡುವಾಗ ಅವರ ಮುಜುಗರ - ಮೂರ್‌ನ ವಿಶಿಷ್ಟ ವಿಡಂಬನಾ ಶೈಲಿ ರಾರಾಜಿಸುತ್ತದೆ. ಒಬ್ಬ ಸೆನೆಟರ್‌ನ ಮಗ ಮಾತ್ರ ಇರಾಕ್‌ನಲ್ಲಿ ಯುದ್ಧ ಮಾಡುತ್ತಿದ್ದಾನೆ ಎಂಬುದು ಮಾಹಿತಿ ಮಾತ್ರ ಆಗುವುದಿಲ್ಲ.

ಮೂರ್‌ನ ಫಿಲಂನ ಹೀಟ್ ತಡೆಯಲಾಗದ ಡಿಸ್ನಿ

ಮೂರ್‌ನ ಫಿಲಂ ಕ್ಯಾನೆ ಫಿಲಂ ಉತ್ಸವಕ್ಕೆ ಹೋಗದಂತೆ ಬುಶ್ ಅಮೆರಿಕನ್ ಆಡಳಿತ ಯಂತ್ರ, ಮತ್ತು ಅದರ ಬಾಲಬಡುಕರು ಬಹಳ ಪ್ರಯತ್ನಿಸಿದರು. ಆ ನಂತರ ಫಿಲಂಗೆ ಪ್ರಶಸ್ತಿ ಸಿಗದಂತೆ ಪ್ರಯತ್ನಿಸಿದರು. ಇದು ಸಾಧ್ಯವಾಗದೆ ಹೋದಾಗ, ಪ್ರಶಸ್ತಿ ಸಮಿತಿ 'ರಾಜಕೀಯ' ಮಾಡಿದೆ ಎಂದು ರಾಡಿ ಎಬ್ಬಿಸಲು ಪ್ರಯತ್ನಿಸಿದರು ಹಲವು ಅಮೆರಿಕನ್ನರು ಇರುವ ಪ್ರಶಸ್ತಿ ಸಮಿತಿ ಫಿಲಂ ಅದರ ಸತ್ವದಿಂದ ಆಯ್ಕೆಯಾಗಿರುವುದು, ಅದರ ರಾಜಕೀಯ ಧೋರಣೆಯಿಂದಲ್ಲ - ಎಂದು ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ವಿಶೇಷವಾಗಿ ವೇದಿಕೆಗೆ ಬಂದು ಹೇಳಿದಾಗ ಈ ಬುಶ್ ಕೂಟಕ್ಕೆ ಮುಖಭಂಗವಾಗಿದೆ. ಪ್ರಶಸ್ತಿ ಸಮಿತಿ ಅಧ್ಯಕ್ಷ ವೇದಿಕೆಯ ಮೇಲೆ ಬಂದು ತಮ್ಮ ನಿರ್ಧಾರ ಸಮರ್ಥಿಸಿಕೊಳ್ಳುವುದು ಚಾರಿತ್ರಿಕ. ಆ ನಂತರ ಫಿಲಂ ಅಮೆರಿಕದಲ್ಲಿ ಬಿಡುಗಡೆಯಾಗದಂತೆ ತಡೆಯುವ ಪ್ರಯತ್ನ ನಡೆಯಿತು. ಫಿಲಂನ್ನು ತಯಾರಿಸುವ ಮಿರಾಫ್ಯಾಕ್ಸ್ ಸ್ಟುಡಿಯೋದ ಮೂಲಕ ಡಿಸ್ನಿ, ಫಿಲಂನ್ನು ಬಿಡುಗಡೆ ಮಾಡದಿರಲು ನಿರ್ಧರಿಸಿತು.

ಆದರೆ ಮೂರ್‌ನ ಜನಪ್ರಿಯತೆ, ಕ್ಯಾನೆ ಪ್ರಶಸ್ತಿಯ ಪ್ರತಿಷ್ಠೆಯಿಂದ, ಮೂರ್ ಇನ್ನೊಂದು ಫಿಲಂ ವಿತರಣಾ ಕಂಪನಿ ಈ ಫಿಲಂನ್ನು ಕೊಂಡುಕೊಂಡು ವಿತರಣೆ ಮಾಡಲಿದೆ. ಜೂನ್ 25ರಂದು ಅಮೆರಿಕದಾದ್ಯಂತ ಫಿಲಂ ಬಿಡುಗಡೆಯಾಗಲಿದೆ.

ಫಿಲಂ 'ಸೂಪರ್‌ಹಿಟ್' ಆಗುವ ಲಕ್ಷಣಗಳಿವೆ. ಅದು ಬುಶ್‌ನ ಅಧ್ಯಕ್ಷ - ಪುನರಾಯ್ಕೆ ವಿಫಲ ಆಗುವುದನ್ನು ಖಚಿತಪಡಿಸು ವಲ್ಲಿ ಪ್ರಮುಖ ಪಾತ್ರವಹಿಸಬಹುದು ಎಂಬ ಅಂದಾಜು.

ಅಮೆರಿಕದ ಆಳುವ ವರ್ಗಗಳ 'ಮಾಧ್ಯಮ-ಬಲ' ಮಾಧ್ಯಮದ ಮೂಲಕವೇ ಸವಾಲು ಹಾಕುವುದು ಅತ್ಯಂತ ಹರ್ಷದಾಯಕ ಸಕಾರಾತ್ಮಕ ಬೆಳವಣಿಗೆ.

- ಶರತ್‌ಚಂದ್ರ



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH